ಸಂಪುಟ 15
ಸಂಚಿಕೆ 11

ಐಕ್ಯರಂಗ

21 ಮಾರ್ಚ್ 1993
ರೂ. 2.00

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಡಿ. 6 ಹರಿಬಿಟ್ಟ ರಾಕ್ಷಸೀ ಶಕ್ತಿ

ಬಾಂಬೆಯಲ್ಲಿ ಮತ್ತೆ ಭುಗಿಲು

ಒಂದೇ ದಿನದಲ್ಲಿ 250 ಕ್ಕೂ ಹೆಚ್ಚು ಸಾವು

ಜಿ.ಎನ್. ನಾಗರಾಜ್

ಬಾಂಬೆಯಲ್ಲಿ ಮತ್ತೆ ಸೈತಾನನ ಅವಾತನೆ ಇಡೀ ಪ್ರಪಂಚ ಕಂಡು ಕೇಳರಿಯಂತಹ ರೀತಿಯ ಅಮಾನುಷ ರಾಕ್ಷಸೀ ಕೃತ್ಯಗಳು ಡಿ. 6 ರಂದು ಹರಿಬಿಟ್ಟ ಆ ಸೈತಾನ ಇಂದು ತಾಂಡವ ನೃತ್ಯವಾಡುತ್ತಿದ್ದಾನೆ. ಇಡೀ ದೇಶದೆಲ್ಲೆಡೆ ಯಾವ ಗಳಿಗೆಯಲ್ಲಿ ಏನಾಗುವುದೋ ಎಂಬ ಭಯ ಸದಾ ತಲೆಯ ಮೇಲೆ ಕತ್ತಿ ನೇತಾಡುತ್ತಲೇ ಇರುವ ಆತಂಕ, ಎಲ್ಲೆಡೆ ಗಾಬರಿ ಹುಟ್ಟಿಸುವ ಬಾಂಬ್ ಘಟನೆಗಳು.

ಮಧ್ಯಾಹ್ನ 12-30 ಗಂಟೆಗೆ ತನ್ನ ಕಗ್ಗೊಲೆಯ ಸರಣಿಯನ್ನು ಆರಂಭಿಸಿದ ರಾಕ್ಷಸೀ ಶಕ್ತಿ ನಾಲ್ಕು ಗಂಟೆಯವರೆಗೆ. ಒಂದಾದ ಮೇಲೊಂದರಂತೆ ಜನ ಸಂದಣಿ ತುಂಬಿ ತುಳುಕುವ ಕಡೆಗಳಲ್ಲಿ ನಿಲ್ಲಿಸಿದ ಕಾರುಗಳ ಒಳಗೆ ಅಡಗಿಸಿಟ್ಟ ಬಾಂಬ್‌ಗಳಿಂದ ಸ್ಫೋಟ. ಒಮ್ಮೆಲ್ಲೆ ಆಕಾಶದೆತ್ತರಕ್ಕೂ ಎದ್ದ ಸಾವಿರಾರು ಜನರ ಚೀರಾಟ ಆಕ್ರಂದನ. ಬಾಂಬೆಯ ಪ್ರಸಿದ್ಧ ಮಾರುಕಟ್ಟೆ ಪ್ರದೇಶಗಳು, ರೈಲು ನಿಲ್ದಾಣಗಳು, ಹೋಟೆಲುಗಳು ವಿಮಾನ ನಿಲ್ದಾಣಗಳು. ಪ್ರಬಲ ಬಾಂಬ್‌ಗಳ ಸ್ಫೋಟಕ್ಕೆ ಆಹುತಿ. 250ಕ್ಕೂ ಹೆಚ್ಚು ಸಾವು ಸಾವಿರಾರು ಜನರಿಗೆ ತೀವ್ರ ಪೆಟ್ಟು. ವಿದೇಶಿ ಕೈವಾಡದ ಶಂಕೆ.

"ಭಾರತದ ಇಂದಿನ ಸ್ಥಿತಿಯನ್ನು ನೋಡಿದರೆ ಎದೆ ಒಡೆಯುತ್ತದೆ" ಎಂಬ ಸಿಂಪಿ ಲಿಂಗಣ್ಣನವರ ಮಾತಿನಲ್ಲಿ ಎಂಥ ಸತ್ಯ. ಬೆಳಗಾವಿಯಲ್ಲಿ ಮೂಲೆಯ ಒಂದು ಹಳ್ಳಿಯ ಈ ಸಾಮಾನ್ಯ ರೈತ ಸಾಹಿತಿಗೆ ಕೊಪ್ಪಳ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ಅಂದಿನ ಬಾಂಬೆಯ ಘಟನೆಗಳು ಹುಟ್ಟಿಸಿದ ಗಾಬರಿ ಇದು. ಇಂದಿನ ಈ ಘಟನೆಗಳ ಅಮಾನುಷತೆಯನ್ನು ನೋಡಿದರೆ ಒಡೆದೇ ಬಿಡಬಹುದು.

ಕೋಮುವಾದದ ರಾಕ್ಷಸನನ್ನು ಹರಿಯಬಿಟ್ಟವರೂ ಗಾಬರಿಯಾಗುವಂತೆ ಅದರ ಪರಿಣಾಮಗಳು ದೇಶವನ್ನು ಒಂದೇ ಸಮನೆ ಆಪೋಶನ್ ತೆಗೆದುಕೊಳ್ಳಲಾರಂಭಿಸಿವೆ.

ಭಾರತದಲ್ಲಿ ಕೋಮುವಾದ ಬೆಳೆಯುವುದಕ್ಕೆ ಭಾರತದ್ವೇಷಿ ಆದ ಹಿಂದೂ ರಾಷ್ಟ್ರದ ಕಲ್ಪನೆ ಬಿತ್ತಲಿಕ್ಕೆ ವಿದೇಶಿ ಕೈಗಳು ಕೈಜೋಡಿಸಿವೆ. ಸ್ವಾತಂತ್ರ್ಯ ಬಂದಂದಿನಿಂದಲು ಸಾಗಿರುವ ಈ ಕ್ರಿಯೆಗೆ 86 ರಿಂದ ಮತ್ತಷ್ಟು ಹಣ ವಿದೇಶಗಳಿಂದ ಹರಿದು ಬಂತು. ಇದು ಎಲ್ಲಿಂದ ಬರುತ್ತಿದೆ ಎಂದು ಪ್ರಶ್ನೆ ಕೇಳಿದ ಕೇಂದ್ರ ಸರ್ಕಾರದ ಅಧಿಕಾರಿಯನ್ನೇ ನೇರ ಮನೆಗೇ ಕಳುಹಿಸಲಾಯಿತು. ಈಗ ಅದೇ ವಿದೇಶಿ ಕೈಗಳು ಸಾಮ್ರಾಜ್ಯಶಾಹಿಯ ಕುತಂತ್ರಗಳು ಭಾರತವನ್ನು ಚಿಂದಿ ಚಿಂದಿ ಮಾಡಬೇಕೆನ್ನುವ, ಇಂದು ಯುಗೋಸ್ಲಾವಿಯ, ಅಫ್‌ಘಾನಿಸ್ತಾನಗಳು ತಮ್ಮ ಹೊಟ್ಟೆ ತಾವೇ ಬಗೆದು ಕೊಂಡು ಕರುಳು ಕತ್ತರಿಸಿಕೊಳ್ಳುತ್ತಾ ನರಳುತ್ತಿರುವ ಗತಿಗೆ ಭಾರತವನ್ನು ದೂಡಬೇಕೆಂದ ಅಂತರಾಷ್ಟ್ರೀಯ ದಾನವರ ಕೈಗಳು. ಪಂಜಾಬ್ ಅನ್ನು ಹರಿಯಬೇಕೆಂದು, ಅಸ್ಸಾಮನ್ನು ಕತ್ತರಿಸಿಕೊಳ್ಳಬೇಕೆಂದು, ಪ್ರಯತ್ನ ಮಾಡುತ್ತಿರುವ ಈ ಕ್ರೂರ ಕೈಗಳು.

ಎಚ್ಚರಾಗಿ, ಎಚ್ಚರಾಗಿ ಬಂಧುಗಳೇ, ಇಡೀ ಜಗತ್ತಿನಲ್ಲಿ ಕ್ರೌರ್ಯವನ್ನೇ ಉಣಬಡಿಸುತ್ತಿರುವ ಸಾಮ್ರಾಜ್ಯಶಾಹಿ ನರಪಿಶಾಚಿಯ ನ್ನೆದುರಿಸಲು ಸನ್ನದ್ಧರಾಗಿ. ಆಫ್ರಿಕಾ, ಏಷ್ಯಾ, ಲ್ಯಾ ಅಮೇರಿಕಾಗಳಲ್ಲಿ ಹತ್ತಾರು ಕಡೆಗಳಲ್ಲಿ ಮಾನವ ಜೀವಗಳನ್ನು ತಿನ್ನುತ್ತಿರುವ ಭಾರತದಲ್ಲಿ ಕೋಮುವಾದದ ವಿಷಕ್ಕೆ ಗೊಬ್ಬರ ಹಾಕುತ್ತಿರುವ ಈ ರಾಕ್ಷಸನ ಬಗ್ಗೆ ಎಚ್ಚರಾಗಿ. ಒಂದು ಕೈಯಿಂದ ಹಿಂದೂ ಕೋಮುವಾದದ ಪಿಶಾಚಿಯನ್ನು ಬೆಳೆಸುತ್ತಾ ಮತ್ತೊಂದು ಕೈಯಿಂದ ಮುಸ್ಲಿಂ ಕೋಮುವಾದದ, ಸಿಕ್ ಕೋಮುವಾದದ ರಕ್ಕಸನನ್ನು ಪೋಷಿಸುತ್ತಾ ಇಡೀ ಭಾರತವನ್ನು ಈ ಪಿಶಾಚಿಗಳ ಆಟದ ಬಯಲನ್ನಾಗಿ ಮಾಡಿರುವ, ಸಿಕ್- ಉಗ್ರಗಾಮಿಗಳಿಗೆ, ತಮಿಳು ಉಗ್ರಗಾಮಿಗಳಿಗೆ ಇಂದಿರಾಗಾಂಧಿ, ರಾಜೀವಗಾಂಧಿಯವರನ್ನು ಆಹುತಿ ತೆಗೆದುಕೊಂಡ, ಸಾಮ್ರಾಜ್ಯಶಾಹಿ ರಕ್ಕಸರ ಬಗ್ಗೆ ಎಚ್ಚರಾಗಿ. ಇನ್ನಾದರೂ ಎಚ್ಚರಾಗಿ.

"ಭಾರತ್ ಬಂದ್‌ಗೆ ಸಿದ್ಧರಾಗಿ"

ಮಾರ್ಚ್ 4 ರಂದು ನವದೆಹಲಿಯಲ್ಲಿ ಸಭೆ ಸೇರಿದ ಭಾರತೀಯ ಕಾರ್ಮಿಕ ಸಂಘಗಳ ಪ್ರಾಯೋಜಿಕ ಸಮಿತಿ ಸರಕಾರದ ಐ.ಎಂ.ಎಫ್. ನಿರ್ದೇಶಿತ ನೀತಿಗಳ ವಿರುದ್ಧ ಚಳುವಳಿಯನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಲು, ಅದೇ ವೇಳೆಗೆ ಕೋಮು ಶಕ್ತಿಗಳ ವಿರುದ್ಧವೂ ಪ್ರಚಾರಾಂದೋಲನವನ್ನು ನಡೆಸಲು ನಿರ್ಧರಿಸಿದೆ. ಕಾರ್ಮಿಕ ಸಂಘಗಳ ಹಾಗೂ ಇತರ ಸಾಮೂಹಿಕ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದ ಈ ಸಭೆ ಈ ಕೆಳಗಿನ ಕಾರ್ಯಕ್ರಮವನ್ನು ನಿರ್ಧರಿಸಿದೆ.

- *ಮಾರ್ಚ್ 25 ರಿಂದ 31 : ಜನವಿರೋಧಿ ಸಾರ್ವತ್ರಿಕ ಬಜೆಟ್ ಹಾಗೂ ರೈಲ್ವೇ ಬಜೆಟ್‌ಗಳ ವಿರುದ್ಧ ಪ್ರಚಾರ : ಜಂಟಿ ರ್‍ಯಾಲಿಗಳು, ಮತಪ್ರದರ್ಶನಗಳು, ಗೇಟ್ ಮೀಟಿಂಗಳು, ಪೋಸ್ಟರ್, ಕರಪತ್ರ ಹಂಚಿಕೆ ಇತ್ಯಾದಿಗಳ ಮೂಲಕ.*
- *ಎಪ್ರಿಲ್ 15, 1993 ರಂದು ನವದೆಹಲಿಯಲ್ಲಿ ತಲ್ಕತೋರಾ ಒಳಾಂಗಣದಲ್ಲಿ ಸರಕಾರದ ಐ.ಎಂ.ಎಫ್. ನಿರ್ದೇಶಿತ ನೀತಿಗಳ ವಿರುದ್ಧ ಒಂದು ಬೃಹತ್ ರಾಷ್ಟ್ರೀಯ ಸಮಾವೇಶ.*
- *ಆರ್ಥಿಕ ನೀತಿಗಳ ವಿರುದ್ಧ 'ಭಾರತ ಬಂದ್' ಗೆ ಸಿದ್ಧತೆ ದಿನಾಂಕವನ್ನು ರಾಷ್ಟ್ರೀಯ ಸಮಾವೇಶದಲ್ಲಿ ಘೋಷಿಸಲಾಗುವುದು.*
- *ಕೋಮು ಸೌಹಾರ್ದವನ್ನು ಕಾಪಾಡಲು, ಜಾತ್ಯತೀತೆಯನ್ನು ರಕ್ಷಿಸುವ ಪ್ರತಿಜ್ಞೆ, ಲಕ್ಷಾಂತರ ಸಹಿಗಳನ್ನು ಸಂಗ್ರಹಿಸುವ ಆಂದೋಲನವನ್ನು ತೀವ್ರಗೊಳಿಸುವುದು. ಎಪ್ರಿಲ್ 13 ರಂದು 'ರಾಷ್ಟ್ರೀಯ ಏಕತಾ ಆಂದೋಳನ ಸಮಿತಿ' ಅದನ್ನು ಸರಕಾರಕ್ಕೆ ಸಲ್ಲಿಸುತ್ತದೆ. ಮಾರ್ಚ್ 31 ರೊಳಗೆ ನವದೆಹಲಿಯಲ್ಲಿ ಸಂಬಂಧಪಟ್ಟ ಸಾಮೂಹಿಕ ಸಂಘಟನೆಗಳನ್ನು ಇವನ್ನು ತಲುಪಬೇಕು.*
- *ಎಪ್ರಿಲ್ 14, 1993 ರಂದು ರಾಷ್ಟ್ರೀಯ ಏಕತಾ ಆಂದೋಳನ ಸಂಘಟಿಸುವ ದಿಲ್ಲಿ ರ್‍ಯಾಲಿಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸುವುದು.*

ಮಾರ್ಚ್ 4 ರ ಸಭೆಗೆ ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿ ರೈತರ, ಕೃಷಿ ಕೂಲಿಕಾರರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು, ವಕೀಲರು, ವಿಜ್ಞಾನಿಗಳು ಮತ್ತಿತರರ ಸಾಮೂಹಿಕ ಸಂಘಟನೆಗಳನ್ನು ಆಹ್ವಾನಿಸಿತ್ತು. ಈ ಮೂಲಕ ಒಂದು ಹೊಸ ವ್ಯಾಪಕ ವೇದಿಕೆ ರೂಪಿಸುವ ದಿಕ್ಕಿನಲ್ಲಿ ಈ ಆಹ್ವಾನ ನೀಡಲಾಗಿತ್ತು. ಸಿಐಟಿಯು, ಎ.ಐಟಿಯುಸಿ, ಹೆಚ್.ಎಂ.ಎಸ್, ಎ.ಐ.ಎಲ್.ಯು, ಎಸ್. ಎಫ್.ಐ, ಎ.ಐ.ಎಸ್.ಎಫ್, ರಾಜ್ಯ ಸರ್ಕಾರಿ ನೌಕರರ ಒಕ್ಕೂಟ, ಕಲ್ಲಿದ್ದಲು ಕಾರ್ಮಿಕರ ಒಕ್ಕೂಟ, ಎ.ಐ.ಬಿ.ಇ.ಎ. ಬಿ.ಇ.ಎಫ್.ಐ, ಎ.ಐ.ಐ.ಇ.ಎ. ರಕ್ಷಣಾ ನೌಕರರ ಒಕ್ಕೂಟ, ಅಂಚೆ ನೌಕರರ ಪೋಸ್ಟ್‌ಮನ್ ಯೂನಿಯನ್; ಉಕ್ಕು ಕಾರ್ಮಿಕರ ಒಕ್ಕೂಟ ಇತ್ಯಾದಿ ಸಂಘಗಳು ಈ ಸಭೆಯಲ್ಲಿ ಭಾಗವಹಿಸಿದ್ದವು. ಹೆಚ್.ಎಂ.ಎಸ್.ನ ವೀರೇಶ್ವಾನ್ ತ್ಯಾಗಿ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಅಸಮಾನತೆಗಳನ್ನು ಉಲ್ಬಣಗೊಳಿಸುವ ಬಜೆಟ್

ನರಸಿಂಹರಾವ್ ಸರಕಾರದ ಉದಾರೀಕರಣ ನೀತಿಗಳು ಈಗಾಗಲೇ ಹೆಚ್ಚಿಸಿರುವ ಅಸಮಾನತೆಗಳನ್ನು ಈ ಬಾರಿಯ ಕೇಂದ್ರ ಬಜೆಟ್ ಇನ್ನಷ್ಟು ಉಲ್ಬಣಗೊಳಿಸುತ್ತಿದೆ. ನೇರ ತೆರಿಗೆಗಳನ್ನು ಹೆಚ್ಚಿಸಲು ನಿರಾಕರಿಸಿ ದೊಡ್ಡ ಬಂಡವಾಳಿಗರಿಗೆ, ವಿದೇಶೀ ಬಂಡವಾಳಕ್ಕೆ ರಿಯಾಯ್ತಿಗಳನ್ನು ಕೊಡಮಾಡಿರುವ ಈ ಬಜೆಟ್ ಜನಗಳ ಪರಿಸ್ಥಿತಿಯನ್ನು ಇನ್ನಷ್ಟು ದುಸ್ತರಗೊಳಿಸಲಿದೆ. ಎಂದು ಹೇಳುತ್ತಾ ಈ ಬಜೆಟ್‌ನ ಸಂಪೂರ್ಣ ಒತ್ತು ಹಾಗೂ ಅದರಲ್ಲಿರುವ ಪ್ರಸ್ತಾಪಗಳು ಹಿಡಿದಿರುವ ದಾರಿ ಇವೆರಡನ್ನು ತಾನು ವಿರೋಧಿಸುವುದಾಗಿ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ. ಈ ಬಜೆಟ್ ಅಭಿವೃದ್ಧಿಗೆ ಪ್ರೇರಕವಾಗಿದೆ ಎಂಬುದು ಆಧಾರ ಹೀನ. ಕೆಲವು ಬಾಬ್ತುಗಳಿಗೆ ಯೋಜನಾ ವೆಚ್ಚ ಹೆಚ್ಚಿಸಲಾಗಿದೆ ಎಂಬ ಸರಕಾರದ ಮಾತಿಗೂ ಬಜೆಟ್‌ನಲ್ಲಿ ಸಮರ್ಥನೆ ಕಾಣುವುದಿಲ್ಲ. ಆಹಾರ ಸಬ್ಸಿಡಿಗಳನ್ನು ಇಳಿಸಿ, ಅಂತರರಾಜ್ಯ ಆಹಾರ ಧಾನ್ಯ ಸಾಗಾಣಿಕೆಗಳ ಹತೋಟಿಯನ್ನು ರದ್ದು ಮಾಡಿ ಆಹಾರ ಧಾನ್ಯಗಳ ಸಾರ್ವಜನಿಕ ವಿತಾರಣಾ ವ್ಯವಸ್ಥೆಯನ್ನಂತೂ ಸರಕಾರ ಕಳಚಿಯೇ ಹಾಕಿದೆ. ರಾಜ್ಯಗಳ ಸಂಪನ್ಮೂಲಗಳ ಮೇಲೆ ತೀವ್ರ ಕುತ್ತು ಹಾಕಲಾಗಿದೆ ಎಂದು ಪೊಲಿಟ್ ಬ್ಯೂರೋ ಹೇಳಿದೆ.

ಕುಷ್ಟಗಿ ಸಾಮೂಹಿಕ ಅತ್ಯಾಚಾರ ಪ್ರಕರಣ

13 ರಂದು ರಾಯಚೂರು ಜಿಲ್ಲಾ ಬಂದ್

ಕುಷ್ಟಗಿಯಲ್ಲಿ ಅಮಾನವೀಯ ಸಾಮೂಹಿಕ ಅತ್ಯಾಚಾರ ಪ್ರಕರಣದ ಬಗ್ಗೆ ಪಕ್ಷದ ರಾಯಚೂರು ಜಿಲ್ಲಾ ಸಮಿತಿ ರಾಯಚೂರು ಜಿಲ್ಲಾ ಬಂದ್‌ಗೆ ಕರೆ ನೀಡಿದೆ. ಈ ಬಂದ್ ಕರೆಗೆ ಅನೇಕ ಸಂಘಟನೆಗಳು, ನಾಗರಿಕ ಸಮಿತಿಗಳು ಬೆಂಬಲಿಸಿವೆ ಎಂದು ರಾಯಚೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ. ಲಿಂಗಪ್ಪ ನೀಡಿದ ಪತ್ರಿಕಾ ಹೇಳಿಕೆ ಯೊಂದರಲ್ಲಿ ತಿಳಿಸಿದ್ದಾರೆ.

ರಾಯಚೂರು, ಗುಲ್ಬರ್ಗ ಜಿಲ್ಲೆಗಳಲ್ಲಿ ಇತ್ತೀಚಿಗೆ ಹೆಚ್ಚುತ್ತಿರುವ ನಾಗರಿಕ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳಲ್ಲಿ - ಮಹಿಳೆಯರ ಮೇಲಿನ ಅತ್ಯಾಚಾರ, ದೌರ್ಜನ್ಯಗಳು, ಹರಿಜನರ ಮೇಲಿನ ದೌರ್ಜನ್ಯಗಳನ್ನು ಬಯಲಿಗೆಳೆಯುವುದರಲ್ಲಿ, ಅವುಗಳಿಗೆ ಕಾರಣರಾದವರ ವಿರುದ್ಧ ಪ್ರತಿಭಟನೆ ಮಾಡುವುದರಲ್ಲಿ ಸಿ.ಪಿ.ಐ(ಎಂ) ಪ್ರಧಾನ ಪಾತ್ರ ವಹಿಸಿದೆ. ಕುದುರೆ ಮೋತಿಯಲ್ಲಿ ಮಹಿಳೆಯರ ಬೆತ್ತಲೆ ಮೆರವಣಿಗೆ ಮಾಡುವ ಪ್ರಸಂಗವಾಗಲಿ, ಕಮಲಾಕರನ ಹತ್ಯಾಪ್ರಕರಣವಾಗಲಿ, ಅಲ್ಲಿಗಿಬಿ ಮೊದಲಾದ ಕಡೆಗಳಲ್ಲಿ ಹರಿಜನರ ಮೇಲಿನ ದೌರ್ಜನ್ಯದ ಪ್ರಕರಣವಾಗಲಿ ಹೈದರಾಬಾದ್ - ಕರ್ನಾಟಕ ಪ್ರದೇಶದ ಸಾಮಾಜಿಕ ದೌರ್ಜನ್ಯದ ಪ್ರಕರಣಗಳನ್ನು ಎದುರಿಸುವಲ್ಲಿ ಸಿ.ಪಿ.ಐ(ಎಂ) ಪ್ರಗತಿಪರಶಕ್ತಿಗಳನ್ನು ಜೊತೆಗೂಡಿಸಿ ಹೋರಾಡುತ್ತಿದೆ.

ಇತ್ತೀಚಿಗೆ ಕುಷ್ಟಗಿಯಲ್ಲಿ ನಡೆದ ಸಾಮೂಹಿಕ ಅತ್ಯಚಾರ ಪ್ರಕರಣವನ್ನು ಬೆಳಕಿಗೆ ತರುವಲ್ಲಿ ಪತ್ರಕರ್ತರಿಗೆ ರಾಯಚೂರು ಜಿಲ್ಲೆಯ ಸ್ಥಳೀಯ ಘಟಕಗಳು ಸಹಾಯಮಾಡಿವೆ. ಮತ್ತು ಪ್ರತಿಭಟನೆ ನಡೆಸಿ ಸರ್ಕಾರ ಧೃಡವಾದ ಕ್ರಮಗಳನ್ನು ಕೈಗೊಳ್ಳಲು ಒತ್ತಾಯಿಸಿವೆ. ಈ ಸಾಮೂಹಿಕ ಅತ್ಯಾಚಾರದ ಬಗ್ಗೆ ಇರುವ ಹಲವಾರು ಊಹಾಪೋಹಗಳ ನಡುವೆ ಸತ್ಯಾಂಶಗಳ ಸಂಗ್ರಹಣೆಗಾಗಿ ಸಿ.ಪಿ.ಐ(ಎಂ) ರಾಜ್ಯ ಸಮಿತಿ ಒಂದು ನಿಯೋಗವನ್ನು ಕಳುಹಿಸಿತು. ಈ ನಿಯೋಗದಲ್ಲಿ ರಾಜ್ಯ ಸಮಿತಿ ಸದಸ್ಯರಾದ ಕಾಂ. ಜಿ. ಎನ್.ನಾಗರಾಜ್, ಕಾಂ. ಚಂದ್ರಶೇಖರ್ ಬಾಳೆ ಹಾಗೂ ಸಿ.ಪಿ.ಎಂ.ನ ರಾಯಚೂರು ಜಿಲ್ಲಾ ಕಾರ್ಯದರ್ಶಿ ಬಿ. ಲಿಂಗಪ್ಪನವರುಗಳಿದ್ದು ದಿನಾಂಕ ೮ರಂದು ಕುಷ್ಟಗಿಗೆ ಭೇಟಿ ನೀಡಿ ಸತ್ಯಾಂಶಗಳನ್ನು ಸಂಗ್ರಹಿಸಿದರು.

ಮುಖ್ಯಾಂಶಗಳು

1. ಅತ್ಯಚಾರಕ್ಕೆ ಒಳಗಾಗಿ ನಿಧನಳಾದ ಅಂಗನವಾಡಿ ಕಾರ್ಯಕರ್ತೆ ಶರಣವ್ವಳ ತಾಯಿ ದೇವದಾಸಿ ಕರಿಯವ್ವ ಹಾಗೂ ಅಲ್ಲಿಯ ಸಿಡಿಪಿಓ ಕ್ಯಾನ್ಸರ್ ರೋಗದಿಂದಾಗೂ ಕೆ.ಎಂ.ಸಿ ದಾಖಲಾತಿ ಹಾಗೂ ಬಿಡುಗಡೆಯ ಪತ್ರಗಳನ್ನು ತೋರಿಸುತ್ತಾ ಎಲ್ಲರನ್ನು ನಂಬಿಸಲು ಪ್ರಯತ್ನಿಸುತ್ತಿದ್ದಾರೆ.

2. ಫೆ. 2ರಿಂದ 11ರವರೆಗೂ ಕೆ.ಎಂ.ಸಿ.ಯಲ್ಲಿ ದಾಖಲಾದ ಬಗ್ಗೆ ಪತ್ರಗಳನ್ನು ತೋರಿಸುತ್ತಿರುವಾಗ ದಿನಾಂಕ ೮ ಮತ್ತು ೯ರಂದು ಕುಷ್ಟಗಿಯಲ್ಲಿಯೇ ಶರಣವ್ವಳನ್ನು ನೋಡಿದ ಹಲವರಿದ್ದಾರೆ. ದಿನಾಂಕ ೮ರಂದು ಆರೋಗ್ಯವಾಗಿಯೇ ಓಡಾಡುತ್ತಿದ್ದ ಶರಣವ್ವನನ್ನು ದಿನಾಂಕ ೯ರಂದು ಮಂಗಳವಾರ ಬೆಳಗ್ಗೆ ತಹಸೀಲ್ದಾರ್ ಮನೆಯ ದಿಕ್ಕಿನಿಂದ ಶಿವಮೂರ್ತಿ ಮತ್ತು ಹನುಮಮ್ಮ ಎಂಬ ಇಬ್ಬರು ತಮ್ಮ ಭುಜಗಳ ಮೇಲೆ ಆಧರಿಸಿ ಕರೆದುಕೊಂಡು ಅಲ್ಲಿಯ...

ಮಹಿಳೆಯರಿಗೆ "ಹಿಂದುತ್ವ"ವಾದಿಗಳ ಉಪದೇಶ!

"ಸಮಾನತೆಗಾಗಿ ಹೋರಾಟ ? - ಬೇಡವಮ್ಮ ತಂಗೀ ಮಕ್ಕಳ ಹೆತ್ತು ಸಾಕುವ 'ಪುಣ್ಯ' ನಿನ್ನದವ್ವಾ ತಂಗೀ"

ಮಾರ್ಚ್ 8, ಅಂತರಾಷ್ಟ್ರೀಯ ಮಹಿಳಾದಿನ. ಈ ವರ್ಷ ಮಹಿಳೆಯರ ದಿನಾಚರಣೆ ಮಾಡುವಾಗ ನಮ್ಮ ದೇಶದ ಮೇಲೆ ಹೊರಲಾಗುತ್ತಿರುವ ಹಿಂದೂರಾಷ್ಟ್ರದ ಕಲ್ಪನೆಯಲ್ಲಿ ಮಹಿಳೆಯ ಸ್ಥಾನ ಏನು? ಎಂದು ಎಲ್ಲಾ ಮಹಿಳೆಯರೂ ಕೇಳಿಕೊಳ್ಳಬೇಕಾಗುತ್ತದೆ. ಮಹಿಳೆಯರನ್ನು ಅಜ್ಞಾನದ ಕತ್ತಲಲ್ಲಿ ಇನ್ನೂ ಇರುಸಿರುವ ಅಸಮಾನ ಸಮಾಜವನ್ನು ರಾಮ ಮಂದಿರ ನಿರ್ಮಾಣಕ್ಕೆ-ಬಾಬರಿ ಮಸೀದಿಯ ನಾಶಕ್ಕೆ ಹೆಚ್ಚು ಬಲಿಯಾಗುವಂತೆ ಮಾಡಿದೆ. ತಮ್ಮ ಕೊರಳಿಗೆ ತಾವೇ ಉರುಳು ಹಾಕಿಕೊಳ್ಳುವಂತೆ ಮಾಡುವ ಈ ಭ್ರಮೆಯ ಪಂದೆಯನ್ನು ಹರಿದು ಅರಿವಿನ ಬೆಳಕನ್ನು ಕಾಮಿಸಬೇಕಾಗಿದೆ.

ಬಿ.ಜೆ.ಪಿ. 'ಪರಿವಾರ'ದ ಕಲ್ಪನೆಯ 'ಹಿಂದೂರಾಷ್ಟ್ರ'ದಲ್ಲಿ ಮಹಿಳೆಯರ ಸ್ಥಾನ-ಮಾನವೇನು? ಅವರ ಹಕ್ಕುಗಳ ರಕ್ಷಣೆಯ ಬಗ್ಗೆ ಭರವಸೆ ನೀಡುತ್ತದೆಯೇ? ಈ ಪ್ರಶ್ನೆಯನ್ನ ಯಾರೇ ಸಂಘ 'ಪರಿವಾರದವರನ್ನು ಕೇಳಿದರು ತಕ್ಷಣ ಜಾತ್ಯಾತೀತತೆಯಂತೆ ಇದು ಕೂಡಾ ನೀವು ಪಾಶ್ಚಿಮಾತ್ಯರ ಪ್ರಭಾವದಿಂದ ಕೇಳುವ ಪ್ರಶ್ನೆ ಪಾಶ್ಚಿಮಾತ್ಯರ ಸಮಾಜ ತುಂಬಾ ಅವನತಿ ಹೊಂದುತ್ತಿದೆ. ಆದ್ದರಿಂದ ಅಲ್ಲಿ ಇಂತಹದ್ದೆಲ್ಲಾ ಪ್ರಶ್ನೆ ಬರುತ್ತವೆ. ನಮ್ಮ ಪ್ರಾಚೀನ ಭವ್ಯ ಸಂಸ್ಕೃತಿಯಲ್ಲಿ ಆ ಪ್ರಶ್ನೆಯೇ ಬರುವುದಿಲ್ಲ, ಏಕೆಂದರೆ ಮಹಿಳೆಯರನ್ನು ಮಾತೆಯರೆಂದು, ದೇವಿಯರೆಂದು ಪೂಜಿಸುವವರು ನಾವು ಎಂಬ ಉತ್ತರ ದೊರೆಯುತ್ತದೆ.

ಇನ್ನೂ ಸ್ವಲ್ಪ ಕೆದಕಿ ಕೇಳಿದರೆ ಮಹಿಳೆಯರಿಗೆ ಪ್ರತ್ಯೇಕ ಹಕ್ಕುಗಳು ಏಕೆ ಬೇಕು ಎಂದೂ ಅವರು ಕೇಳಿಯಾರು ! ಏಕೆಂದರೆ ಅವರ ವಿಚಾರಧಾರೆಯನ್ನು ಬಿಂಬಿಸುವ ಯಾವ ಕೃತಿಗಳಲ್ಲೂ, ದಸ್ತಾವೇಜುಗಳಲ್ಲೂ ಅಲ್ಪಸಂಖ್ಯಾತರ, ದಲಿತಜಾತಿಗಳ ವಿಶಿಷ್ಟ ಸಮಸ್ಯೆಗಳ ಪ್ರಸ್ತಾಪವಿರದಂತೆ, ಮಹಿಳೆಯರ ವಿಶಿಷ್ಟ ಸಮಸ್ಯೆಗಳ ಪ್ರಸ್ತಾವವೂ ಕಾಣಸಿಗದು. ವಿಶಿಷ್ಟ ಸಮಸ್ಯೆಗಳಿಲ್ಲವೆಂದ ಮೇಲೆ ಅವರ ಹಕ್ಕುಗಳು ಅದನ್ನು ರಕ್ಷಿಸುವುದು ಇತ್ಯಾದಿ ಪ್ರಶ್ನೆಯೆಲ್ಲಿಂದ ಬರುತ್ತದೆ?

ವಿಶಿಷ್ಟ ಸಮಸ್ಯೆಗಳು ಇಲ್ಲ ಎಂದು ಅವರು ಸ್ಪಷ್ಟವಾಗಿ ಹೇಳುವುದಿಲ್ಲ. ನಿಜ. ಹಾಗಿದ್ದರೆ ಮಹಿಳೆಯರ ಬಗ್ಗೆ ಅವರ ನಿಲುವೇನು?

ಮನುವಿನ ದಾರಿಯಲ್ಲಿ

"ಹಿಂದೂರಾಷ್ಟ್ರ"ವನ್ನು ಪ್ರತಿಪಾದಿಸಿದವರಲ್ಲಿ ಮುಖ್ಯರಾದ ಗೊಲ್ವಾಲ್ಕರ್‌ರವರಿಗೆ ಮನು ಜಗತ್ತಿನ ಮೊದಲ ಹಾಗೂ ಮಹಾನ್ ಶಾಸನಕಾರ. "ಹಿಂದೂರಾಷ್ಟ್ರ ಸಮಾಜ 'ಮನುಸ್ಮೃತಿ"ಯ ಪರಂಪರೆಯ ಮೇಲೆ ನಿಂತಿರುತ್ತದೆ ಎಂದು ಅವರ ಕೃತಿಗಳಿಂದಷ್ಟೇ ಅಲ್ಲ ಇತ್ತೀಚಿನ ಬಿ.ಜೆ.ಪಿ. ಮುಖಂಡರ ಮಾತುಗಳಿಂದಲೂ ನಮಗೆ ತಿಳಿದುಬರುತ್ತದೆ. ಎಪ್ರಿಲ್ 18,19, 1992 ರಂದು ಮಧುರೆಯಲ್ಲಿ ವಿಶ್ವಹಿಂದೂ ಪರಿಷತ್ ಆಶ್ರಯದಲ್ಲಿ ನಡೆದ 'ಹಿಂದೂ ವಕೀಲರ ಸಮ್ಮೇಳನ'ದಲ್ಲಿ ಆಗಿನ ಉತ್ತರಪ್ರದೇಶ ಸರಕಾರದ ಅಡ್ವೋಕೇಟ್ ಜನರಲ್ ಮನುಸ್ಮೃತಿ ಇಡೀ ಮನುಕುಲದ ಎಲ್ಲಾ ಕಾಲದ ಅಗತ್ಯಗಳನ್ನು ಮನಗುಂಡು ರೂಪಿಸಿದ ಎಲ್ಲಾ ಕಾಲಕ್ಕೂಎಲ್ಲಾ ದೇಶಕ್ಕೂ ಅನ್ವಯವಾಗುವ. ಎಲ್ಲರಿಗೂ ನ್ಯಾಯ ಒದಗಿಸುವ ಕೃತಿ" ಎಂದು ಘಂಟಾ ಘೋಷವಾಗಿ ನುಡಿದರು.

"ಶೂದ್ರರಿಗೆ, ಮಹಿಳೆಯರಿಗೆ ವೇದಾಧಿಕಾರವಿಲ್ಲ", "ಹೆಂಗಸು ಅಸತ್ಯದಂತೆ" ಎಂದೆಲ್ಲಾ ಹೇಳಿರುವ ಮನುಸ್ಮೃತಿಯ ಮಾತುಗಳೂ ಸರ್ವಕಾಲಕ್ಕೂ, ಸರ್ವದೇಶಕ್ಕೂ ಅನ್ವಯವಾಗುವ ಮಾತುಗಳೇ? 'ಹಿಂದುತ್ವ' ವಾದಿಗಳ ಪ್ರಕಾರ ಹೌದು. ಮಹಿಳೆಯರ ಹಕ್ಕುಗಳ ಬಗ್ಗೆ 'ಪರಿವಾರ'ದವರು ಪ್ರಸ್ತಾಪವನ್ನೇ ಮಾಡುವುದಿಲ್ಲ ಏಕೆ? ಮಹಿಳೆಯರ ಬಗ್ಗೆ ಇವರ ನಿಲುವೇನು ಎಂಬುದನ್ನು ಸೂಚಿಸುವ ಸಾಲುಗಳಿವು.

ಜೈಸಿಯರಾಂ ಅಲ್ಲ ಜೈಶ್ರೀರಾಂ

ಬಿ.ಜೆ.ಪಿ.ಯ ಈಗಿನ ಯುದ್ಧಘೋಷ 'ಜೈಶ್ರೀರಾಂ' ಕೂಡಾ ಮಹಿಳೆಯರ ಬಗ್ಗೆ ಅವರ ನಿಲುವನ್ನು ತೋರುತ್ತದೆ ಎನ್ನುತ್ತಾರೆ ಮಹಿಳಾ ಪತ್ರಿಕೆಯೊಂದರ ಸಂಪಾದಕೀಯಾದ ಶ್ರೀಮತಿ ಮಧು ಕಿಶ್ವರ್. (ಟೈಂಮ್ ಆಫ್ ಇಂಡಿಯಾ ಫೆ. ಜನವರಿ 28, 1993) 'ಜೈ ಶ್ರೀರಾಂ' ಮೇಲ್ನೋಟಕ್ಕೆ ಉತ್ತರಭಾರತದಲ್ಲಿ ಶತಮಾನಗಳಿಂದ ಪರಸ್ಪರ ಭೇಟಿಯಾದಾಗ ಹೇಳುವ ಮಾತಿನಂತೆ ಕಂಡರೂ ವಾಸ್ತವವಾಗಿ ಅದಕ್ಕೂ ಇದಕ್ಕೂ ಬಹಳ ವ್ಯತ್ಯಾಸವಾಗಿದೆ ಎನ್ನುತ್ತಾರೆ ಇವರು. ಏಕೆಂದರೆ ಉತ್ತರ ಭಾರತದಲ್ಲಿ ಪ್ರಚಲಿತವಿರುವ ಮಾತು "ಜೈಸಿಯರಾಂ" ಬಿ.ಜೆ.ಪಿ. ಅದನ್ನು "ಜೈ ಶ್ರೀರಾಂ" ಮಾಡಿದ್ದು ಇವರ ಸಂಸ್ಕೃತ ಪ್ರಿಯತೆಯಿಂದಾಗಿ ಅಲ್ಲ. ಜೈಸಿಯಾರಾಂ ನಲ್ಲಿ ಸೀತೆಯ ಹೆಸರು ರಾಮನ ಹೆಸರಿಗಿಂತ ಮೊದಲು ಬರುತ್ತದೆ. ರಾಮ, ಸೀತೆಯ ಅಗ್ನಿಪರೀಕ್ಷೆ, ವಾಲಿ ವಧೆಯಂತಹ ಕೆಲವಾದರೂ ತಪ್ಪುಗಳನ್ನು ಮಾಡಿದ್ದಾನೆ. ಸೀತೆ ಅಂತಹ ಯಾವ ತಪ್ಪನ್ನು ಮಾಡದ ಪುಣ್ಯತಿಗ್ತಿದಿ. ಆದ್ದರಿಂದ ಆಕೆಗೆ ಮೊದಲ ಸ್ಥಾನ. ಆದರೆ ಮಸೀದಿ ಭಂಜಕರಿಗೆ ಈಗ ಬೇಕಿರುವುದು ಜನಗಳು ಪೂಜಿಸುವ ಸೀತಾ ರಾಮನಲ್ಲ. (ಬಾಕ್ಸ್‌ನೋಡಿ)

ಸೀತೆ ಬಿ.ಜೆ.ಪಿ.ಗಳ 'ಲಕ್ಷ್ಮಣರೇಖೆ' ಯನ್ನು ಈಗಲೂ ದಾಟುವಂತಿಲ್ಲ ಎನ್ನುತ್ತಾರೆ ಇನ್ನೊಬ್ಬ ಮಹಿಳಾ ಲೇಖಕಿ ಲಲಿತಾ ಪಣಿಕ್ಕರ್ (ಟೈಂಸ್ ಆಫ್ ಇಂಡಿಯಾ ಫೆ. 15). ಅವರು ಹಿಂದು ಆರ್.ಎಸ್.ಎಸ್.ನ ಮುಖಂಡ ಹೊ. ವೆ. ಶೇಷಾದ್ರಿಯವರ "ವಿದೇಶದಲ್ಲಿ ಹಿಂದೂಗಳು- ದ್ವಂದ್ವ, ಡಾಲರ್ ಅಥವಾ ಧರ್ಮ?" ಎಂಬ ಹೆಸರಿನ ಇಂಗ್ಲಿಷ್ ಪುಸ್ತಕದ ಕೆಲವು ಸಾಲುಗಳನ್ನು ಉದಾಹರಿಸುತ್ತಾರೆ- ಪಾಶ್ಚಿಮಾತ್ಯರಲ್ಲಿ ವಿದ್ಯಾವಂತ, ಪ್ರತಿಭಾವಂತ ಮಹಿಳೆಯರು ತಮ್ಮ ಮಕ್ಕಳಿಗಾಗಿ ಮನೆಯಲ್ಲಿ ಉಳಿಯುವ ಮಾತು ಕೂಡಾ ಸಲ್ಲ. ಆದರೆ ಹಿಂದೂ ಮಹಿಳೆಯರಿಗೆ ಹಾಗಲ್ಲ ಎನ್ನುತ್ತಾ ಶೇಷಾದ್ರಿಯವರು ಇನ್ನೇನು ಬಡ್ತಿ ಸಿಗಬೇಕು ಎಂದಿರುವ ಸಮಯದಲ್ಲೇ ತನ್ನ ಕುಟುಂಬಕ್ಕಾಗಿ ಕೆಲಸಕ್ಕೆ ರಾಜೀನಾಮೆ ನೀಡಿದ ಒಬ್ಬ ವಿ.ಹೆಚ್.ಪಿ. ಮಹಿಳೆ (ವಿದೇಶದಲ್ಲಿರುವಾಕೆ) ಯ ಬಗ್ಗೆ ಹೆಮ್ಮೆಯಿಂದ ಹೇಳಿದ್ದಾರಂತೆ. 'ಹಿಂದುತ್ವ' ಪ್ರತಿಪಾದಕರ ಪ್ರಕಾರ ಮಹಿಳೆಯರು ಸಮಾಜಕ್ಕೆ ಮಾಡಬಹುದಾದ ಅತಿ ದೊಡ್ಡ ಕೆಲಸವೆಂದರೆ ಮಕ್ಕಳ ಪೋಷಣೆ ಮಾತ್ರ ಎನ್ನುತ್ತಾರೆ ಶ್ರೀಮತಿ ಲಲಿತಾ ಪಣಿಕ್ಕರ್. 'ಮನುಸ್ಮೃತಿ' ಯ ಅಧುನಿಕ ಹಿಂಬಾಲಕರಿಗೆ ಅನುಗುಣವಾದ ನುಡಿ ಮುತ್ತು.

ಮುಸ್ಲಿಂ ಮತಾಂಧರಿಗೂ ಇವರಿಗೂ ವ್ಯತ್ಯಾಸವೇನು

ಶ್ರೀಮತಿ ಪಣಿಕ್ಕರ್ ಮಹಿಳೆಯರ ಬಗ್ಗೆ ಕೋಮುವಾದಿಗಳ ಪ್ರಗತಿ-ವಿರೋಧಿ ನಿಲುವಿಗೆ ಇನ್ನು ಒಂದು ಉದಾಹರಣೆ ನೀಡುತ್ತಾರೆ. ಇದು ಉತ್ತರಪ್ರದೇಶ ಬಿ.ಜೆ.ಪಿ. ಸರಕಾರ 'ಪರಿಷ್ಕರಿಸಿದ' ಪಠ್ಯಪುಸ್ತಕದಲ್ಲಿ ಬರುವ ಒಂದಂಶ.

1956ರ ಹಿಂದೂ ವಿಧವಾ ಪುನರ್ ವಿವಾಹ ಕಾನೂನು, 1937ರ ಹಿಂದೂ ಮಹಿಳಾ ಆಸ್ತಿ ಕಾನೂನು, 1955ರ ಹಿಂದೂ ವಿವಾಹ ಮತ್ತು ವಿಚ್ಛೇದನ ಕಾನೂನು ಹಿಂದೂ ಕುಟುಂಬಗಳಲ್ಲಿ ಅಶಾಂತಿ, ಕ್ಲಿಷ್ಟ ಸ್ಥಿತಿ ಉಂಟುಮಾಡಿವೆ ಎನ್ನುವಷ್ಟರ ಮಟ್ಟಿಗೂ ಹೋಗಿವೆ ಪಠ್ಯಪುಸ್ತಕ್ಕೆ ಬಿ.ಜೆ.ಪಿ. ಸರಕಾರ ತಂದ ತಿದ್ದುಪಡಿಗಳು! ಮಕ್ಕಳನ್ನು ಹೆತ್ತು ಸಾಕುವುದು ಬಿಟ್ಟು ಮಹಿಳೆಯರಿಗೆ ಇವರ 'ಹಿಂದೂ ರಾಷ್ಟ್ರ' ಸಮಾಜದಲ್ಲಿ ಬೇರೆ ಯಾವುದೇ ಹಕ್ಕು ಇಲ್ಲ.

ಈ ಬಿ.ಜೆ.ಪಿ. ತಿದ್ದುಪಡಿಗಳು ಇಷ್ಟಕ್ಕೆ ನಿಂತಿಲ್ಲ. ಹಿಂದೂ ಸಮಾಜದಲ್ಲಿ ಮುಖ್ಯವಾಗಿ ರಾಜಾಸ್ಥಾನ, ಮಧ್ಯಪ್ರದೇಶ, ಉತ್ತರ ಪ್ರದೇಶ, ಬಿಹಾರದಂತಹ ಪಾಳೇಗಾರೀ ಶಕ್ತಿಗಳ ಪ್ರಾಬಲ್ಯವಿರುವ ಹಳ್ಳಿಗಳಲ್ಲಿ ಈಗಲೂ ಮುಖ ಮುಚ್ಚಿಕೊಳ್ಳುವ, ಬಾಲ್ಯವಿವಾಹ ಮಾಡುವ ಸತಿ ಹೋಗುವ ಪದ್ಧತಿ ಇತ್ಯಾದಿಗಳೆಲ್ಲಾ ಮುಸಲ್ಮಾನರಿಂದಾಗಿ ಬಂದ ದುಷ್ಟ ಕ್ರಮಗಳು ಎಂದು ಉತ್ತರಪ್ರದೇಶದ ವಿಧ್ಯಾರ್ಥಿಗಳಿಗೆ ಬೋಧಿಸುತ್ತವೆ ಈ ಪಠ್ಯಪುಸ್ತಕಗಳು. ಹಿಂದೂ ಹೆಂಗಸರು ತುರುಕರ ಕಾಮಪೀಡಿತ ಕಣ್ಣುಗಳಿಂದ ತಪ್ಪಿಸಿಕೊಳ್ಳಲು ಮುಖ ಮುಚ್ಚಿಕೊಳ್ಳಲಾರಂಭಿಸಿದರು, ಮುಸಲ್ಮಾನರ ಭಯದಿಂದ ತಮ್ಮ ಹೆಣ್ಣುಮಕ್ಕಳಿಗೆ ಬೇಗನೇ ಮದುವೆ ಮಾಡಿಸಲಾರಂಭಿಸಿದರು. ಮುಸಲ್ಮಾನ ಆಕ್ರಮಣಕಾರರಿಂದ ಮಾನ ಉಳಿಸಿಕೊಳ್ಳಲು 'ಸತಿ' ಆರಂಭವಾಯಿತು. ಇತ್ಯಾದಿ ಈ ಪಠ್ಯಪುಸ್ತಕಗಳು ಹೇಳುತ್ತವೆ. ಆದರೆ ಇಸ್ಲಾಮ್ ಧರ್ಮ ಉದಯವಾಗುವ ಎಷ್ಟೋ ಮೊದಲೇ, ಸಾವಿರಾರು ವರ್ಷಗಳ ಮೊದಲೇ ಹಿಂದೂ ಶಾಸ್ತ್ರಗಳಲ್ಲಿ 'ಸತಿ' ಪದ್ಧತಿಯ ಪ್ರಸ್ತಾಪವಿದ್ದು ಯುತ್ತದೆಯೆಂಬುದೇ ಬಿ.ಜೆ.ಪಿ.ಯ ಸುಳ್ಳುಗಳನ್ನು ಬಯಲಿಗೆಳೆಯಲು ಸಾಕು ಎನ್ನುತ್ತಾರೆ ಶ್ರೀಮತಿ ಪಣಿಕ್ಕರ್.

ನಾವೂ ಈ ಪಠ್ಯಪುಸ್ತಕಗಳನ್ನು, ಬರೆದವರನ್ನು ಪ್ರಶ್ನಿಸಬಹುದು- ಮುಸ್ಲಿಂ ಮಹಿಳೆಯರ 'ಬುರ್ಖಾ'ಪದ್ಧತಿಗೂ ಇಂತಹುದೇ ಕಾರಣವಿರಬಹುದೇ? ಅದಿರಲಿ, ಈಗಲಾದರೂ ಈ ದುಷ್ಟಪದ್ಧತಿಗಳನ್ನು ಹೋಗಲಾಡಿಸಲು ಬಿ.ಜೆ.ಪಿ. 'ಪರಿವಾರ' ದವರು

ಪುಟ 3ಕ್ಕೆ

ಸಮಾಜದ ಅಲ್ಪಸಂಖ್ಯಾತರಿಗೆ, ಮಹಿಳೆಯರಿಗೆ ಪ್ರತ್ಯೇಕ ಹಕ್ಕುಗಳು ಈಗ ವಿಶ್ವದ ಯಾವುದೇ ನಾಗರಿಕ ದೇಶದ ಪ್ರಜಾಪ್ರಭುತ್ವ ದೇಶದ ಸಂವಿಧಾನದಲ್ಲಿ ಇರಲೇಬೇಕಾದ ಅಂಶ. 'ಅಂಶ.' 'ಅಲ್ಪ ಸಂಖ್ಯಾತ' ಎಂಬ ಪದ ಕೇಳಿದ ಕೂಡಲೇ ಬೆಚ್ಚಿಬೀಳುವ "ಹಿಂದುತ್ವ" ಪಡೆಗಳು ಮಹಿಳೆಯರ ಬಾಯಿಂದ 'ಸಮಾನತೆ'ಯ ಮಾತು ಕೇಳಿದರೂ ಹಾಗೆಯೇ ಬೆಚ್ಚಿ ಬೀಳುತ್ತದೆ ಎಂಬುದು ನಿಮಗೆ ಗೊತ್ತೇ?

"ಹಿಂದೂ ರಾಷ್ಟ್ರ"ದಲ್ಲಿ ಸೀತೆಯರು ಮತ್ತು ದುರ್ಗೆಯರು

"......... ನೀನು ಅಜ್ಞಾನಿಗಳು ಅನುಭವಿಸುವ ಪಾಪದ ಸ್ಥಿತಿಗೆ ಬಹಳ ಸಮೀಪವಾಗಿರುವೆ. ಯಾವುದೇ ತಪ್ಪು ಮಾಡದವರನ್ನು ಕೊಲ್ಲುವ ಪಾಪದತ್ತ ಹೋಗುತ್ತಿರುವೆ....... ಆರ್ಯಪುತ್ರಾ, ಬಿಲ್ಲು ಬಾಣಗಳನ್ನು ಧರಿಸಿ ನೀನು ಈ ನಾಡನ್ನು ತಮ್ಮ ನಿವಾಸವಾಗಿಸಿದ ರಾಕ್ಷಸರ ಮೇಲೆ ಸಮರಕ್ಕೆ ಹೊರಟಿರುವೆ, ತಪ್ಪು ಮಾಡದವರನ್ನು ಎಲ್ಲೆಂದರಲ್ಲಿ ಸಂಹರಿಸಬೇಡ..... ಇದೇ ನನ್ನ ಪ್ರಾರ್ಥನೆ''

ಇದು ವಾಲ್ಮೀಕಿ ರಾಮಾಯಾಣದ "ಅರಣ್ಯಕಾಂಡ"ದಲ್ಲಿನ ಒಂದು ದೃಶ್ಯ ಸೀತೆ ರಾಮನಿಗೆ ಹೇಳುವ ಮಾತು. ಕೈಕೇಯಿಯ ಮಾತಿನಂತೆ ವನವಾಸ ಆರಂಭಿಸಿದ ಮೊದಲ ದಿನಗಳ ಘಟನೆ. ದಂಡಕಾರಣ್ಯದ ಕೆಲವು ಋಷಿಗಳು 'ರಾಕ್ಷಸ'ರ ಕಿರುಕುಳದಿಂದ ನಮಗೆ ರಕ್ಷಣೆ ನೀಡು ಎಂದು ಗೋಗರೆಯುತ್ತಾರೆ. 'ಅಯೋಧ್ಯಾಪತಿ' ರಾಮ ಆಗ ರಕ್ಷಣೆಯ ಭರವಸೆ ನೀಡುತ್ತಾನೆ. ರಾಮ-ಲಕ್ಷ್ಮಣ ರಾಕ್ಷಸರ ಸಂಹಾರಕ್ಕೆ ಹೊರಡುತ್ತಾರೆ. ಆದರೆ ಸೀತೆಗೆ ಇದು ಸರಿಕಾಣುವುದಿಲ್ಲ. ಆಗ ಆಕೆ ಹೇಳುವ ಮಾತಿದು.

ಈಗ 'ದೂರದರ್ಶನ'ದಲ್ಲಿ ಮತ್ತೆ ಪ್ರಸಾರವಾಗುತ್ತಿರುವ ನೆಹರೂರವರ 'ಡಿಸ್ಕವರಿ ಆಫ್ ಇಂಡಿಯಾ' ಕೃತಿ ಆಧಾರಿತ ಧಾರವಾಹಿಯಲ್ಲಿ ಈ ದೃಶ್ಯವನ್ನು ನೀವು ಕಂಡಿರಬಹುದು. ವಾಸ್ತವವಾಗಿ ಆರ್ಯರಿಗೆ 'ರಾಕ್ಷಸ'ರಾಗಿ ಕಂಡು ಬಂದವರು ಕಾಡಿನಲ್ಲಿ ವರ್ಷಗಳಿಂದ ವಾಸವಾಗಿದ್ದವರು, ಕಾಡು ಎಲ್ಲರದ್ದೂ ಎಂದು ನಂಬಿದ್ದವರು, ಭೂಮಿಯೆಲ್ಲಾ ರಾಜನದ್ದು ಎಂಬ ವಿಚಾರ ಬೆಳೆಯುತ್ತಿದ್ದುದನ್ನು ಒಪ್ಪದವರು, ತಮ್ಮ ಕಾಡನ್ನು ಕಡಿದು ನೆಲಸುವ 'ಋಷಿ'ಗಳ ವರ್ತನೆ ಸರಿಕಾಣದವರು. ಆದ್ದರಿಂದಲೇ ಸೀತೆ ಬಿಲ್ಲುಬಾಣಗಳಿಂದ ಅವರ ಸಂಹಾರ ಪಾಪಕ್ಕೆ ಸನಿಹವಾದ ಕೆಲಸ ಎಂದು ತನ್ನ ಭಾವನೆಯನ್ನು ತೋಡಿಕೊಂಡಳು.

ಶ್ರೀರಾಮನಿಗೆ ಸೀತೆಯ ಈ ಸಲಹೆ ಸರಿಯೆಂದೆನಿಸುತ್ತದೆ ಆದರೆ ಋಷಿಗಳಿಗೆ ವಚನ ನೀಡಿಯಾಗಿದೆಯಾದ್ದರಿಂದ ಅದನ್ನು ಪಾಲಿಸಲೇ ಬೇಕು ಎಂದು ಹೊರಡುತ್ತಾನೆ.

ಶ್ರೀರಾಮನ ಈ "ವಚನಪರಿಪಾಲನೆ" ಆದರ್ಶವನ್ನು ಪಾಲಿಸದ ಮಸೀದಿ ಭಂಜಕರಿಗೆ ಶ್ರೀರಾಮನಿಗೆ ಇಂತಹ ಸಲಹೆ ನೀಡುತ್ತಿದ್ದ ಸೀತೆ ಆತನ ಪಕ್ಕದಲ್ಲಿರುವುದು ಸರಿಬರಲಿಲ್ಲ. ಕೃಪಾಳು, ವಚನ ಪರಿಪಾಲಕ ಸೀತಾರಾಮ ಅವರಿಗೆ ಬೇಕಿಲ್ಲ. ಆದ್ದರಿಂದ ಉತ್ತರ ಭಾರತದ ಜನಸಾಮಾನ್ಯರ ಬಾಯಲ್ಲಿ ಕೇಳುವ 'ಜೈಸಿಯಾರಾಂ' ಕೋಮುವಾದಿಗಳು ಬಾಯಲ್ಲಿ 'ಜೈಶ್ರೀರಾಂ' ಆಯಿತು ಎನ್ನುತ್ತಾರೆ ಮಹಿಳಾ ಸಮಾನತೆಯಲ್ಲಿ ನಂಬಿಕೆಯಿಟ್ಟಿರುವ ಶ್ರೀಮತಿ ಮಧುಕಿಶ್ವರ್.

ಶ್ರೀರಾಮನ ಈ ಆದರ್ಶವನ್ನು ವಿಕೃತಗೊಳಿಸಿದಂತೆ ಕೋಮುವಾದಿಗಳು ಇನ್ನೊಂದು ಸಂಕೇತವನ್ನು ವಿಕೃತಗೊಳಿಸಿದ್ದಾರೆ ಎನ್ನುತ್ತಾರೆ. ದುಷ್ಟಶಕ್ತಿಗಳ ಸಂಹಾರಮಾಡುವ ದುರ್ಗೆ ಇವರ ಮಟ್ಟಿಗೆ ಕೋಮು ವಿಷ ಉಗುಳುವ ಮಹಿಳೆ ಮಾತ್ರ. ಸಾಧ್ವಿ ರಿತಂಬರಾ, ಉಮಾಭಾರತಿ ಇವರಿಗೆ ಬುದ್ಧಿವಾದ ಹೇಳುವ ಸೀತೆಯರು ಬೇಡ, ಕೋಮುವಿಷ ಉಗುಳುವ ಸಾಧ್ವಿರಿತಂಬರಾ, ಉಮಾಭಾರತಿಯಂತಹ 'ದುರ್ಗೆ'ಯರಷ್ಟೇ ಬೇಕು!

ತಿದ್ದುಪಡಿ

ಹಿಂದಿನವಾರ ಈ ಪುಟದಲ್ಲಿ ಪ್ರಕಟವಾದ "ಆರ್.ಎಸ್.ಎಸ್. ಕುರಿತ ಲೇಖನದ" "ಆರ್.ಎಸ್.ಎಸ್." ತಾನೊಂದು ಸಾಂಸ್ಕೃತಿಕ ಸಂಘಟನೆ ಎಂದೇಕೆ ಹೇಳಿಕೊಳ್ಳುತ್ತಿದೆ? ಎಂಬ ಶೀರ್ಷಿಕೆಯಡಿಯಲ್ಲಿರುವ ಭಾಗದ ಕೊನೆಯ ಪರಿಚ್ಛೆದದಲ್ಲಿ! - ಇನ್ನೂ ಎರಡು ತಿಂಗಳ ನಂತರ ಇನ್ನೊಂದು ಪತ್ರ ಬರೆದು ಆರ್.ಎಸ್.ಎಸ್‌ನ್ನು ಅನಗತ್ಯವಾಗಿಯೇ ಗುಜರಾತ್, ಬಿಹಾರದ ಆಂದೋಲನದೊಡನೆ, ಜೆ.ಪಿ.ಯವರ ಹೆಸರಿನೊಡನೆ ಸೇರಿಸಲಾಗಿದೆ ಎಂದರು...! ಎಂದಿರಬೇಕಿತ್ತು.

(ಜೆ.ಪಿ. ಎಂದರೆ ಜಯಪ್ರಕಾಶ್ ನಾರಾಯಣ್‌ರ)



"ಇದು ಭ್ರಮೆ" "ಭ್ರಮೆಯಾಗಿದ್ದರೂ ಅತ್ಯದ್ಭುತ" -ಬಜೆಟ್ ಬಗ್ಗೆ ಆರ್.ಕೆ. ಲಕ್ಷ್ಮಣ್

ಅಯೋಧ್ಯಾ ಕಾಂಡ



ಅಯೋಧ್ಯೆ ಕುರಿತ ಶ್ವೇತ ಪತ್ರ ಬಗ್ಗೆ ಸುರ್ಜೀತ್

ಒಬ್ಬ ಅಪರಾಧಿ ಬಯಲು ಇನ್ನೊಬ್ಬ ಅಪರಾಧಿ?

ಬಹಳ ದಿನಗಳಿಂದ ಕಾದಿದ್ದ ಅಯೋಧ್ಯಾ ಘಟನೆಗಳ ಕುರಿತ ಶ್ವೇತಪತ್ರವನ್ನು ಕೊನೆಗೂ ಬಹಳ ಹಿಂಜರಿಕೆಯ ನಂತರ, ವಿವಾದಗಳ ನಂತರ ನರಸಿಂಹರಾವ್ ಸರಕಾರ ಪ್ರಕಟಿಸಿತು. ಆದರೆ ಅದು ಈ ಘಟನೆಗಳ ಬಗ್ಗೆ ಹೇಳಿರುವುದಕ್ಕಿಂತ ಬಚ್ಚಿಟ್ಟಿರುವುದೇ ಹೆಚ್ಚು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಸುರ್ಜೀತ್ ಹೇಳಿದ್ದಾರೆ. ಇಂತಹ ಒಂದು ಮಹತ್ವದ ಘಟನೆಯ ಬಗ್ಗೆ ಸರಕಾರ ಹೊರಡಿಸುವ ಶ್ವೇತಪತ್ರ ಎಂದರೆ ಈ ವಿವಾದದ ಮೂಲ ಅಂಶ ಏನು, ಹಿಂದುತ್ವ ಸಿದ್ಧಾಂತ ಬೆಳೆದು ಸಮಾಜದಲ್ಲಿ ಅದಕ್ಕೊಂದು ಸ್ಥಾನ ದೊರೆಯುವಂತಾದುದು ಹೇಗೆ, ಈ ಘಟನೆ ಹೇಗೆ ನಡೆಯಿತು, ಏಕೆ ನಡೆಯಿತು ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ನೀಡಬೇಕಾಗಿತ್ತು. ಆದರೆ ಇವು ಯಾವುದಕ್ಕೂ ಉತ್ತರ ನೀಡದ ಇದೊಂದು ನಿರಾಶಾಜನಕ ದಸ್ತಾವೇಜು ಎಂದು ಸುರ್ಜೀತ್ ಹೇಳಿದ್ದಾರೆ. ಈ ಶ್ವೇತ ಪತ್ರದ ಒಂದೇ ಒಂದು ಉತ್ತಮ ಅಂಶ ಎಂದರೆ ಬಿ.ಜೆ.ಪಿ.ಯ ಗೋಸುಂಬೆತನವನ್ನು ಬಯಲಿಗೆಳೆದ ರೀತಿ. ಆದರೆ ಇತರ ಅಂಶಗಳಿಗೆ ಸಂಬಂಧಪಟ್ಟಂತೆ, ಮುಖ್ಯವಾಗಿ ಎದುರಿಸುವಲ್ಲಿ ಈ ಘಟನೆಗಳಲ್ಲಿ ಸರಕಾರದ ಪಾತ್ರದ ಬಗ್ಗೆ ಹಾಗೂ ಕಾಂಗ್ರೆಸ್(ಐ)ನ ಪಾತ್ರದ ಬಗ್ಗೆ ಈ ಶ್ವೇತಪತ್ರದಲ್ಲಿ ಕೆಲವಾದರೂ ನೇರಮಾತುಗಳು ಇರಬಹುದು ಎಂಬ ನಿರೀಕ್ಷೆ ಮಾತ್ರ ಪೂರ್ಣ ಸುಳ್ಳಾಗಿದೆ. ಸ್ವಯಂ ವಿಶ್ಲೇಷಣೆಯ ಬದಲು ನಮಗೆ ಕಾಣುವುದು ತನ್ನ ವಿಫಲತೆಯನ್ನು, ಅಲ್ಲ, ಮಸೀದಿಯ ಧ್ವಂಸದ ಚಳುವಳಿಯ ಪ್ರತಿಯೊಂದು ಹಂತದಲ್ಲೂ 'ಹಿಂದುತ್ವ' ಶಕ್ತಿಗಳಿಗೆ ನೀಡಿದ ರಿಯಾಯ್ತಿಗಳನ್ನು ಮಾಡಿಕೊಂಡ ರಾಜಿಗಳನ್ನು ಮುಚ್ಚಿಕೊಳ್ಳುವ ಸೂಕ್ಷ್ಮ ಪ್ರಯತ್ನವಷ್ಟೇ ಎಂದು ಸುರ್ಜೀತ್ ಹೇಳಿದ್ದಾರೆ. ಮುಚ್ಚಿದ್ದ ಬಾಗಿಲನ್ನು ತೆರೆಸಿದ್ದರಿಂದ ಹಿಡಿದು ಶಿಲಾನ್ಯಾಸಕ್ಕೆ ಅವಕಾಶ ನೀಡುವವರೆಗೆ ನೀಡಿದ ರಿಯಾಯ್ತಿಗಳನ್ನಾಗಲಿ, ನವಂಬರ್ 1990 ರಲ್ಲಿ 'ರಥಯಾತ್ರೆ'ಯ ಅಡ್ವಾಣಿಯವರನ್ನು ಬಂಧಿಸಬೇಕೆಂದು ಒತ್ತಾಯಿಸಿದ ಕಾಂಗ್ರೆಸ್ ಪಕ್ಷವೇ ರಾಷ್ಟ್ರೀಯ ಸರಕಾರ ಅಡ್ವಾಣಿಯವರನ್ನು ಬಂಧಿಸಿ ಕೋಮುವಾದಿಗಳಿಗೆ ಸವಾಲನ್ನು ಎದುರಿಸಿ ನಿಂತಾಗ ಆ ಸರಕಾರವನ್ನು ಬಿ.ಜೆ.ಪಿ. ಜತೆಗೂಡಿ ಉರುಳಿಸಿತು ಎಂಬ ಸತ್ಯವನ್ನಾಗಲೀ ಯಾರಾದರೂ ಮರೆಯಲು ಸಾಧ್ಯವೇ? ಇದೇ ರಿಯಾಯ್ತಿಯ, ರಾಜಿಯ ನಿಲುವು ನರಸಿಂಹರಾವ್ ಸರಕಾರದ ಆಳ್ವಿಕೆಯಲ್ಲೂ ಮುಂದುವರೆಯಿತು. ಈ ಸರಕಾರ ಏಕೆ ಕೋಮುವಾದಿ 'ಪರಿವಾರ'ದ ಖಾಸಗೀ ಭರವಸೆಗಳನ್ನು ವರದಿಕೂಟಿತು ನಂಬಿಕೂತಿತು?

ಶ್ವೇತ ಪತ್ರದಲ್ಲಿ ವಿವರಿಸಿದ ಡಿಸೆಂಬರ್ 6, 1992 ರ ಘಟನಾಕ್ರಮದಿಂದಲೇ ಕೇಂದ್ರ ಸರಕಾರದ ಬೇಜವಾಬ್ದಾರಿತನ ಎದ್ದುಕಾಣುತ್ತದೆ. ಮಧ್ಯಾಹ್ನ 12 ಗಂಟೆಯ ವೇಳೆಗೆ, ಮಸೀದಿಯ ಮೇಲೆ ಧಾಳಿಯ ಮೊದಲ ವರದಿಗಳು ಬಂದಿದ್ದವು. ಆದರೂ ನಂತರ ಪೂರ್ಣ ಆರು ಗಂಟೆ ನಪುಂಸಕನಂತೆ ಸರಕಾರ ಏಕೆ ನಿಂತಿತ್ತು ಎಂಬುದಕ್ಕೆ ಈ ಶ್ವೇತಪತ್ರದಲ್ಲಿ ಯಾವುದೇ ಕಾರಣ ಸಿಗುವುದಿಲ್ಲ ಎಂದಿರುವ ಸುರ್ಜೀತ್ ಅದರ ನಂತರವೂ ಜಾತ್ಯಾತೀತ ಶಕ್ತಿಗಳನ್ನು ಅಣಿನೆರೆಸಿ ಕೋಮುವಾದಿಗಳನ್ನು ಎದುರಿಸುವಲ್ಲಿ ಕಾಂಗ್ರೆಸ್ ಸರಕಾರ ಮುತುವರ್ಜಿ ಏಕೆ ಕಾಣಿಸುತ್ತಿಲ್ಲ ಎಂಬುದಕ್ಕೆ ಈ ಶ್ವೇತ ಪತ್ರದಿಂದ ಏನೂ ಸಮಜಾಯಿಷಿ ಸಿಗುವುದಿಲ್ಲ ಎಂದಿದ್ದಾರೆ, ಚುನಾವಣಾ ಘೋಷಣೆಯಲ್ಲಿ ಹಾಗೂ ನಂತರ ಪ್ರಧಾನ ಮಂತ್ರಿಗಳು ಕೆಂಪು ಕೋಟೆಯ ಮೇಲಿಂದ ನೀಡಿರುವ ಕೆಲವು ಭರವಸೆಗಳನ್ನು ಏಕೆ ಈಡೇರಿಸಲಿಲ್ಲ ಎಂಬ ಬಗ್ಗೆ ಪ್ರಸ್ತಾಪವೂ ಶ್ವೇತಪತ್ರದಲ್ಲಿ ಕಾಣುವುದಿಲ್ಲ.

ಕಾಂ. ಸುರ್ಜೀತ್ ಈ ಶ್ವೇತಪತ್ರಕ್ಕೆ ಸಂಬಂಧಪಟ್ಟಂತೆ ಇನ್ನು ಒಂದು ಅಂಶದ ಬಗ್ಗೆ ಖೇದ ವ್ಯಕ್ತಪಡಿಸಿದ್ದಾರೆ. ಆಳುವ ಪಕ್ಷ ತನ್ನ ರಾಜಿ ನೀತಿಯನ್ನು ತ್ಯಜಿಸುವ ಲಕ್ಷಣಗಳು ಇನ್ನು ಕಾಣುವುದಿಲ್ಲ ಎಂಬುದು ಈ ಶ್ವೇತ ಪತ್ರವನ್ನು ತಯಾರಿಸಿದ ರೀತಿಯಲ್ಲೇ ಕಾಣುತ್ತದೆ ಎಂದು ಅವರು ಹೇಳಿದ್ದಾರೆ ಉದಾ : ಡಿಸೆಂಬರ್ 1949 ಡಿಸೆಂಬರ್ 6,1992 ರ ವರೆಗೆ ಆ "ಕಟ್ಟಡ"ವನ್ನು ಮಸೀದಿಯಾಗಿ ಬಳಸಿರಲಿಲ್ಲ ಎಂದು ಬಿಜೆಪಿ ದನಿಯಲ್ಲೇ ಅದು ಮಾತನಾಡಿದೆ. ಕಾಂಗ್ರೆ ಸರಕಾರ ಕೂಡಾ ಇದನ್ನು 'ಮಸೀದಿಯನ್ನದೆ' 'ಕಟ್ಟಡ' ಎಂದಿದೆ ಈ ಶ್ವೇತ ಪತ್ರದಲ್ಲಿ! ಡಿಸೆಂಬರ್ 1949 ರಲ್ಲಿ ಕಳ್ಳತನದಿಂದ ಮೂರ್ತಿಗಳನ್ನು ಮಸೀದಿಯೊಳಗಿಟ್ಟ ಮೇಲಷ್ಟೇ ಬಾಬ್ರಿ ಮಸೀದಿ 'ವಿವಾದಿತ ಕಟ್ಟಡ' ವಾಯಿತು ಎಂಬುದು ಸರಕಾರಕ್ಕೆ ತಿಳಿದೇ ಇಲ್ಲವೇ?

ಒಟ್ಟಿನಲ್ಲಿ ನರಸಿಂಹರಾವ್ ಸರಕಾರದ ಈ ಶ್ವೇತಪತ್ರ ಬಿ.ಜೆ.ಪಿ.ಯ ಸುಳ್ಳುಗಳನ್ನು ಬಯಲಿಗೆಳೆದರೂ ತನ್ನ ರಾಜಿ ನಿಲುವು ರಿಯಾಯ್ತಿಗಳು ಹಾಗೂ ಕೆಲವು ನಿರ್ಣಾಯಕ ಘಟ್ಟಗಳಲ್ಲಿ ನಿಷ್ಕ್ರಿಯತೆಯ ಮೂಲಕ ಹೊಣೆಯೇನೂ ತಪ್ಪಿಸಿಕೊಳ್ಳಲಾಗದ ಇನ್ನೊಂದು ಪಕ್ಷದ ಅಂದರೆ ಕಾಂಗ್ರೆಸ್ (ಐ) ಹಾಗೂ ಅದರ ಸರಕಾರದ ವಿಫಲತೆಗಳತ್ತ ಬೊಟ್ಟು ಮಾಡಿಲ್ಲ ಎಂದು ಸುರ್ಜೀತ್ ಹೇಳಿದ್ದಾರೆ.

ಬೀದಿಯ ತುಂಬಾ ಕೈ ಚಾಚು

ಬಾಗಿಲು ದಾಟಿ ಹೊರಗೆ
ಹೆಜ್ಜೆ ಇಡುವ ಮುನ್ನು ಯೋಚಿಸು
ಯಾರು ನೀನು?

ಬೀದಿಯಲ್ಲಿ, ಆಯಕಟ್ಟಿನ ಜಾಗದಲ್ಲಿ
ಕೊಲೆ ಗಡುಕರು ಅವಿತಿದ್ದಾರೆ

ನಮ್ಮ ಹಳೆಯ ನಂಬಿಕೆಗಳು
ಅವರ ಆಯುಧಗಳು

ಪೋಲೀಸರು, ಪ್ಯಾರ ಮಿಲ್ಟರಿಯವರು
ತಮ್ಮ ಧರ್ಮ ನೆನೆದು
ಬಂದೂಕು ಗುರಿಯಾಗಿಸಿದ್ದಾರೆ:

ಹೇಳು ಯಾರು ನೀನು!
ಎಲ್ಲಿಗೆ ಹೊರಟಿರುವೆ!

ಶಾಂತಿ ಹೇಳಬೇಕಿದ್ದ ಮಂದಿರ
ದ್ವೇಷ ಬೋಧಿಸುತ್ತಿದೆ.

ಬದುಕು ಹಂಚಿಕೊಳ್ಳುವ ಕುರಾನ್‌ನ್ನು
ಮಸೀದಿ ತೊಳೆದುಕೊಂಡಿದೆ.

ತಪ್ಪು ಒಪ್ಪಿಕೊಳ್ಳುವ ಪ್ರಾರ್ಥನೆಯಾಗಿ
ಚರ್ಚ್ ಉಳಿದುಕೊಂಡಿಲ್ಲ

ಈಗ ಎಲ್ಲಿಗೆ ಹೋಗುವೆ?

ಕೈ ಸ್ವತಂತ್ರವಾಗಿಸಿ
ಬುದ್ಧಿ ಬೆಳೆಸಿಕೊಂಡು
ಅಷ್ಟು ದೂರ ನಡೆದು ಬಂದಿರುವೆ.

ತಿರುಗಿ ಹೋಗಬೇಕೆಂದಿರುವುದು
ಎಲ್ಲಿಗೆ?

ಪ್ರಶ್ನೆಗುತ್ತರವೆನ್ನುವಂತೆ
ಅವನು ಬೀದಿಗೆ ಬಂದ

ತ್ರಿಶೂಲದಂತೆ, ಚೂರಿಯಂತೆ
ನೇರವಾಗಿ ಎದೆಗೆ
ಯಾರು ನೀನು?

ದಿನದ ಬದುಕು ನೂಕುವವನು
ಅವನು
ಸೂರ್ಯನಂತೆ ನಕ್ಕುಬಿಟ್ಟ

ದುಡಿಯುವ ಜನ
ಬೀದಿಯ ತುಂಬಾ ಕೈಚಾಚುವಂತೆ
ತಿಪ್ಪೆಯಲ್ಲಿ ಹೂವು ಬಿರಿಯುವಂತೆ

ನಗು ಹರಡಿದಂತೆ
ತ್ರಿಶೂಲ, ಚೂರಿ ಹಿಡಿದವರು
ಕಲ್ಲಾದಂತೆ

ಶಾಲೆಗಳಲ್ಲಿ ಮಕ್ಕಳು
ಚರಿತ್ರೆಯಿಂದ ಪಾಠ ಕಲಿಯುತ್ತಿದ್ದಾರೆ.

-- ಪರಶುರಾಮ್ ಕಲಾಲ್
ಹೊಸಪೇಟೆ

ಮುಂಬೈ ಕೋಮುಗಲಭೆಗಳು

ಈ ಅಪಾರ ನಷ್ಟಕ್ಕೆ ಹೊಣೆ ಯಾರು?

ಮುಂಬೈಯಲ್ಲಿ ಎರಡುಸುತ್ತುಗಳಲ್ಲಿ ನಡೆದ ಅಭೂತಪೂರ್ವ ಹಿಂಸಾಚಾರದ ಬಗ್ಗೆ ನೀವು ಸಾಕಷ್ಟು ಓದಿದ್ದೀರಿ, ಸಹಜವಾಗಿಯೇ ಇದರಿಂದ ದೇಶದ, ಮುಂಬೈಯ ಆ ಮೂಲಕ ಜನರೆಲ್ಲರ ಆರ್ಥಿಕ ನಷ್ಟವೂ ಆಗಿದೆ. ಮುಂಬೈಯ 'ಟಾಟಾ ಸರ್ವಿಸಸ್' ಸಂಸ್ಥೆ ನಡೆಸಿದ ಅಧ್ಯಯನವೊಂದರ ಮುಖ್ಯ ಅಂಶಗಳು.

- ಕೈಗಾರಿಕಾ ಉತ್ಪಾದನೆಯಲ್ಲಿ ಒಟ್ಟು ಸುಮಾರು 650 ಕೋಟಿ ರೂಗಳ ನಷ್ಟ.
- ಒಟ್ಟು ಉತ್ಪಾದನಾ ನಷ್ಟ 1250 ಕೋಟಿ ರೂ.
- 1.2. ಕೋಟಿ ಮಾನವ ದಿನಗಳ ನಷ್ಟ.
- ತೆರಿಗೆ ಆದಾಯದಲ್ಲಿ 125 ರಿಂದ 150 ಕೋಟಿ ರೂ. ನಷ್ಟ.
- ಸುಮಾರು 50 ಸಾವಿರ ಮಂದಿಯನ್ನು ನಿರಾಶ್ರಿತರನ್ನಾಗಿ ಮಾಡಿದ 10 ಸಾವಿರ ಮನೆಗಳ ಭಸ್ಮ 70 ರಿಂದ 300 ದೇಕರಿಗಳ, 70 ಶೇ. ಕ್ಕೂ ಹೆಚ್ಚು ಮರದ ದಿಮ್ಮಿಗಳ ಗೋದಾಮುಗಳ, 500 ಟ್ರಕ್ಕುಗಳ, 150 ಟ್ಯಾಕ್ಸಿಗಳ ಭಸ್ಮದಿಂದಾಗಿ ಸುಮಾರು 4000 ಕೋಟಿ ರೂ. ಆಸ್ತಿ ಪಾಸ್ತಿಗಳ ನಷ್ಟ.
- ಮುಂಬೈ ಬಂದರಿನ ಕೆಲಸ ನಿಂತು ಹೋದುದರಿಂದ 1000 ಕೋಟಿ ರೂ. ನಷ್ಟ.

ಮಹಿಳೆಯರಿಗೆ "ಹಿಂದುತ್ವ" ....

ಪುಟ 2ರಿಂದ

ವಿಶೇಷ ಪ್ರಯತ್ನ ನಡೆಸಿದ್ದಾರೆಯೇ? ಇತ್ತೀಚೆಗೆ ಚಿಕ್ಕಹುಡುಗಿಯೊಬ್ಬಳ ಮದುವೆ ನಡೆಸುವುದನ್ನು ನಿಲ್ಲಿಸಲು ಪ್ರಯತ್ನಪಟ್ಟ ಅಂಗನವಾಡಿ ಕಾರ್ಯಕರ್ತೆಯೊಬ್ಬಳಿಗೆ ವಿಪರೀತ ದೈಹಿಕ ಮಾನಸಿಕ ಕಿರುಕುಳ ಬಂದಾಗ ಆಕೆಗೆ ಕನಿಷ್ಠ ರಕ್ಷಣೆ ನೀಡಲಾಗದಿದ್ದ ಸರಕಾರ ಕೂಡಾ ಬಿ.ಜೆ.ಪಿ.ಯದ್ದೇ ಅಲ್ಲವೇ?

ಆರ್.ಎಸ್.ಎಸ್. ವರದಕ್ಷಿಣೆಯನ್ನು ವಿರೋಧಿಸುತ್ತದೆ. ಆದರೆ ತಾನೊಂದು ಸಾಂಸ್ಕೃತಿಕ ಪುನರುಜ್ಜೀವನಕ್ಕಾಗಿ ದುಡಿಯುವ ಶಿಸ್ತಿನ ಸಂಘಟನೆ ಎಂದು ಹೇಳಿಕೊಳ್ಳುವ ಇದು ತನ್ನ ಸದಸ್ಯರು ವರದಕ್ಷಿಣೆ ತಗೊಳ್ಳಬಾರದು ಎಂಬ ಶಿಸ್ತನ್ನು ವಿಧಿಸಿಲ್ಲ. ಆರ್.ಎಸ್.ಎಸ್.ನ ಮಹಿಳಾ ವಿಭಾಗ 'ರಾಷ್ಟ್ರಸೇವಿಕಾ ಸಂಘ'ದ ಸದಸ್ಯೆಯರು ಮಹಿಳೆಯರ ಹಕ್ಕುಗಳು, ಕಲ್ಯಾಣಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಬಾರದು, ಆರ್.ಎಸ್.ಎಸ್ ಸಂದೇಶವನ್ನು "ಮಾತೆಯರಲ್ಲಿ, ಸೋದರಿಯರಲ್ಲಿ" ಸಾರಬೇಕಷ್ಟೆ, ವರದಕ್ಷಿಣೆಯ ವಿರುದ್ಧ ಮಹಿಳೆಯರನ್ನು ಸಂಘಟಿಸಬಾರದು. ವರದಕ್ಷಿಣೆಗೆ ಹಣಬೇಕಾಗಿರುವ ಸೋದರರಿಗೆ ಹಣ ಸಂಗ್ರಹಿಸಿ ಕೊಡುವ 'ಸಹಾಯಕ' ಕೆಲಸಮಾಡಬೇಕು. ಯಾವುದೇ ಸಂದರ್ಭದಲ್ಲಿಯೂ "ನನ್ನ ಹಕ್ಕನ್ನು ಕಸಿದುಕೊಂಡಿದ್ದೀರಿ" ಎಂದು ಕುಟುಂಬದವರನ್ನು ಪ್ರಶ್ನಿಸಲೇಬಾರದು.-ಇದು ಮಹಿಳೆಯರ ಬಗ್ಗೆ "ಹಿಂದುತ್ವ" ವಾದಿಗಳ ನಿಲುವು ಎನ್ನುತ್ತಾರೆ ಲಲಿತಾ ಪಣಿಕ್ಕರ್.

ಶಾಬಾನೋ ಮೊಕದ್ದಮೆಯಲ್ಲಿ ರಾಜೀವ್‌ಗಾಂಧಿ ಓಲೈಸಲೆತ್ನಿಸಿದ ಮತಾಂಧರಿಗೂ ಈ 'ಹಿಂದುತ್ವ'ವಾದಿಗಳಿಗೂ ಮೂಲಭೂತವಾಗಿ ಏನಾದರೂ ವ್ಯತ್ಯಾಸ ಕಾಣುತ್ತದೆಯೇ?

ಸುಂದರ ಐತಿಹಾಸಿಕ ಸ್ಮಾರಕಗಳ ಗತಿಯೇನು?

ಇತಿಹಾಸಕಾರರ ಪ್ರಶ್ನೆ

ಭಾರತ ಸರಕಾರ ರಾಮಜನ್ಮಭೂಮಿ-ಬಾಬ್ರಿಮಸೀದಿಯ ವಿವಾದವನ್ನು ಸುಪ್ರೀಂ ಕೋರ್ಟಿಗೆ ಒಪ್ಪಿಸಿದ ರೀತಿ ಅತ್ಯಂತ ಆತಂಕಕಾರಿ. ಯಾವುದೇ ಕೋಮಿನ ಯಾವುದೇ ಧಾರ್ಮಿಕ ಕಟ್ಟಡ ಒಂದು ಸ್ಥಳದಲ್ಲಿ ಒಂದು ಕಾಲದಲ್ಲಿ ಇತ್ತು ಎಂಬ ಭಾವನೆಗೆ ಅವಕಾಶವಿದ್ದರೆ ಒಂದು ಸ್ಮಾರಕವನ್ನು ಕೆಡವಬಹುದು ಎಂದು ಇದರ ಅರ್ಥವಾಗುತ್ತದೆ. ಡಿಸೆಂಬರ್ 6 ರ ಕೃತ್ಯವನ್ನು ಈ ರೀತಿ ಸಮರ್ಥಿಸಿಕೊಂಡರೆ ದೇಶದಲ್ಲೆಡೆ ಇತರ ಹಲವಾರು ಐತಿಹಾಸಿಕ ಸ್ಮಾರಕಗಳ ಗತಿಯೇನು ಎಂದು ಇತಿಹಾಸಕಾರರು ಪ್ರಶ್ನಿಸಿದ್ದಾರೆ. ಭಾರತದ ಇತಿಹಾಸಕಾರರ ಅತೀ ದೊಡ್ಡ ಸಂಘಟನೆ ಭಾರತೀಯ ಇತಿಹಾಸ ಸಮ್ಮೇಳನದ (ಇಂಡಿಯನ್ ಹಿಸ್ಟರಿ ಕಾಂಗ್ರೆಸ್) ದ 53 ನೇ ಅಧಿವೇಶನ ಅಂಗೀಕರಿಸಿದ ಒಂದು ನಿರ್ಣಯ ಈ ಪ್ರಶ್ನೆಯನ್ನು ಎತ್ತಿದೆ.

ಆಂಧ್ರಪ್ರದೇಶ ವಾರಂಗಲ್‌ನಲ್ಲಿ ಫೆಬ್ರವರಿ 13-15 1993, ನಡೆದ ಈ ಅಧಿವೇಶನದಲ್ಲಿ ದೇಶದ ಮೂಲೆಮೂಲೆಗಳಿಂದ 500 ಕ್ಕೂ ಹೆಚ್ಚು ಇತಿಹಾಸಕಾರರು ಭಾಗವಹಿಸಿದ್ದರು.

ಡಿಸೆಂಬರ್ 6 ರ ಘಟನೆಯ ಬಗ್ಗೆ ಭಾರತದ ರಾಷ್ಟ್ರಪತಿಯ ಹಾಗೂ ಭಾರತೀಯ ಜನತೆಯ ಆತಂಕ ಹಾಗೂ ಕ್ರೋಧದಲ್ಲಿ ತಾವೂ ಭಾಗಿಗಳು ಎಂದ ಇತಿಹಾಸಕಾರರ ಸಮ್ಮೇಳನದ ಒಂದು ನಿರ್ಣಯ ಕಳೆದ ಹಲವು ವರ್ಷಗಳಿಂದ ಕೋಮು ಶಕ್ತಿಗಳು ಐತಿಹಾಸಿಕ ಸ್ಮಾರಕಗಳಿಗೆ ಬೆದರಿಕೆಯೊಡ್ಡಿವೆ, ಅವನ್ನು ರಕ್ಷಿಸಬೇಕು ಎಂದು ಸರಕಾರವನ್ನು ಪದೇ ಪದೇ ವಿನಂತಿಸಿಕೊಂಡದ್ದನ್ನು ನೆನಪಿಸಿಕೊಂಡಿದೆ. ಚಾರಿತ್ರಿಕ ಮಹತ್ವದ 450 ವರ್ಷಗಳ ಕಟ್ಟಡವನ್ನು ಧ್ವಂಸಮಾಡುವಲ್ಲಿ ಉತ್ತರಪ್ರದೇಶ ಸರ್ಕಾರದ ನಿಷ್ಕ್ರಿಯತೆ ಹಾಗೂ ಪರೋಕ್ಷಪ್ರೋತ್ಸಾಹವನ್ನು ಈ ನಿರ್ಣಯ ಖಂಡಿಸಿದೆ. ಭಾರತ ಸರಕಾರವೂ ಈ ಕಟ್ಟಡಕ್ಕೆ ಪ್ರಾಚೀನ ಸ್ಮಾರಕಗಳ ಶಾಸನ 1958 ರ ಪ್ರಕಾರ ದೊರೆಯಬೇಕಾಗಿದ್ದ ರಕ್ಷಣೆಯನ್ನು ನೀಡದೆ ತನ್ನ ಪ್ರಾಥಮಿಕ ಜವಾಬ್ದಾರಿ ನಿರ್ವಹಿಸುವಲ್ಲಿ ಏಕೆ ವಿಫಲವಾಯಿತು ಎಂದು ಪ್ರಶ್ನಿಸಿದೆ. ಈ ಕಟ್ಟಡದ ಆವರಣದಲ್ಲಿ ಕಾನೂನಿಗೆ ವಿರುದ್ಧವಾಗಿ ನಡೆದುಕೊಳ್ಳುವುದನ್ನು ತಡೆಯುವಲ್ಲಿ ತನ್ನ ಜವಾಬ್ದಾರಿಯನ್ನು ಭಾರತ ಪುರಾತತ್ವಸರ್ವೇಕ್ಷಣ ಸಂಸ್ಥೆಯು ನಿಬಾಯಿಸಿಲ್ಲ ಎಂದೂ ಈ ನಿರ್ಣಯ ಖೇದ ವ್ಯಕ್ತಪಡಿಸಿದೆ. ಡಿಸೆಂಬರ್ 6, 1992ರ ನಂತರ ಅಥವಾ ಮೊದಲು ಭಾರತ, ಪಾಕಿಸ್ತಾನ, ಬಾಂಗ್ಲಾ ದೇಶಗಳಲ್ಲಿ ಪೂಜಾಸ್ಥಳಗಳ ನಾಶವನ್ನು ಏಕಕಂಠದಿಂದ ಖಂಡಿಸಿದೆ.

ಇತಿಹಾಸ ಸಮ್ಮೇಳನ ಇನ್ನೊಂದು ನಿರ್ಣಯ ಅಂಗೀಕರಿಸಿ ಕಳೆದೆರಡು ವರ್ಷಗಳಲ್ಲಿ ಉತ್ತರ ಪ್ರದೇಶ ಹಾಗೂ ಮಧ್ಯ ಪ್ರದೇಶದ ಸರಕಾರಗಳು ಇತಿಹಾಸ ಪಠ್ಯಕ್ರಮದಲ್ಲಿ, ಪಠ್ಯಪುಸ್ತಕಗಳಲ್ಲಿ ಅಚಾರಿತ್ರಿಕ, ಅವೈಜ್ಞಾನಿಕ ಹಾಗೂ ಸಂಕುಚಿತ ವಿಚಾರಗಳನ್ನು ತೂರಿಸಿರುವುದರ ಬಗ್ಗೆ ಅಪಾರ ಖೇದ ವ್ಯಕ್ತಪಡಿಸುತ್ತಾ ಇತಿಹಾಸ ಪಠ್ಯಕ್ರಮದ ಬಗ್ಗೆ ಭಾರತ ಸರಕಾರ 'ಭಾರತ ಇತಿಹಾಸ ಕಾಂಗ್ರೆಸ್' ನೊಡನೆಯೂ ಕಾಲಕಾಲಕ್ಕೆ ಸಮಾಲೋಚನೆ ನಡೆಸಬೇಕು ಎಂದು ಒತ್ತಾಯಿಸಿದೆ. ಇತಿಹಾಸ ಪಠ್ಯಪುಸ್ತಕಗಳ ಬಗ್ಗೆ ಒಂದು ಸ್ಥಾಯಿ ಸಮಿತಿಯನ್ನು ಇತಿಹಾಸಕಾರರ ಅಧಿವೇಶನ ರಚಿಸಿಕೊಂಡಿದೆ.

ಮತ್ತೊಂದು ನಿರ್ಣಯದಲ್ಲಿ ಧಾರ್ಮಿಕ ಸಂಕೇತಗಳನ್ನು ವಿವಿಧ ಮೂಲಭೂತವಾದಿ ಸಂಘಟನೆಗಳು ದುರುಪಯೋಗಪಡಿಸಿಕೊಂಡು ಕೋಮು ದ್ವೇಷ ಹರಡುತ್ತಿರುವ ಬಗ್ಗೆ ದೇಶದ ಈ ಪ್ರಮುಖ ಇತಿಹಾಸಕಾರರ ಸಂಘಟನೆ ಆತಂಕವನ್ನು ವ್ಯಕ್ತಪಡಿಸಿ ವೈಜ್ಞಾನಿಕ, ಐತಿಹಾಸಿಕ ಸಂಶೋಧನೆಯನ್ನು ಕತ್ತುಹಿಸುಕುವ ಯೋಜನಾಬದ್ಧ ಪ್ರಯತ್ನ ನಡೆದಿದೆಯೆಂದು ಪ್ರತಿಭಟನೆ ವ್ಯಕ್ತಪಡಿಸಿತು.

ನಾಲ್ಕನೆ ನಿರ್ಣಯದಲ್ಲಿ ನವದೆಹಲಿಯ ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯದಲ್ಲಿ ಸಂಕುಚಿತ ಬುದ್ಧಿಯ ರೌಡಿ ಶಕ್ತಿಗಳು ಇತಿಹಾಸ ಪ್ರಾಧ್ಯಾಪಕ ಹಾಗೂ ಪ್ರೋ ವೈಸ್ ಚಾನ್ಸೆಲರ್ ಡಾ. ಮುಶೀರುಲ್ ಹಸನ್ ಮೇಲೆ ಹಲ್ಲೆ ನಡೆಸಿದ್ದನ್ನು ಖಂಡಿಸಲಾಯಿತು. ದೇಶದ ಜಾತ್ಯಾತೀತ ಸ್ವರೂಪವನ್ನು ಕಾಪಾಡಿಕೊಳ್ಳಲು ಎಲ್ಲಾ ಇತಿಹಾಸಕಾರರು ಹಾಗೂ ದೇಶಪ್ರೇಮಿ ಶಕ್ತಿಗಳು ಒಂದಾಗಬೇಕೆಂದು ಇತಿಹಾಸಕಾರರ ಸಮ್ಮೇಳನ ಕರೆ ನೀಡಿದೆ.

ಬಜೆಟ್ ಎಂಬ ಮಾಯಾ ಬಜಾರ್‌ನಲ್ಲಿಯ ಮತ್ತಷ್ಟು ಮಾಯಾಮಂತ್ರಗಳು

ಜಿ.ಎನ್. ನಾಗರಾಜ್

ನೋಡ ನೋಡುತ್ತಲೆ ಎನೇತಹ ಮಾಯಾ! ಎಂತಹ ಇಂದ್ರಜಾಲ!! ರೇಷನ್ ಅಂಗಡಿಗಳ ಮುಂದೆ ಕಿಕ್ಕಿರಿದು ನೆರೆದು, ಒಬ್ಬರ ಮೇಲೊಬ್ಬರು ಬಿದ್ದು ಗುದ್ದಾಡಿ ಕೊನೆಗೆ ಮೈಲುದ್ದ ಬೆಳೆಯುತ್ತಿದ್ದ ಕ್ಯೂಗಳೆಲ್ಲವ ದಿಢೀರನೆ ಮಾಯಾ. ಅನ್ಯಾಯ ಬೆಲೆ ಅಂಗಡಿಗಳ ಮುಂದೆ ಗಂಟೆಗಟ್ಟಲೇ ಸೊರಗುವ ಪಾರುಮಾಡಿ ಮನಮೋಹನ್‌ಸಿಂಗ್ ಎಂತಹ ಮಾಟಗಾರ!

ರೇಷನ್ ಅಂಗಡಿ ಮುಂದೆ ಕ್ಯೂ ಮಾಯಾ. ಅಂಗಡಿಗಳ ಒಳಗೆ ಅಕ್ಕಿ ಗೋಧಿಗಳೇ ಮಾಯಾ! ಮತ್ತೆ ತಮಾಷೆಯೆಂದರೆ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಅಂದರೆ ರೇಷನ್ ಅಂಗಡಿಗಳಲ್ಲಿ ಹೆಚ್ಚು ರೇಷನ್ ಸಿಗಬೇಕೆಂದು ನರಸಿಂಹರಾವ್ ಸರ್ಕಾರ ತಿರ್ಮಾನ ಮಾಡಿ ಅದಕ್ಕಾಗಿ ಮನಮೋಹನ್‌ಸಿಂಗರು ಹಿಂದಿನ ವರ್ಷ 200 ಕೋಟಿ ರೂ ಹಣ ಹೆಚ್ಚು ನೀಡಿದ್ದಾರಂತೆ ಬಜೆಟ್‌ನಲ್ಲಿ. ಆದರೂ ರೇಷನ್ ಅಂಗಡಿಗಳಲ್ಲಿ ಕಷ್ಟಗಳಿಂದ ಭಾರತದ ಬಡ ಜನರನ್ನು ರೇಷನ್ ಕಾಣ ಸಿಗುವುದಿಲ್ಲವೆಂದರೆ ಬಜೆಟ್‌ನಲ್ಲಿ ಇದೇನಾದರೂ ಸ್ಥಳೀಯ ಮೋಸವೋ ರೇಷನ್ ಅಂಗಡಿ ಮಾಲೀಕರ ಮಾಮೂಲಿ ಕಳ್ಳ ಮಾರಾಟವೋ?

ಇದಕ್ಕೆ ಮನಮೋಹನಸಿಂಗರ ಕೈ ಚಳಕವೆಂದು ಕರೆಯುವುದು. ಇದೇನು ನಮ್ಮ ನಿಮ್ಮಂತಹ ಸಾಧಾರಣ ಹಸ್ತವೇ! ಭೂಮಿಯ ಮೇಲಿನ ಸ್ವರ್ಗವಾದಂತಹ ಅಮೇರಿಕದ ರಾಜಧಾನಿ ವಾಷಿಂಗ್ಟನ್ನಿನಲ್ಲಿ ದೇವಾನುದೇವತೆಗಳ ಬೀಡೊಂದಿದೆ. ಐ.ಎಂ.ಎಫ್. ವಿಶ್ವಬ್ಯಾಂಕ್ ಎಂದು ಅದಕ್ಕೆ ಹೆಸರು ಅಂತಹ ಸುರರ ಲೋಕದಲ್ಲಿ ವರ್ಷಗಟ್ಟಲೇ ಮಿದ್ದಿ, ತಿದ್ದಿ, ಹದಮಾಡಿ ಭಾರತಕ್ಕೆ ರವಾನೆಮಾಡಿದ ಕೈಗಳವು. ಅದರ ಕೈ ಚಳಕ ನೋಡಿ.

92-93 ರ ಬಜೆಟ್‌ನಲ್ಲಿ ಆಹಾರದ ಸಬ್ಸಿಡಿಗಾಗಿ 2800 ಕೋಟಿ ತೆಗೆದಿರಿಸಲಾಗಿತ್ತಂತೆ. 93-94 ರ ಬಜೆಟ್‌ನಲ್ಲಿ ಅದೇ ಕೆಲಸಕ್ಕಾಗಿ 3000 ಕೋಟಿ ತೆಗೆದಿರಿಸಿ ಅದನ್ನು 200 ಕೋಟಿ ಹೆಚ್ಚಿಸಲಾಗಿದೆಯೆಂತೆ. ಆದರೆ 92-93 ರಲ್ಲಿ ಆಹಾರದ ಸಬ್ಸಿಡಿ ಕಡಿತಮಾಡಲು ಎರಡುಬಾರಿ ರೇಷನ್ ಬೆಲೆ ಏರಿಸಿದರೂ ಗಳಂತೆ, ಎಂದರೆ ಈಗ 93-94ರ ಬಜೆಟ್‌ನಲ್ಲಿ ಕೂಡ ಮಾಡಿರುವ 3000 ಕೋಟಿ ರೂ ನಿಜವಾಗಿ ಆಹಾರದ ಸಬ್ಸಿಡಿಗಾಗಿ ಖರ್ಚಾಗಿರುವುದು 3500 ರಿಂದ 3900 ಕೋಟಿ ರೂ ನಿಜವಾದ ಅಗತ್ಯಕ್ಕಿಂತ 500-900 ಕೋಟಿ ರೂ ಕಡಿಮೆ.

ಮತ್ತೆ ಇನ್ನೊಂದು ಒಳ ಮ್ಯಾಜಿಕ್ಕೂ ಇದೆ ಈ ಮಾರಟದಲ್ಲಿ 92-93 ರಲ್ಲಿ ರಸಗೊಬ್ಬರಗಳ ಬೆಲೆ ಏರಿಸಿ ಅದರ ಫಲವಾಗಿ ಗದ್ದಲ ಮಾಡತೊಡಗಿದ ಶ್ರಿಮಂತ, ಭೂಮಾಲಕರನ್ನು ತೃಪ್ತಿ ಪಡಿಸಲು ಆಹಾರ ಧಾನ್ಯಗಳ ಸಂಗ್ರಹಣೆ ಬೆಲೆಯನ್ನು ಸಾರಾಸಗಟಾಗಿ ಒಂದು ಕ್ವಿಂಟಲಿಗೆ 50-90 ರೂಗಳಷ್ಟು ಏರಿಸಿದ್ದು ನೆನಪಿದೆಯೇ?

ಈ ಬೆಲೆ ಏರಿಕೆಗೆ ಸಮನಾಗಿ ಆಹಾರವನ್ನು ಕೊಳ್ಳಲು ಮೀಸಲಿಡುವ ಹಣವನ್ನು ಹಾಗೂ ಸಬ್ಸಿಡಿಯನ್ನು ಹೆಚ್ಚಿಸದಿದ್ದರೆ ಹಿಂದಿನವರ್ಷದಷ್ಟು ಆಹಾರ ಧಾನ್ಯಗಳನ್ನು ಕೊಳ್ಳಲಾಗುವುದಿಲ್ಲ. ಅದರಿಂದ ಹಿಂದಿನ ವರ್ಷ ಖರ್ಚಾಗಿರಬಹುದಾದ 3500 -3900 ಕೋಟಿ ರೂ ಸಬ್ಸಿಡಿ ಶೇ. 20-25 ರಷ್ಟಾದರೂ ಹೆಚ್ಚಿದರೆ ಮಾತ್ರ ಹಿಂದಿನ ವರ್ಷದಷ್ಟು ಧಾನ್ಯ ಸಂಗ್ರಹಿಸಲು ಸಾಧ್ಯ.

ಇದರ ಜೊತೆಗೆ ಹಿಂದಿನ ವರ್ಷವೇ ಅಕ್ಕಿ ಹಾಗೂ ಗೋಧಿಗಳ ಸಂಗ್ರಹಣೆಗಾಗಿ ಸರ್ಕಾರ ಇರಿಸಿಕೊಂಡ ಗುರಿಯನ್ನು ಸಾಧಿಸಲಾಗಲಿಲ್ಲ. ಅದೂ ಕೂಡ ಕೃಷಿ ಉತ್ಪತ್ತಿಯ ವಿಷಯದಲ್ಲಿ ಉತ್ತಮವಾದಂತಹ ಬಹಳಷ್ಟು ಬೆಳೆಗಳ ಬೆಲೆ ಸರ್‍ರನೆ ಕೆಳಗಿಳಿದ ವರ್ಷ 92-93. ಒಟ್ಟಾರೆ ಭಾರತದ ಪರಿಸ್ಥಿತಿಯಲ್ಲಿ ಹಿಂದಿನ ನಾಲ್ಕು ವರ್ಷಗಳು ಮಳೆ ಬೆಳೆಗೆ ಸಂಬಂಧಿಸಿದಂತೆ ಒಳ್ಳೆಯ ವರ್ಷಗಳು. ಈ ವರ್ಷ ಅಂತಹ ಒಳ್ಳೆಯ ಸ್ಥಿತಿ ಉಳಿಯಲಾರದು ಮಳೆ-ಬೆಲೆಕೆಟ್ಟರೆ ಆಹಾರ ವಸ್ತುಗಳ ಬೆಲೆ ತಾನಾಗಿಯೇ ಏರಬಹುದು. ಇಂತಹ ಸಂದರ್ಭದಲ್ಲಿ ಆಹಾರದ ಸಬ್ಸಿಡಿಗಾಗಿ ಹಿಂದಿನ ವರ್ಷಕ್ಕಿಂತ ಹೆಚ್ಚು ಹಣ ಮೀಸಲಿಡಬೇಕು.

ಕೇಂದ್ರ ಸರ್ಕಾರ ಈ ಬಜೆಟ್‌ನಲ್ಲಿ ಮತ್ತೊಂದು ಆಟವಾಡಿದೆ. ಹಿಂದಿನ ವರ್ಷ ಈ ಮೇಲೆ ಹೇಳಿದಂತಹ ಒಳ್ಳೆಯ ಪರಿಸ್ಥಿತಿಯಲ್ಲಿಯೂ ಹೆಚ್ಚು ಧಾನ್ಯ ಸಂಗ್ರಹಣೆಯಾಗದಿರುವಾಗ, ಈ ವರ್ಷ ಅಷ್ಟು ಒಳ್ಳೆಯ ಪರಿಸ್ಥಿತಿಯನ್ನು ನಿರೀಕ್ಷಿಸುವಂತಹ ಪರಿಸ್ಥಿತಿ ಇಲ್ಲದಿರುವಾಗ ಆಹಾರ ಧಾನ್ಯ ಸಂಗ್ರಹಣೆಗಾಗಿ ಏನೆಲ್ಲ ಕ್ರಮ ಕೈಗೊಳ್ಳಬೇಕೋ ಅದೆಲ್ಲವನ್ನು ಕೈಗೊಳ್ಳಬೇಕು. ಆದರೆ ಸರ್ಕಾರ ಆಹಾರ ಧಾನ್ಯಗಳ ಮೇಲಿನ ನಿರ್ಬಂಧವನ್ನು ಪೂರ್ಣವಾಗಿ ತೆಗೆದು ಹಾಕಿದ್ದೇನೆಂದು ಘೋಷಿಸಿದೆ. ಇದರ ಫಲವಾಗಿ ಶ್ರೀಮಂತ ರೈತರು, ಭೂಮಾಲಕರು ಸರ್ಕಾರಕ್ಕೆ ಅದು ಘೋಷಿಸಿದ ಬೆಲೆಗಳಿಗೆ ಮಾರಬೇಕಾಗಿಲ್ಲ. ಭಾರತದಲ್ಲಿ ಎಲ್ಲಾ ಹೆಚ್ಚು ಬೆಲೆ ಸಿಗುತ್ತದೆಯೋ ಅಲ್ಲಿ ಅಂತರ ರಾಜ್ಯ ಸಾಗಣಿಕೆ. ಅಲ್ಲಿಗೆ ಸಾಗಿಸಿ ಮಾರಬಹುದು.

ಇದರ ಫಲವಾಗಿ ಆಹಾರ ಸಂಗ್ರಹಣೆ ಮತ್ತಷ್ಟು ಕುಸಿಯುತ್ತದೆ.

ಹೀಗೆ ಒಂದು ಕಡೆ ಆಹಾರದ ಸಬ್ಸಿಡಿಗಾಗಿ 200 ಕೋಟಿ ಏರಿಸಿದ್ದವೆಂದು ಮೋಸದ ಲೆಕ್ಕ ಹೇಳಿ ವಾಸ್ತವವಾಗಿ ಸಾವಿರಕ್ಕೆ ಹೆಚ್ಚು ಕೋಟಿ ಹಣ ಕಡಿಮೆ ಮಾಡಿ ಮತ್ತೊಂದು ಕಡೆ ಆಹಾರಧಾನ್ಯ ಸಂಗ್ರಹವಾಗದಂತೆ ಪರಿಸ್ಥಿತಿ ನಿರ್ಮಾಣಮಾಡಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನೇ ನಾಶಮಾಡುವ ನೀತಿಗಳು ಬಜೆಟ್‌ನಲ್ಲಿ ಅಡಗಿವೆ. ಈ ರೇಷನ್ ವ್ಯವಸ್ಥೆಯಿಂದ ಪ್ರಯೋಜನ ಪಡೆಯುತ್ತಿದ್ದ ಕೋಟ್ಯಾಂತರ ಬಡ ಕುಟುಂಬಗಳ ಮೇಲೆ ದೊಡ್ಡ ಧಾಳಿ ಮಾಡಿದೆ. ಕೆಲವು ರಾಜ್ಯ ಸರ್ಕಾರಗಳು - ಪ.ಬಂಗಾಲ, ಎಡ ಪ್ರಭುತ್ವದ ಕೇರಳ, ತಮಿಳುನಾಡು ಹಸಿರುಕಾರ್ಡ್ ನೀಡುವಲ್ಲಿ ಕರ್ನಾಟಕ ಸರ್ಕಾರಗಳ ಕಾರ್ಯಕ್ರಮಗಳನ್ನು ಹಾಕಿಕೊಂಡು ಸರ್ಕಾರಗಳ ಮೇಲಿನ ಧಾಳಿಯೂ ಆಗುತ್ತದೆ.

ಪದೇ ಪದೇ ರೇಷನ್ ಬೆಲೆಯನ್ನು ಜಾಸ್ತಿ ಮಾಡುತ್ತಾ ಮಾರುಕಟ್ಟೆಯ ದರಗಳಿಗೂ ರೇಷನ್ ದರಗಳಿಗೂ ವ್ಯತ್ಯಾಸವೇ ಇಲ್ಲದಂತೆ ಮಾಡಿದರೆ ಆಗ ಜನ ರೇಷನ್ ಅಂಗಡಿ ಮುಂದೆ ಏಕೆ ಕಾಯುತ್ತಾ[...] ರೇಷನ್ ಕಾರ್ಡ್‌ಗಾಗಿ ಪಡಬಾರದ ಪಾಡ[...] ಪಟ್ಟು ಹೋರಾಟ ಮಾಡಿ ಪಡೆಯು[...] ಯಾರು ಹೋಗುತ್ತಾರೆ? ಹೀಗಾಗಿ ರೇಷ[...] ಅಂಗಡಿಗಳ ಮುಂದಿನ ಕ್ಯೂಗಳೆಲ್ಲವನು[...] ಮಂಗಮಾಯಾ ಮಾಡುವಂತಹ ಬಜೆ[...] ನಮ್ಮ ಮುಂದಿದೆ.

ಬೆಲೆ ಇಳಿದಿದೆ ಹಣದುಬ್ಬರ ಇಳಿದಿದೆ

ಇದರ ಜೊತೆಗೆ ಬೆಲೆ ಇಳಿದಿ[...] ಹಣದುಬ್ಬರ ಶೇ. 6.5 ಯಷ್ಟು ಅ[...] ಕಡಿಮೆ ಮಟ್ಟಕ್ಕೆ ಇಳಿದಿದೆ ಎಂದು ಸೂ[...] ಹತ್ತಿ ಸಾರುತ್ತಿದ್ದಾರೆ. ಆದರೆ ಬೆಲೆಗಳ ಮ[...] ಇಳಿದಿದೆಯೇ? 92-93 ರ ಒಟ್ಟು ಬೆ[...] ಏರಿಕೆಯ ಪ್ರಮಾಣವನ್ನು ಲೆಕ್ಕ ಮಾಡಿದಾ[...] ಅದು ಶೇ 10 ರಷ್ಟಿದೆ. ಹಿಂದಿನ ವರ್ಷ[...] (ಅಂದರೆ 91-92ರ) ಶೇ. 14 ರ[...] ಬೆಲೆ ಏರಿಕೆಯ ಮೇಲೆ ಶೇ 10 ರ[...] ಬೆಲೆ ಏರಿಕೆ ಎಂಬುದನ್ನು ಗಮನಿಸಿದಾ[...] ಜನರ ಬದುಕಿನ ಸಂಕಷ್ಟ ಅನುಭವವಾಗ[...] ತ್ತದೆ. ವಿವಿಧ ವಸ್ತುಗಳ ಬೆಲೆ ಏ[...] ಅತ್ಯಂತ ಹೆಚ್ಚು ಬೆಲೆ ಏರಿಕೆಯಾಗಿರುವು[...] ಆಹಾರ ವಸ್ತುಗಳಲ್ಲಿ ಅವುಗಳ ಬೆಲೆ ಏ[...] ಶೇ. 20-24 ರಷ್ಟು ಅತ್ಯಂತ ಬಡ[...] ನರು ತಮ್ಮ ಎಲ್ಲ ದುಡಿಮೆಯನ್ನು ಆಹಾ[...] ಧಾನ್ಯಗಳ ಸಲುವಾಗಿಯೇ ವೆಚ್ಚ ಮಾಡು[...] ವವರು. ಹೀಗಾಗಿ ಉಳಿದ ಎಲ್ಲಾ ಜ[...] ವಿಭಾಗಗಳಿಗಿಂತ ಅತ್ಯಂತ ಹೆಚ್ಚು ಬೆಲೆ ಏ[...] ಕೆಯ ಬಿಸಿಗೆ ಸಿಕ್ಕಿ ನಲುಗಿರಿರುವವರೂ

ಬಜೆಟ್! ಬಜೆಟ್!!

ಬದುಕನ್ನೇ ದುಬಾರಿ ಮಾಡಲಿರುವ 1993-94 ರ ಬಜೆಟ್

ಐತಿಹಾಸಿಕ ಅತ್ಯುದ್ಭುತ ಎಂದೆಲ್ಲ ಬಂಡವಾಳಿಗರಿಂದ ಅವರ ಪತ್ರಿಕೆಗಳಿಂದ ಹೊಗಳಿಸಿಕೊಂಡಿರುವ 1993-94 ರ ಬಜೆಟ್ ನಿಜಕ್ಕೂ ಜನ ಸಾಮಾನ್ಯನ ಬದುಕನ್ನೇ ದುಬಾರಿ ಮಾಡುತ್ತದೆ. ಅದರ ಲಕ್ಷಣಗಳು ಆಗಲೇ ಗೋಚರಿಸುತ್ತಿದ್ದು ಪರಿಣಾಮಗಳು ಬಹಳ ದೂರವೇನಿಲ್ಲ.

ಏಕೀಕೃತ ವಿನಿಮಯ ಪದ್ಧತಿ

ಮನಮೋಹನಸಿಂಗರನ್ನು ಕೇಳಿ ಅವರು ಹೇಳುತ್ತಾರೆ ರೂಪಾಯಿಯ ಏಕೀಕೃತ ವಿನಿಮಯ ಪದ್ಧತಿಯಿಂದ ಪೆಟ್ರೋಲ್ ಉತ್ಪನ್ನಗಳ ಬೆಲೆ ಏರುವುದೇ ಇಲ್ಲ. ಆದರೆ ನಿಜ ಸಂಗತಿ ಏನು? ಹೊಸ ವಿನಿಮಯ ಪದ್ಧತಿಯಿಂದ ಡಾಲರ್‌ನ ಬೆಲೆ ಏರಿದ್ದು ನಾವು ತೈಲ ಅಂದರೆ ಪೆಟ್ರೋಲಿಯಮ್, ಅಡಿಗೆ ಅನಿಲ, ಸೀಮೆ ಎಣ್ಣೆ, ಡೀಸೆಲ್, ಇವೆಲ್ಲವುಗಳ ಆಮದಿಗೆ ಹೆಚ್ಚಿನ ರೂಪಾಯಿಗಳನ್ನು ತೆರಬೇಕಾಗುತ್ತದೆ. ಇವುಗಳ ಆಮದಿಗೆ ಈವರೆಗೆ 'ತೈಲ ನಿಧಿ ಖಾತೆ' ಎಂಬ ಖಾತೆ ಇದೆ. ಈಗ ಈ ಖಾತೆಯುಲ್ಲಿ 1045.58 ಕೋಟಿ ರೂಪಾಯಿಗಳಿವೆ. ಎರಡು ತಿಂಗಳುಗಳಲ್ಲಿ ಇದು ಖರ್ಚಾಗಿ ಹೋಗುತ್ತದೆ. ಆಗ ಈ ಎಲ್ಲವುಗಳ ದರ ಏರಲೇಬೇಕು.

ಈ ಪೆಟ್ರೋಲಿಯಮ್ ಉತ್ಪನ್ನಗಳ ಬೆಲೆ ಒಮ್ಮೆ ಮಾತ್ರ ಏರುತ್ತದೆಯೇ?

ಇಲ್ಲ. 'ಅಲ್ಲೇ ಇರುವುದು ದೊಡ್ಡ ಸಮಸ್ಯೆ. ಇನ್ನು ಮುಂದೆ ಆಮದು ಮಾಡಿಕೊಳ್ಳುವ ಯಾವುದೇ ವಸ್ತುವಿನ ಬೆಲೆ ಸ್ಥಿರವಾಗಿರುವುದಿಲ್ಲ. ಯಾಕೆಂದರೆ ನಮ್ಮ ಆಮದು ಡಾಲರಿನ ಮೇಲೆ ಅವಲಂಬಿಸಿರುತ್ತದೆ. ಈ ಡಾಲರ್‌ನ ಬೆಲೆ ಏರುತ್ತಲೇ ಇರುವುದರಿಂದ ಬೆಲೆ ಹೆಚ್ಚುತ್ತಲೇ ಇರುತ್ತದೆ. ಆಗೀಗ ಅಲ್ಪಸ್ವಲ್ಪ ಡಾಲರ್‌ನ ಬೆಲೆ ಇಳಿಯಬಾರದೆಂದೇನಿಲ್ಲ. ಆದರೆ ಈ ಸಾಧ್ಯತೆ ಬಹಳ ಕಡಿಮೆ. ಇಲ್ಲವೆಂದರೂ ಸರಿ.

ಈಗ ಪೆಟ್ರೋಲಿಗೆ ಬರೋಣ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇದರ ಬೆಲೆ ಒಂದು ಬ್ಯಾರೆಲ್‌ಗೆ 15.5 ಡಾಲರುಗಳು. ತೈಲ ಉತ್ಪಾದಿಸುವ ದೇಶಗಳ ಸಂಘಟನೆ ಈ ಬೆಲೆ ಹೆಚ್ಚಿಸುವ ವಿಚಾರ ಹೊಂದಿದೆ. ಹಾಗೆ ಹೆಚ್ಚಿಸಿದರೆ ಪ್ರತಿ ಡಾಲರ್ ಹೆಚ್ಚಳಕ್ಕೆ ನಾವು ವರ್ಷವೊಂದಕ್ಕೆ ಹಿಂದೆ ಇದ್ದದ್ದಕ್ಕಿಂತ 60 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಖರ್ಚು ಮಾಡಬೇಕಾಗುತ್ತದೆ. ಅಂದರೆ ಎಂತಹ ಸೂಕ್ಷ್ಮ ಪರಿಸ್ಥಿತಿ ಇದು !! ಮನಮೋಹನಸಿಂಗರು ಮತ್ತೊಮ್ಮೆ ಒಂದು ಹಿಡಿದು ಹೇಳುತ್ತಾರೆ ಬೆಲೆಗಳೇರುವುದಿಲ್ಲ.

ರಾಜ್ಯಗಳಿಗೆ ಹೊಡೆತ

ಹೊಸ ಆರ್ಥಿಕ ನೀತಿಗಳಿಂದಾಗಿ ರಾಜ್ಯಗಳ ಆದಾಯ ಕಡಿಮೆಯಾಗಿದ್ದು ರಾಜ್ಯಗಳು ತತ್ತರಿಸುತ್ತಿವೆ. ಈಗ ಮನಮೋಹನ್‌ಸಿಂಗ್ ಬಜೆಟ್ ಅಬ್ಕಾರಿ ಸುಂಕಗಳ ಕಡಿತ ಮಾಡಿ 541 ಕೋಟಿ ರೂಪಾಯಿಗಳ ಹೊರೆಯನ್ನು ರಾಜ್ಯಗಳ ತಲೆಗೆ ಹೊರಸಿದೆ.

ಕೇರಳ, ಪಶ್ಚಿಮ ಬಂಗಾಳ, ಒರಿಸ್ಸಾ, ಇತ್ಯಾದಿ ರಾಜ್ಯಗಳೆಲ್ಲ ಆರ್ಥಿಕ ನೀತಿಗಳಿಂದ ಬಡವಾಗುತ್ತಿವೆ. ಉತ್ತಮ ಸಂಪನ್ಮೂಲಗಳನ್ನು ಹೊಂದಿರುವ ಗುಜರಾತ್ ಸಹ ಈ ಆದಾಯ ಕಡಿತದಿಂದ ಆರ್ಥಿಕ ಸಂಕಟಗಳಿಗೆ ಒಳಗಾಗಿದೆ ಎಂದರೆ ನಂಬುತ್ತೀರಾ? ಎಂತಹ ಆರ್ಥಿಕ ನೀತಿ!! ಎಂತಹ ಅದ್ಭುತ ಬಜೆಟ್!! ಅಲ್ಲವೇ?

ಬರಡಲಾಗಲಿರುವ ಕಾಮಧೇನುಗಳು

ಸಾರ್ವಜನಿಕ ಉದ್ಯಮಗಳಲ್ಲಿ ಹಲವಕ್ಕೆ ಹಣಕಾಸಿನ ಬೆಂಬಲದ ಅವಶ್ಯಕತೆಯಿದೆ. ಸರ್ಕಾರದ ಅಸಾಮರ್ಥ್ಯದಿಂದ ರೋಗಪೀಡಿತವಾಗಿರುವ ಈ ಉದ್ಯಮಗಳನ್ನು ಆಡಳಿತ ಪಕ್ಷ ತನ್ನ ಎಲ್ಲ ರಾಜಕೀಯ ಲಾಭಗಳಿಗೆ ಬಳಸಿಕೊಂಡಿದ್ದರೂ ಈಗ ಸರ್ಕಾರದ ಬಜೆಟ್‌ನಲ್ಲಿ ಅವುಗಳಿಗೆ ಬೆಂಬಲದ ಪ್ರಸ್ತಾವವೇ ಇಲ್ಲ.

ದೇಶಕ್ಕೆ ದೇಶದ ಆರ್ಥಿಕಕ್ಕೆ ಕಾಮಧೇನುವಿನಂತೆ ನಿರಂತರವಾಗಿ ಪೋಷಣೆ ನೀಡಿದ ಈ ಸಾರ್ವಜನಿಕ ಉದ್ಯಮಗಳು ಈಗ ಸರ್ಕಾರದ ನೀತಿಯಿಂದಾಗಿ ಬರಡಾಗಿ ನಿಲ್ಲಬೇಕಾದ ದುರಂತ ಒದಗಿದೆ. ಇದರ ಪರಿಣಾಮಗಳನ್ನು ಎದುರಿಸುವವರು ಯಾರು ಗೊತ್ತೆ?

ನಮ್ಮ ದೇಶದ ಸಾಮಾನ್ಯ ಜನ ಹೇಗೆಂದು ಕೇಳುವಿರಾ? ಈ ಉದ್ಯಮಗಳು ಮುಚ್ಚಿದರೆ ಕೆಲಸಗಾರರು ಕೆಲಸ ಕಳೆದುಕೊಳ್ಳುತ್ತಾರೆ. ಅವು ಉತ್ಪಾದಿಸುವ ವಸ್ತುಗಳನ್ನು ಆಮದು ಮಾಡಿಕೊಳ್ಳಬೇಕಾಗುವುದರಿಂದ ಅವುಗಳ ಬೆಲೆ ಏರುತ್ತದೆ.

ಕಾಮಧೇನು ಬರಡಾದರೆ ಹಾಲಿಲ್ಲದ ಕೂಸಿನ ಗತಿ ನಮ್ಮ ಜನ ಸಾಮಾನ್ಯರಿಗೆ.

ಚಿನ್ನದ ಗಣಿಯೂ ಖಾಸಗಿ ಬಂಡವಾಳಿಗರಿಗೆ!!

ಸರಕಾರ ಹೊಸ ಗಣಿ ನೀತಿ ಪ್ರಕಟಿಸಿದೆ. ಯುರೇನಿಯಂ, ಕಲ್ಲಿದ್ದಲು ಮತ್ತು ತೈಲವನ್ನು ಹೊರತು ಪಡಿಸಿ ಉಳಿದೆಲ್ಲ ಕ್ಷೇತ್ರಗಳನ್ನು ಖಾಸಗಿಯವರಿಗೆ ತೆರೆದಿರುವ ಸರ್ಕಾರ ದೇಶದ ಅತ್ಯಮೂಲ್ಯ ಸಂಪತ್ತನ್ನು ಕೊಳ್ಳೆ ಹೊಡೆಯಲು ಖಾಸಗಿಯವರಿಗೆ ಅಂದರೆ ಬಂಡವಾಳಶಾಹಿಗಳಿಗೆ ಅವಕಾಶ ಮಾಡಿಕೊಟ್ಟಿದೆ.

ಖಾಸಗಿಯವರೆಂದರೆ ದೇಶೀಯರು ಮಾತ್ರವಲ್ಲ ವಿದೇಶಿ ಖಾಸಗಿ ಬಂಡವಾಳಕ್ಕೂ ಇಲ್ಲಿ ಪ್ರವೇಶವಿದೆ. ವಿಜಯನಗರ ಉಕ್ಕು ಕಾರ್ಖಾನೆಗಳಂತಹ ಕಾರ್ಖಾನೆಗಳು ಇನ್ನೂ ಬಹುಶಃ ಪ್ರಾರಂಭವಾಗುವುದೇ ಇಲ್ಲ. ಉಕ್ಕು ಚಿನ್ನ ತಾಮ್ರ, ವಜ್ರ ಇತ್ಯಾದಿಗಳೆಲ್ಲ ಖಾಸಗಿಯವರ ಕೈ ಸೇರಿದರೆ ದೇಶದ ಪರಿಸ್ಥಿತಿ ಏನಾದೀತು? ದೈನಂದಿನ ಜೀವನಕ್ಕೆ ಅತ್ಯವಶ್ಯ ಬೇಕಾಗುವ ಉಕ್ಕು, ತಾಮ್ರ ಇತ್ಯಾದಿ ಆರ್ಥಿಕದಲ್ಲಿ ಪ್ರಮುಖ ಸ್ಥಾನ ಪಡೆದಿರುವ ಚಿನ್ನ, ವಜ್ರ ಇವೆಲ್ಲವುಗಳು ಖಾಸಗಿಯವರ ಕಪಿಮುಷ್ಟಿಯಲ್ಲಿ. ಈ ಖಾಸಗಿಯವರಲ್ಲಿ ವಿದೇಶಿಯರೂ ಇರುತ್ತಾರೆ. ದೇಶ ದಿವಾಳಿಯೇಳಲು ಬಹಳ ದಿನಗಳ ಬೇಕಾಗಿರಲಿಕ್ಕಿಲ್ಲ. ಅಲ್ಲವೇ ? ಕೇವಲ ತಾಮ್ರಕ್ಕಾಗಿ ಚಿಲ್ಲಿಯಲ್ಲಿ ಚುನಾಯಿತ ಸರ್ಕಾರವನ್ನು ಉರುಳಿಸಿ ಕ್ರೂರ ಸರ್ವಾಧಿಕಾರವನ್ನು ಹೇರಿದ ಅಮೇರಿಕಾದ ಎಟಿಟಿ ಕಂಪನಿಗೆ ಭಾರತದಲ್ಲಿ ಅಂತಹ ಪ್ರಯೋಗ ಮಾಡಲು ಮುಕ್ತ ಆಹ್ವಾನ. ದ.ಆಫ್ರಿಕಾದಲ್ಲಿ ಈಗ ಗಣಿಗಳಿಗಾಗಿಯೇ ವರ್ಣಭೇದ ನೀತಿಯ ರಾಕ್ಷಸೀ ಸರ್ಕಾರಗಳನ್ನು ವಿದೇಶಿ, ಖಾಸಗಿ? ಬಹುರಾಷ್ಟ್ರೀಯ ಕಂಪನಿಗಳು ಬೆಂಬಲಿಸಿವೆ ಎಂಬುದನ್ನು ನಮಗೆ ನೆನಪಿರಲಿ.

ವಿದೇಶಿಯರು ಲಾಭವನ್ನು ಹೊರಸಾಗಿಸಬಹುದು

ಇಲ್ಲಿಯವರೆಗೆ ವಿದೇಶೀ ಬಂಡವಾಳಿಗರು ಭಾರತೀಯ ರಿಸರ್ವ್ ಬ್ಯಾಂಕ್‌ನ ಪೂರ್ವಾನುಮತಿಯಿಲ್ಲದೆ ಲಾಭಗಳನ್ನು ನಮ್ಮ ದೇಶದಿಂದ ಹೊರಗೆ ಸಾಗಿಸುವಂತಿರಲಿಲ್ಲ. ಇಲ್ಲಿ ದುಡಿದ ಲಾಭದ ದೊಡ್ಡ ಮೊತ್ತವನ್ನು ಇಲ್ಲಿಯೇ ಉದ್ಯಮಗಳಲ್ಲಿ ಹೂಡಬೇಕಾಗುತ್ತಿತ್ತು. ಇದು ನಮ್ಮ ದೇಶದ ಅಭಿವೃದ್ಧಿಗೆ ನೆರವಾಗುತ್ತಿತ್ತು.

ಈಗ ಅಂತಹ ನಿರ್ಬಂಧವನ್ನು ತೆಗೆದುಹಾಕುವ ನಿರ್ಧಾರವನ್ನು ಸರ್ಕಾರ ಮಾಡಿದೆ. ಅಂದರೆ ವಿದೇಶೀ ಬಂಡವಾಳಿಗ ಯಾವುದೇ ಅಡೆತಡೆಯಿಲ್ಲದೆ ಲಾಭವನ್ನು ನಮ್ಮ ದೇಶದಿಂದ ಹೊರಗೆ ಕಳುಹಿಸಬಹುದು. ಲಾಭಕ್ಕಾಗಿ ಯಾವುದೇ ಕಾನೂನು ನೀತಿ, ಮಾನವೀಯತೆಗಳನ್ನು ತಿರಸ್ಕರಿಸುವ ನಿರ್ಲಕ್ಷಿಸುವ ವಿದೇಶಿ ಬಂಡವಾಳಿಗರು ದೇಶದ ಸಂಪತ್ತನ್ನೆಲ್ಲ ಹೊರಸಾಗಿಸುವರಲ್ಲಿ ಸಂಶಯವಿಲ್ಲ.

ಶೇರು ಹಗರಣದಲ್ಲಿ 'ವಿದೇಶೀ ಬ್ಯಾಂಕುಗಳು ಆಡಿದ ಆಟಗಳ ನೆನಪಿದೆಯಲ್ಲವೇ?

ಡಂಕೆಲ್ ಎಂಬ ಗುಲಾಮಗಿರಿಗೆ ದೇಶವನ್ನೇ ಮಾರಲೆತ್ನಿಸುತ್ತಿರುವ ಸರ್ಕಾರ

ಈ ಡಂಕೆಲ್ ಪ್ರಸ್ತಾವಗಳ ಬಗ್ಗೆ ಗೊ[...]ದೆಯಲ್ಲವೇ? ಈ ಪ್ರಸ್ತಾವಗಳ ವಿರುದ್ಧ ನಂಜುಂಡಸ್ವಾಮಿಯವರ ರಾಜ್ಯ ರೈತ ಸಂಘ, ಮಹೇಂದ್ರ ಸಿಂಗ್ ಟಿಕಾಯತ್‌ರ ಭಾರತೀಯ ಕಿಸಾನ್ ಯೂನಿಯನ್ ಮತ್ತು ಇತರ ಸಂಘಟನೆಗಳು ಸೇರಿ ದೆಹಲಿಯಲ್ಲಿ ಕೆಂಪುಕೋಟೆಯಲ್ಲಿ ರ್‍ಯಾಲಿಯೊಂದನ್ನು ನಡೆಸಿದವು. ಸರ್ಕಾರ ಈ ರ್‍ಯಾಲಿಗೆ ಹಲವು ತಡೆಗಳನ್ನು ಒಡ್ಡಿತು.

ಅನಂತರ ಲೋಕಸಭೆಯಲ್ಲಿ ಕೇಂದ್ರ ಕೃಷಿ ಮಂತ್ರಿ ಬಲರಾಮ್ ಜಾಖಡ್ ಡಂಕೆಲ್ ಪ್ರಸ್ತಾವಗಳು ದೇಶಕ್ಕೆ ಒಳ್ಳೆಯವು ಎಂದು ಹೇಳಲು ಹೋಗಿ ಉಗಿಸಿಕೊಂಡರು.

ಈಗ ಹೊಸ ಸುದ್ದಿ ಬಂದಿದೆ. ಭಾರತೀಯ ಕಿಸಾನ್ ಯೂನಿಯನ್‌ನ ಒಂದು ಭಿನ್ನಮತೀಯ ಗುಂಪು ಮಾರ್ಚ್ 31 ರಂದು ದೆಹಲಿಯ ಬೋಟ್‌ಕ್ಲಬ್‌ನಲ್ಲಿ ರ್‍ಯಾಲಿಯೊಂದನ್ನು ನಡೆಸಲಿದೆಯಂತೆ. ಇದಕ್ಕೆ ಮಹಾರಾಷ್ಟ್ರದ ಶೇತ್ಕಾರಿ ಸಂಘಟನೆಯ ಶರದ್ ಜೋಷಿಯವರದ್ದೂ ಬೆಂಬಲವಿದೆಯಂತೆ. ಅಂದ ಹಾಗೆ ಈ ರ್‍ಯಾಲಿ ಯಾಕೆ ಗೊತ್ತೆ? ಡಂಕೆಲ್ ಪ್ರಸ್ತಾವಗಳಿಗೆ ಬೆಂಬಲ ಸೂಚಿಸಲು ಅಂದರೆ ಗುಲಾಮಗಿರಿಗೆ ಬೆಂಬಲ ಸೂಚಿಸಲು ಎಂದು ನಾವು ತಿದ್ದಿ ಬರೆಯಬಹುದಲ್ಲವೇ?

ಕೃಷಿ ರಫ್ತಿನಲ್ಲಿ ತೊಡಗಿರುವ ಜಮೀನುದಾರಿಗಳ ಈ ಹುನ್ನಾರ ಪ್ರಯತ್ನದಲ್ಲಿದೆಯೆಂಬುದಂತೂ ಸ್ಪಷ್ಟ. ಕೇಂದ್ರ ಸರ್ಕಾರದ ಬೆಂಬಲವೂ ಇದಕ್ಕಿರುವಂತೆ ಕಾಣುತ್ತದೆ.

ರೈತರ ಚಳುವಳಿಯನ್ನೇ ಒಡೆಯುವ ಪ್ರಯತ್ನವೂ ಇದಲ್ಲವೇ? ಆದರೆ ಸರ್ಕಾರ ಈ ತನ್ನ ಕಾರ್ಯಗಳ ಪ್ರತಿಫಲವನ್ನಂತೂ ಉಣ್ಣಲೇಬೇಕಾಗುತ್ತದೆ.

ಬಡ-ಕೂಲಿಕಾರಜನರೇ. ನಮ್ಮ ದೇಶದ ಒಟ್ಟಾರೆ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸರ್ಕಾರದ ಕೈಯಲ್ಲಿ ಸುಮಾರು 200-240 ಲಕ್ಷ ಟನ್ ಆಹಾರ ಧಾನ್ಯಗಳ ಸಂಗ್ರಹಣೆಯಾಗುತ್ತಿತ್ತು. ಈಗ ಆಹಾರದ ಉತ್ಪಾದನೆ (ಒಳ್ಳೆಯ ಮಳೆಯ ಪರಿಣಾಮವಾಗಿ) ಹೆಚ್ಚಾಗಿದ್ದರೂ ಆಹಾರದ ಸಂಗ್ರಹಣೆ ಕಡಿಮೆಯಾಗಿದೆ. ಆದ್ದರಿಂದ ಸಾರ್ವಜನಿಕ ವಿತರಣಾ ಜಾಲಕ್ಕೆ ತನ್ನಲ್ಲಿರುವ ಕಡಿಮೆ ಸಂಗ್ರಹದಿಂದಲೇ ಬಿಡುಗಡೆ ಮಾಡುತ್ತಿರುವುದರಿಂದ ಸರ್ಕಾರದ ಕೈಯಲ್ಲಿರುವ ಆಹಾರ ಧಾನ್ಯಗಳ ಪ್ರಮಾಣ ಕುಗ್ಗುತ್ತಿದೆ.

ಅದೇ ಸಮಯದಲ್ಲಿ ಹೆಚ್ಚಿದ ಆಹಾರ ಧಾನ್ಯಗಳ ಉತ್ಪಾದನೆಯ ಹೆಚ್ಚಳ ಮತ್ತು ಸರ್ಕಾರದ ಆಹಾರ ದಾನ್ಯದ ಸಂಗ್ರಹಣೆಯಲ್ಲಿ ಯಾವತ್ತೂ ಸಂಗ್ರವಾಗುತ್ತಿದ್ದ ಪ್ರಮಾಣಕ್ಕೂ ಈಗ ಕಡಿಮೆ ಸಂಗ್ರಹವಾಗುತ್ತಿರುವುದಕ್ಕೂ ನಡುವಿನ ಧಾನ್ಯ, ಎರಡೂ ಎಲ್ಲಿ ಹೋಗಿವೆ? ಇದು ಆಹಾರ ಧಾನ. ಖಾಸಗಿ ವರ್ತಕರ ಕೈಯಲ್ಲಿ ಸೇರಿದೆ.

ಹಿಂದೆ ಸರ್ಕಾರದ ಕೈಯಲ್ಲಿ ಹೆಚ್ಚು ಆಹಾರಧಾನ್ಯವಿದ್ದ ಖಾಸಗಿಯವರ ಕೈಯಲ್ಲಿ ಕಡಿಮೆ ಇರುತ್ತಿದ್ದ ಪರಿಸ್ಥಿತಿ ಈಗ ತಿರುವು ಮುರುವಾಗಿದೆ. ಸರ್ಕಾರದ ಕೈಯಲ್ಲಿ ಹೆಚ್ಚು ಆಹಾರದ ಧಾನ್ಯ ಇರುವವರೆಗೂ ಖಾಸಗಿ ವರ್ತಕ ಹೆಚ್ಚು ಬಾಲ ಬಿಚ್ಚಲಾಗುತ್ತಿರಲಿಲ್ಲ.

ಬೆಲೆ ಏರಿಕೆಯಾದಂತೆಲ್ಲ ರೇಷನ್ ಅಂಗಡಿಗಳ ಮೂಲಕ ಅಗ್ಗದ ದರಗಳಲ್ಲಿ ಆಹಾರ ವಸ್ತುಗಳನ್ನು ಹೆಚ್ಚು ಹೆಚ್ಚಾಗಿ ಒದಗಿಸಿದರೆ ಅವರು ಹಿಂದೆ ಸೇವಿಸಿದಷ್ಟಾದರೂ ಆಹಾರ ಸೇವಿಸಲು ಸಾಧ್ಯ.

ಆದರೆ, ನಮ್ಮ ಘನ ಆಳುವ ಮಹಾಸ್ವಾಮಿಗಳು ದಿಲ್ಲಿಯ ದೊರೆಗಳು ಬೆಲೆ ಅತ್ಯಂತ ತುಟ್ಟಿಯಾದ ಸಮಯದಲ್ಲಿಯೇ ಅಗ್ಗದದರದಲ್ಲಿ ಆಹಾರ ಧಾನ್ಯ ಒದಗಿಸುವ ರೇಷನ್ ಅಂಗಡಿಗಳ ವ್ಯವಸ್ಥೆಯನ್ನೇ ಪೂರ್ಣವಾಗಿ ನಾಶಮಾಡಿ ಪುಣ್ಯ ಕಟ್ಟಿಕೊಳ್ಳುತ್ತಿದ್ದಾರೆ. ಇದರಿಂದ ಬಡತನದ ರೇಖೆ ಎಷ್ಟು ಮೇಲೆ ಹೋಗಿರಬಹುದು ಮತ್ತು ಎರಡು ಹೊತ್ತಿನ ಊಟಕ್ಕೆ ಗತಿಯಿಲ್ಲದವರ ಸಂಖ್ಯೆ ಎಷ್ಟು ಹೆಚ್ಚಾಗಿರಬಹುದು. ಇದಿಷ್ಟು ಬಡವರ ಗೋಳು.

ಉಳಿದವರ ಗೋಳು

ರೇಷನ್ ಅಂಗಡಿಗಳ ಮೇಲೆ ಅವಲಂಬಿದವರ ಗಗೋಳು ಇದು. ಅದರಿಂದ ನಮಗೇನು ಎಂದು ಹಲವರು ನೆನಸಬಹುದು. ಅವರು ಏನೂ ತೊಂದರೆಯಿಲ್ಲದೆ ಪಾರಾಗಬಹುದೇ?

ರೇಷನ್ ಅಂಗಡಿಗೆ ಎಂದೂ ಹೋಗದ ಜನಕ್ಕೆ ಕೂಡ ರೇಷನ್ ಅಂಗಡಿಗಳ ವ್ಯವಸ್ಥೆಯಿಲ್ಲದಿದ್ದರೆ ಏನಾಗಬಹುದು ಎಂಬುದು ಮುಂದಿನ ದಿನಗಳಲ್ಲಿ ಅರಿವಾಗಲಿದೆ.

ಧಾನ್ಯಗಳನ್ನು ಮಾರುಕಟ್ಟೆಗೆ ಬಿಡದೆ ಹಿಡಿದಿಟ್ಟುಕೊಂಡು ಕಾಳಸಂತೆ ಮಾಡಿ ಬೆಲೆ ಏರಿಸಿ ಸಿಕ್ಕಾಪಟ್ಟೆ ಲಾಭ ಮಾಡುವ ಅವರ ದುರಾಸೆಗೆ ಕಡಿವಾಣ ಹಾಕಿದಂತಿರುತ್ತಿತ್ತು. ಅವರು ತಮ್ಮ ಕರಾಳ ಆಟಕ್ಕೆ ಕೈ ಹಾಕಿದರೇ ಸಾಕು ಯಾವಾಗ ಸರ್ಕಾರ ತನ್ನಲ್ಲಿದ್ದ ದಾಸ್ತಾನಿನಿಂದ ಧಾನ್ಯಗಳನ್ನು ಮಾರುಕಟ್ಟೆ ಬಿಟ್ಟು ತಮ್ಮ ಆಟವನ್ನು ಮಣ್ಣುಗೂಡಿಸುವುದೋ ಎಂಬ ಭಯವಿರುತ್ತಿತ್ತು.

ಈಗ ಈ ಹೊಸ ಪರಿಸ್ಥಿತಿಯಲ್ಲಿ ಸಗಟು ವ್ಯಾಪಾರಗಾರರಿಗೆ ಆ ಭಯವಿಲ್ಲದಿರುವ ಪರಿಸ್ಥಿತಿ ಬಂದಿದೆ. ಸರ್ಕಾರಕ್ಕೆ ಅವರನ್ನು ಹದ್ದುಬಸಿ[illegible]ಸುವ ಧಾನ್ಯ ಸಂಗ್ರಹಣ ಮಾ[illegible] ಮತ್ತು ತಾನೇ ಬೆಲೆ ಏರಿಸುತ್ತಾ ಖಾಸಗಿ ವರ್ತಕರೊಡನೆ ಸ್ಪರ್ಧೆ ನಡೆಸುತ್ತಿದೆ ವ್ಯಾಪಾರದ ಮೇಲೆ ಸರ್ಕಾರದ ಹತೋಟಿಯನ್ನು ತನ್ನ ಹತೋಟಿಯನ್ನು ಕೈ ಬಿಡುತ್ತಿದೆ. ಇದರಿಂದ ಆಹಾರಧಾನ್ಯಗಳ ಮಾರುಕಟ್ಟೆ ಪೂರ್ಣವಾಗಿ ಕಾಳಸಂತೆಕೋರರ ಕೈಯಲ್ಲಿ ಸಿಲುಕುತ್ತದೆ ಸ್ವಲ್ಪ ಅವಕಾಶ ಸಿಕ್ಕಿದರೆ. ಸಾಕು, ನೂರಾರು ನೆಪ ಹೂಡಿ ಆಹಾರಧಾನ್ಯಗಳ ಬೆಲೆ ಏರಿಸುವ, ಎಲ್ಲಾ ದುಡಿಯುವ ಜನರ ರಕ್ತ ಹೀರುವ ಕೆಲಸ ಆರಂಭವಾಗಲಿದೆ. ಇದು ಬಡಜನರನ್ನು ಅತ್ಯಂತ ತೀವ್ರವಾಗಿಭಾದಿಸುವುದರ ಜೊತೆಗೇ ಕಾರ್ಮಿಕರಿಗೆ ಮಧ್ಯಮ ವರ್ಗಗಳಿಗೆ ಕೂಡಾ ಪೆಟ್ಟು ಕೊಡಲಾರಂಭಿಸಿದೆ. ಇನ್ನು ತಮ್ಮ ಆಹಾರ ತಾವೇ ಬೆಳೆದುಕೊಳ್ಳುವುವೆಂಬ ಹಮ್ಮಿನ ರೈತರಿಗೂ ಮಾರಾಕವಾಗಲಿದೆ. ತಮ್ಮ ಕೈಯಲ್ಲಿ ದೀರ್ಘಕಾದಷ್ಟು ದಾಸ್ತಾನಿದೆಯೆಂದು ಕೆಲವು ವಾರಗಳ ಕಾಲ ಸುಗ್ಗಿಯ ಸಮಯದಲ್ಲಿ ಧಾನ್ಯಗಳನ್ನು ಕೊಳ್ಳದೇ ಆಟವಾಡಿಸಿದರೆ ಸಾಕು. ರೈತ ವರ್ತಕರು ಬಯಸುವ ಬೆಲೆಗೆ ಮಾರದೇಕಾದ ಇಕ್ಕಟ್ಟಿಗೊಳಗಾಗುತ್ತಾನೆ. ಅವನ ಕಷ್ಟಗಳು ಎಷ್ಟೇ ಇರಲಿ, ಅವನು ಕೊಳ್ಳದೇಕಾದ ರಸಗೊಬ್ಬರ, ಔಷಧಿಗಳ ಬೆಲೆ ಬಟ್ಟೆ ಉಪ್ಪು ಸೀಮೆ ಎಣ್ಣೆಗಳ ಬೆಲೆ ಏನೆ ಇರಲಿ. ಅದು ಧಾನ್ಯ ವರ್ತಕನ ಹೊಣೆಯಲ್ಲ.

ಒಟ್ಟಾರೆಯಾಗಿ ನರಸಿಂಹರಾಯರ ಸರ್ಕಾರ ಇತರ ಅನೇಕ ಸಾರ್ವಜನಿಕ ರಂಗಗಳಲ್ಲಿ ಖಾಸಗೀಕರಣ ತರುತ್ತಿರುವಂತೆಯೇ ಸಾರ್ವಜನಿಕ ವಿತರಣಾ ಜಾಲವನ್ನು ಪೂರ್ಣವಾಗಿ ನಾಶ ಮಾಡಿಯೇ ಬಿಟ್ಟಿದೆ. ಐ.ಎಂ.ಎಫ್‌ಗೆ ಅದರ ಹಿಂದಿರುವ ವಿಶ್ವದ ಬಹುರಾಷ್ಟ್ರೀಯ ಕಂಪನಿಗಳಿಗೆ, ವಿಶ್ವದ ಧಾನ್ಯ ವಹಿವಾಟಿನಲ್ಲಿ ಕಾಲು ಭಾಗದಷ್ಟನ್ನು ತನ್ನ ಮುಷ್ಠಿಯಲ್ಲಿ ಹಿಡಿದುಕೊಂಡಿರುವ 'ಕಾರ್ಗಿಲ್' ಕಂಪನಿಗೆ ಬಹಳ ಖುಷಿಯಾಗಿದೆ. ಕಾರ್ಗಿಲ್ ಎಂಬ ಈ ಬೃಹತ್ ಕಂಪನಿ ಕೇವಲ ಬೀಜ ಮಾರಿ ಹಣ ಮಾಡುವ ಕಂಪನಿ ಮಾತ್ರ ಎಂದು ರೈತರು ಲೆಕ್ಕ ಹಾಕಿದರೆ ಭಾರಿ ದೊಡ್ಡ ತಪ್ಪಾದೀತು.



ಒಂದೇ ಮನಸ್ಸಿನ ಎರಡು ಮುಖಗಳು

ಕಾಂಗ್ರೈ ಮತ್ತು ಬಿ.ಜೆ.ಪಿ.ಯ ಪರ್ಯಾಯ ಬಜೆಟ್‌ಗಳು

1993-94 ರ ಬಜೆಟ್ ಶ್ರೀಮಂತ-ಪರ ಎಂಬ ಕಾರಣಕ್ಕಾಗಿ ಅದನ್ನು ವಿರೋಧಿಸುವುದಾಗಿ ತಿಳಿಸಿರುವುದು ಕೇವಲ ಬಿ.ಜೆ.ಪಿ. ಗೋಸುಂಬೆತನ. ಏಕೆಂದರೆ ಬಿ.ಜೆ.ಪಿ.ಯೇ ಸ್ವತಃಕೆಲವು ದಿನಗಳ ಹಿಂದೆ ಪತ್ರಿಕೆಗಳಿಗೆ ಬಿಡುಗಡೆಮಾಡಿದ 'ಪರ್ಯಾಯ ಬಜೆಟ್' ಕೂಡಾ ಮನಮೋಹನ್‌ಸಿಂಗ್ ತೆಗೆದುಕೊಂಡಿರುವ ನಿರ್ಣಯಗಳನ್ನೇ ಪ್ರತಿಪಾದಿಸಿತ್ತು. ಬಿ.ಜೆ.ಪಿ.ಯ "ಪರ್ಯಾಯ ಬಜೆಟ್" ಮತ್ತು ಬಜೆಟ್ ನಂತರದ ಅದರ ಪ್ರತಿಕ್ರಿಯೆಗಳು ಮತ್ತೊಮ್ಮೆ ಆ ಪಕ್ಷದ ಇಬ್ಬಂದಿತನವನ್ನು, ನಿರಂತರವಾಗಿ ಸುಳ್ಳುಗಳನ್ನು ಹೇಳುತ್ತಲೇ ಇರುವ ಪಕ್ಷ ಎಂಬುದನ್ನು ಬಯಲುಮಾಡಿದೆ.

ತನ್ನ 'ಬಜೆಟ್ ಪ್ರಸ್ತಾವ'ಗಳಲ್ಲಿ ಬಿ.ಜೆ.ಪಿ. "ಆಂತರಿಕ (ದೇಶದೊಳಗೆ ಮಾತ್ರ) ಉದಾರೀಕರಣ" ನಡೆಯಲಿ, ಅದಕ್ಕಾಗಿ ಉತ್ಪಾದನೆಯ ಮೇ[illegible]ನ ಹತೋಟಿಗಳನ್ನು, ಮಿತಿಗಳನ್ನು ರದ್ದು ಮಾಡಬೇಕು ಎಂದಿತ್ತು. ಕಂಪೆನಿಗಳ ಮೇಲಿನ ತೆರಿಗೆಗಳನ್ನು 51.75 ಶೇ. ದಿಂದ 45 ಶೇ. ಕ್ಕೆ ಇಳಿಸಬೇಕು ಎಂದು ಅದು ಒತ್ತಾಯಿಸಿತ್ತು. ಕಸ್ಟಮ್ಸ್ ಸುಂಕಗಳಲ್ಲಿ ಕಡಿತ, ಅಬ್ಕಾರಿ ಸುಂಕಗಳಲ್ಲಿ 5-15 ಶೇ. ಕಡಿತ ಮಾಡಬೇಕೆಂದು ಅದು ಒತ್ತಾಯಿಸಿತ್ತು. ಈ ಎರಡು ಸುಂಕಗಳನ್ನು ಕಾಂಗ್ರೆಸ್ (ಐ) ಸರಕಾರ ಗಮನಾರ್ಹವಾಗಿ ಇಳಿಸಿದೆ. ಕಂಪೆನಿ ತೆರಿಗೆಗಳನ್ನು ಮುಂದಿನ ಬಜೆಟ್‌ನಲ್ಲಿ ಕಮ್ಮಿ ಮಾಡುವುದಾಗಿ ಭರವಸೆ ನೀಡಿದೆ. ಬಿ.ಜೆ.ಪಿ.ಗೆ ಇದರಿಂದ ಸಾಕಷ್ಟು ತೃಪ್ತಿಯಾಗಿರಬೇಕು!

ರೂಪಾಯಿಯನ್ನು ತಕ್ಷಣ 80 ಶೇ. ಪರಿವರ್ತನೀಯ ಗೊಳಿಸಬೇಕು, ಒಂದು ವರ್ಷದ ನಂತರ ಅದು ಶೇ. 100ಕ್ಕೆ ಏರಿಸಬೇಕು ಎಂದೂ ಒತ್ತಾಯಿಸಿತ್ತು. ಮನಮೋಹನ್‌ಸಿಂಗ್ ಬಿ.ಜೆ.ಪಿ. ಬಯಸಿದ್ದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಒಂದೇ ಏಟಿಗೆ 100 ಶೇ. ಪರಿವರ್ತನೀಯತೆ ತಂದಿದ್ದಾರೆ. ಇಲ್ಲಿಯಂತೂ ಬಿ. ಜೆ.ಪಿ. ಬಯಸಿದ್ದಕ್ಕಿಂತಲೂ ಹೆಚ್ಚು ಪಡೆದ ತೃಪ್ತಿಯಿರಬೇಕು! ಆದರೆ ಉದಾರೀಕರಣ ಹಾಗೂ ಪೂರ್ಣ ರೂಪಾಯಿ ಪರಿವರ್ತನೆಯಿಂದ ದೇಶೀ ಉದ್ದಿಮೆಗಳಿಗೆ ಹೇಗೆ ಪ್ರಯೋಜನವಾಗುತ್ತದೆ ಎಂದು ಬಿ.ಜೆ.ಪಿ.ಗೂ ತಿಳಿದಂತಿಲ್ಲ.

ಇಷ್ಟೇ ಅಲ್ಲ, "ಸಾರ್ವಜನಿಕ ವಲಯದ ಘಟಕಗಳ ಶೇರುಗಳ ಮಾರಾಟವನ್ನು ನಿಯಂತ್ರಿಸಲು ಒಂದು ಬಂಡವಾಳ ಹಿಂತೆಗೆದುಕೊಳ್ಳುವಿಕೆ ಆಯೋಗ ರಚಿಸಬೇಕು" ಎಂದು ಬಿ.ಜೆ.ಪಿ. ಪ್ರಸ್ತಾವ ನೀಡಿತ್ತು. ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಿಸುವ ಸರಕಾರದ ನಿರ್ಣಯವನ್ನು ಬಿ.ಜೆ.ಪಿ. ಸಂಪೂರ್ಣವಾಗಿ ಬೆಂಬಲಿಸುತ್ತದೆಯೆಂಬುದು ಸ್ಪಷ್ಟ. ಸಾಮಾನ್ಯ ಮತ್ತು ಜೀವ ವಿಮಾ ವಲಯಗಳಲ್ಲಿ ಪ್ರೀಮಿಯಂ ದರಗಳನ್ನು ಇಳಿಸಲು, ಸೇವಾ ಮಟ್ಟವನ್ನು ಉತ್ತಮಪಡಿಸಲು ಅವನ್ನು ಖಾಸಗಿಯವರಿಗೆ ತೆರೆಯಬೇಕೆಂಬುದು ಕೂಡಾ ಬಿ.ಜೆ.ಪಿ. ಪ್ರಸ್ತಾವಗಳಲ್ಲಿ ಒಂದು. ಸರಕಾರ ವಿಮಾ ವಲಯವನ್ನು ಕಳ್ಳತನದಿಂದ ಖಾಸಗಿಯವರಿಗೆ, ವಿದೇಶೀಯವರಿಗೆ ತೆರೆದಿದೆ ಎಂಬುದು ತಿಳಿದಿದೆ. ಬಜೆಟ್‌ನಲ್ಲಿ ಇದನ್ನು ನೇರವಾಗಿ ಪ್ರಸ್ತಾಪಿಸದಿದ್ದರೂ ವಿಮಾ ವಲಯದ 'ಸುಧಾರಣೆ' ಗೆ ಸಮಿತಿ ನೇಮಿಸುವ ಪ್ರಸ್ತಾವ ಮಾಡಿ ಬಿ.ಜೆ.ಪಿ.ಯ ಒತ್ತಾಯವನ್ನು ಒಪ್ಪಿಕೊಂಡಿದೆ.

ಬಿ.ಜೆ.ಪಿ.ಯ ಬಜೆಟ್ ಪ್ರಸ್ತಾವಗಳನ್ನು ನೋಡಿದರೆ ಅದರ ಆರ್ಥಿಕ ನೀತಿ ನರಸಿಂಹರಾವ್ ಸರಕಾರದ ಐ.ಎಂ.ಎಫ್-ವಿಶ್ವಬ್ಯಾಂಕ್ ಆದೇಶದ ನೀತಿಗಳಿಗಿಂತ ಭಿನ್ನವಾಗಿಲ್ಲ ಎನ್ನುವುದು ಯಾರಿಗಾದರೂ ಸ್ಪಷ್ಟವಾಗುತ್ತದೆ.

ಹೀಗಿರುವಾಗ ಬಿ.ಜೆ.ಪಿ.ಯ ತಾನು ದೇಶದ ಆರ್ಥಿಕ ಸಾರ್ವಭೌಮತ್ವ ಕಾಪಾಡುತ್ತೇನೆ ಎಂಬ ಮಾತು ಹಾಸ್ಯಾಸ್ಪದ. ಬಿ.ಜೆ.ಪಿ. ಬಯಸುವ "ಆಂತರಿಕ ಉದಾರೀಕರಣ" ಐ.ಎಂ.ಎಫ್-ವಿಶ್ವಬ್ಯಾಂಕ್ ನೀಡುವ 'ಆದೇಶ'ಗಳನ್ನು ಪಾಲಿಸದೆ ಸಾಧ್ಯವಿಲ್ಲ. ಈ 'ಉದಾರೀಕರಣ' ಐ.ಎಂ.ಎಫ್. ವಿಶ್ವಬ್ಯಾಂಕ್ ಸಾಲವನ್ನೇ ಪೂರ್ಣ ಅವಲಂಬಿಸಿರುವಾಗ ವಿದೇಶೀ ಬಂಡವಾಳಕ್ಕೆ ಬಾಗಿಲು ತೆರೆಯದೆ ಟಾಟಾ-ಬಿರ್ಲಾಗಳಿಗೆ 'ಉದಾರೀಕರಣ' ಸಾಧ್ಯವಿಲ್ಲ ಎಂದು ಅರ್ಥಶಾಸ್ತ್ರದ ತುಸು ಜ್ಞಾನವಿದ್ದವಂತರಿಗೂ ತಿಳಿಯುವ ಅಂಶ. 'ಜಾಗತಿಕ ಮಾರುಕಟ್ಟೆ'ಯೊಡನೆ ಒಂದಾಗಬೇಕೆಂದು ಟಾಟಾ-ಬಿರ್ಲಾಗಳೇ ತುದಿಗಾಲ ಮೇಲೆ ನಿಂತಿರುವಾಗ ಬಿ.ಜೆ.ಪಿ.ಯ "ಆಂತರಿಕ ಉದಾರೀಕರಣ ಮಾತ್ರ" ಎಂಬ ಮಾತಿಗೆ ಏನು ಅರ್ಥವಿದೆ? ಅದು ಕೇವಲ ತನ್ನದು ಕಾಂಗ್ರೆಸ್(ಐ) ಗಿಂತ ಭಿನ್ನ ನೀತಿ ಎಂದು ಜನಗಳಿಗೆ ಮೋಸಮಾಡಲು ಮಾತ್ರ.

ಮನಮೋಹನಸಿಂಗ್ ಬಜೆಟ್ ಬಿ.ಜೆ.ಪಿ.ಯ ಹಲವು "ಬೇಡಿಕೆ"ಗಳನ್ನು ಈಡೇರಿಸಿದೆ. ಏಕೆಂದರೆ ಬಿ.ಜೆ.ಪಿ. 'ಪರ್ಯಾಯ ಪ್ರಸ್ತಾವ' ಗಳೂ ಭಾರತದ ದೊಡ್ಡ ಬಂಡವಾಳಿಗರ ಹಿತಾಸಕ್ತಿಗಳನ್ನು ಪ್ರೋತ್ಸಾಹಿಸುವ ನೀತಿಗಳಷ್ಟೇ. ಬಡಜನರಿಗೆ, ಕಾರ್ಮಿಕ ವರ್ಗಕ್ಕೆ ರೈತಾಪಿ ವರ್ಗಕ್ಕೆ ಬಿ.ಜೆ.ಪಿ. ಪ್ರಸ್ತಾವಗಳಲ್ಲಿ ಏನೂ ಇಲ್ಲ. ಹೀಗಿರುವಾಗ ಮನಮೋಹನ್‌ಸಿಂಗ್‌ರ ಬಜೆಟ್ 'ಶ್ರೀಮಂತರ-ಪರ' ಎಂಬ ಟೀಕೆ ಗೋಸುಂಬೆತನವಲ್ಲದೆ ಇನ್ನೇನು? ಕೇವಲ ರಾಜಕೀಯ ಕಾರಣಗಳಿಗಾಗಿ. ಅದು ಈಗ ಬಜೆಟನ್ನು ವಿರೋಧಿಸಿ ತಾನೂ ಬಡವರ ಬಂಧು ಎಂದು ತೋರಿಸಿಕೊಳ್ಳಲು ನಿರ್ಧರಿಸಿದೆ. ಆದರೆ ಪಕ್ಷವೇ ಸ್ವತಃ ನೀಡಿದ ಪ್ರಸ್ತಾವಗಳಲ್ಲಿ ತೋರಿದ ಅದರ ನಿಜವಾದ ಬಯಕೆ ಬಯಲಾಗಿರುವಾಗ ಇಂತಹ ಟೊಳ್ಳು ಘೋಷಣೆಗಳು ಯಾರನ್ನು ಮರಳು ಮಾಡಲು ಸಾಧ್ಯವಿಲ್ಲ.

ವಾಸ್ತವವಾಗಿ ತನ್ನ ಪ್ರಸ್ತಾವಗಳಲ್ಲಿ ಹಲವನ್ನು ಡಾ. ಮನಮೋಹನ್‌ಸಿಂಗ್ ತನ್ನ ಬಜೆಟಿನಲ್ಲಿ ಸೇರಿಸಿದ್ದರಿಂದ ಈಗ ತಾನೂ ಒಂದು ವಿರೋಧಪಕ್ಷ ಎಂದು ಹೇಳಿಕೊಳ್ಳಲು ಹೊಸದೊಂದು ಆರ್ಥಿಕ ಪ್ರಸ್ತಾವಗಳ ಪಟ್ಟಿಯನ್ನು ಅದೀಗ ತಯಾರಿಸಬೇಕಾಗಿದೆ. ಎಂದೂ ಈಡೇರದ 'ಹಿಂದೂರಾಷ್ಟ್ರ' ಪರಿಕಲ್ಪನೆಗೆ ಸೂಕ್ತವಾದ ಆರ್ಥಿಕ ಪ್ರಸ್ತಾವಗಳಿವು ಎಂದು ಜನಗಳನ್ನು ನಂಬಿಸಬೇಕಾಗಿದೆ. ಆದರೆ ಬಿ.ಜೆ.ಪಿ. ಮುಖಂಡತ್ವ ಏನೇ ತಿಪ್ಪರಲಾಗ ಹಾಕಿದರೂ ಅದರ ಆರ್ಥಿಕ ನೀತಿ ದೊಡ್ಡ ಬಂಡವಾಳಶಾಹಿ-ತನ್ಮೂಲಕದ ಹಿತಾಸಕ್ತಿಗಳ ರಕ್ಷಣೆಯ ಮತ್ತೊಂದು ವಿಧಾನ ಎಂಬುದನ್ನಂತೂ ಮರೆಮಾಡಲು ಆಗುವುದಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಪ್ರಕಾಶ್ ಕಾರಟ್ ಹೇಳಿದ್ದಾರೆ.

ಜಾನಕೀ ರಾಮನ್ ನಾಲ್ಕನೇ ವರದಿ ವಿದೇಶಿ ಬ್ಯಾಂಕ್‌ಗಳು ಕೊಬ್ಬಿಸಿದ ಗೂಳಿಗಳು

ಏರಿದ ಹಗರಣದ ಮೊತ್ತ

ಶೇರು ಹಗರಣದಲ್ಲಿ ಸಿಲುಕಿಕೊಂಡ ಬ್ಯಾಂಕುಗಳ ಹಣದ ಮೊತ್ತ 831.66 ಕೋಟಿ ರೂಪಾಯಿಗಳಷ್ಟು ಏರಿದೆ. ಭಾರತೀಯ ರಿಸರ್ವ್ ಬ್ಯಾಂಕ್‌ನ ಜಾನ್‌ಕಿರಾಮನ್ ಸಮಿತಿಯ 'ನಾಲ್ಕನೇ' ವರದಿ ಈ ವಿಷಯವನ್ನು ಹೊರಗೆಳೆದಿದೆ. ಹಿಂದೆ 3192.79 ಕೋಟಿ ರೂಪಾಯಿಗಳೆಂದು ಅಂದಾಜು ಮಾಡಿದ್ದ ಮೊತ್ತ ಈಗ 4024.45 ಕೋಟಿ ರೂಪಾಯಿಗಳಿಗೇರಿದೆ. ಈ ಶೇರು ಹಗರಣದಿಂದಾಗಿ ಕೋಟಿಗಳಿಗೆ ಬೆಲೆಯೇ ಇಲ್ಲವೇನೊ ಎಂಬಂತಾಗಿದೆ.

ದಲ್ಲಾಳಿಗಳನ್ನು ಕೊಬ್ಬಿಸಿ ಛೂ ಬಿಟ್ಟ ವಿದೇಶೀ ಬ್ಯಾಂಕುಗಳು

ವಿದೇಶೀ ಬ್ಯಾಂಕುಗಳಾದ ಸ್ಟಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ಮತ್ತು ಎ.ಎನ್. ಝಡ್ ಗ್ರಿಂಡ್ಲೇಸ್ ಬ್ಯಾಂಕುಗಳು ಭಾರತೀಯ ರಿಸರ್ವ್ ಬ್ಯಾಂಕ್ ನಿಯಮಗಳನ್ನು ಸತತವಾಗಿ ಉಲ್ಲಂಘಿಸುತ್ತ ಬಂದಿವೆ ಎಂದಿದೆ ವರದಿ. ಸ್ಟಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ ತನ್ನ ಬಹುತೇಕ ಶೇರು ವ್ಯವಹಾರಗಳನ್ನು ದಲ್ಲಾಳಿ ಹಿತೇನ್ ದಲಾಲನ ಮೂಲಕವೇ ಮಾಡಿದೆ. ತನ್ನ ಎಲ್ಲ ವಿವೇಚನೆಗಳನ್ನೇ ಬಿಟ್ಟುಕೊಟ್ಟ ಈ ಬ್ಯಾಂಕ್ ಹಿತೇನ್ ದಲಾಲ್‌ನಿಗೆ ತನ್ನ ಎಲ್ಲ ಹಣವನ್ನು ನೀಡಿತು ಎಂದಿದೆ. ಅಷ್ಟೊಂದು ಹಣ ಸಿಕ್ಕಿದ ಮೇಲೆ ಹಿತೇನ್ ದಲಾಲ್‌ನಂತಹವರಿಗ ನಿಯಮಗಳು ಏನಿದ್ದರೇನು ಅವುಗಳ ಉಲ್ಲಂಘನೆಯನ್ನು ನೀರುಕುಡಿದಂತೆ ಮಾಡಿದೆ.

ಹಾಗೆಯೇ ಗ್ರಿಂಡ್ಲೇಸ್ ಬ್ಯಾಂಕ್ ತನ್ನ ಎಲ್ಲ ವ್ಯವಹಾರವನ್ನು ಹರ್ಷದ್ ಮೆಹ್ತನಿಗೆ ನೀಡಿತ್ತು. ಹೀಗೆ ಅವ್ಯವಹಾರಗಳನ್ನೆಲ್ಲ ಕಾನೂನು ಬದ್ಧ ಎಂಬಂತೆ ಮಾಡಿದ ಈ ದಲ್ಲಾಳಿಗಳು ಉಳಿದ ಬ್ಯಾಂಕುಗಳೊಂದಿಗೆ ಸಂಪರ್ಕವನ್ನು ಬೆಳೆಸಿಕೊಂಡು ಹಗರಣ ಮಾಡಿದರು ಈ ಹಗರಣದ ಮೂಲವೇ ವಿದೇಶಿ ಬ್ಯಾಂಕುಗಳು ಎಂದಾಯಿತಲ್ಲವೇ?

ಜಂಟಿ ಪಾರ್ಲಿಮೆಂಟರಿ ಸಮಿತಿಯ ಮುಂದೆ ಸಾಕ್ಷಿನೀಡಬೇಕಾಗಿರುವ ಕೇಂದ್ರ ಸಚಿವರುಗಳು

ಜಂಟಿ ಪಾರ್ಲಿಮೆಂಟರಿ ಸಮಿತಿಯ ಅಧ್ಯಕ್ಷರು ಲೋಕಸಭೆಯ ಸಭಾಪತಿಗಳಿಗೆ ಪತ್ರ ಬರೆದು ಶೇರು ಹಗರಣದ ಸಂಬಂಧದಲ್ಲಿ ಕೆಲವು ಸಚಿವರುಗಳ ಸಾಕ್ಷಿ ಬೇಕಾಗುವುದರಿಂದ ಅವರನ್ನು ಸಾಕ್ಷಿ ನೀಡುವಂತೆ ಕರೆಯಲು ಅನುಮತಿ ಕೇಳಿದ್ದರಿಂದ ಲೋಕ ಸಭಾಪತಿ ಶ್ರೀ ಶಿವರಾಜ್ ಪಾಟೀಲ್ ಜಂಟಿ ಪಾರ್ಲಿಮೆಂಟರಿ ಸಮಿತಿಗೆ ಸಾಕ್ಷಿಗಳನ್ನು ಕರೆಯಲು ಅನುಮತಿ ನೀಡಿದ್ದಾರೆ.

ಈಗಿನ ಅರ್ಥಸಚಿವ ಮನಮೋಹನಸಿಂಗ್, ಸಚಿವ ಬಿ. ಶಂಕರಾನಂದ್ ಹಿಂದಿನ ಅರ್ಥಸಚಿವರುಗಳಾದ ಮಧು ದಂಡವತೆ, ಯಶವಂತ್ ಸಿನ್ಹಾ ಮತ್ತು ವಿ.ಪಿ. ಸಿಂಗ್‌ರವರೂ ಸಾಕ್ಷಿನೀಡಲಿದ್ದಾರೆ. ಮತ್ತೆ ಯಾವ ಹಾವು ಚೇಳುಗಳು ಯಾವ ಬುಟ್ಟಿಯಿಂದ ಹೊರಬೀಳಲಿದೆಯೋ ಕಾದು ನೋಡಬೇಕಾಗಿದೆ.



"ಈಗಿನಿಂದ ಇದು ನಮ್ಮ ಭೂಮಿ"

ಬಿಹಾರದ ಭೂ ಹೋರಾಟಕ್ಕೆ ಹೊಸ ತಿರುವು

ಬಿಹಾರದಲ್ಲಿ ನಡೆಯುತ್ತಿರುವ ಭೂ ಹೋರಾಟಕ್ಕೆ ಒಂದು ಹೊಸ ತಿರುವು ಬಂದಿದೆ. ಮೂರು ತಿಂಗಳ ಹಿಂದೆ ತಮ್ಮನ್ನು ಜಮೀನಿನಿಂದ ಅಮಾನುಷವಾಗಿ ಹೊರಹಾಕಿದ್ದನ್ನು ಧೈರ್ಯವಾಗಿ ಎದುರಿಸಿ ಹೋರಾಡಿದ 5000 ಕ್ಕೂ ಹೆಚ್ಚು ಭೂರಹಿತ ಹರಿಜನರು, ಆದಿವಾಸಿಗಳು, ಮುಸ್ಲಿಮರು ಮತ್ತು ಹಿಂದುಳಿದ ವರ್ಗಗಳ ಜನರು ತಮ್ಮ ಜಮೀನನ್ನು ಮರಳಿ ವಶಪಡಿಸಿಕೊಂಡಿದ್ದಾರೆ.

ಪೂರ್ಣಿಮಾ ಜಿಲ್ಲೆಯ ಜಲಾಲ್‌ಗಢ್‌ದಲ್ಲಿ ಸ್ಥಳೀಯ ಸಿ.ಪಿ.ಐ(ಎಂ) ನಾಯಕತ್ವದಲ್ಲಿ ಫೆಬ್ರವರಿ 20 ರಂದು ಈ ಪ್ರಕರಣ ನಡೆದಿದೆ ಎಂದು ಐ.ಎನ್.ಎಸ್. ವರದಿ ಮಾಡಿದೆ.

ಆ ದಿನ ಬೆಳಿಗ್ಗೆ ಈ ಭೂರಹಿತ ರೈತಾಪಿ ಜನರು ಒಟ್ಟು ಸೇರಿ ಜಲಾಲಗಢದಲ್ಲಿ ಮನೆಗಳನ್ನು ನಿರ್ಮಿಸಿಕೊಂಡರು. ಕಳೆದ ವರ್ಷ ನವೆಂಬರ್ ಆರರಂದು ಭೂಮಾಲೀಕರು ಸ್ಥಳೀಯ ಪೋಲೀಸರ ನೆರವಿನಿಂದ ಮಹಮದ್ ಕಟ್ಟು ಮತ್ತು ಮಹಮದ್ ಸಗೀರ್ ಎಂಬವರನ್ನು ಗುಂಡಿಟ್ಟು ಕೊಂದು ದೇಹ ನಿಂತ ವೈರನ್ನು ಸುಟ್ಟುಹಾಕಿದ ಜಾಗದಲ್ಲೇ ಆ ಕೊಂದ ರೈತರು ಬಂದು ಸೇರಿದ್ದರು. 1992 ರ ಆ ಕರಾಳ ದಿನದಂದು ಇಬ್ಬರು ಮಕ್ಕಳು ಹಾಗೂ ಒಬ್ಬ ಮಹಿಳೆ ಕೂಡಾ ಅಸುನೀಗಿದ್ದರು. ಅವರ ಶವಗಳು ಇದುವರೆಗೂ ಸಿಕ್ಕಿಲ್ಲ.

ಈ ಹತ್ಯಾಕಾಂಡದಿಂದ ತಾವು ಭೂರಹಿತ ಕೃಷಿಕರ ಮನೋಸ್ಥೈರ್ಯವನ್ನು ಪೂರ್ತಿಯಾಗಿ ನಾಶಗೊಳಿಸಿದ್ದಾಗಿ ಭೂಮಾಲಿಕರು ಹೆಮ್ಮೆಯಿಂದ ಬೀಗುತ್ತಿದ್ದರು. ಅಲ್ಲದೆ ಬಿ.ಜೆ.ಪಿ. ಮತ್ತು ಸಂಘ ಪರಿವಾರ ದುಷ್ಟ ಕೂಟ ಅಯೋಧ್ಯೆ ವಿವಾದ ಹಿನ್ನೆಲೆಯಲ್ಲಿ ಸೃಷ್ಟಿಸಿದ ಕೋಮು ಗಲಭೆಗಳಿಂದಾಗಿ ಭೂಮಾಲಿಕರ ವಿರುದ್ಧ ಹೋರಾಟದಲ್ಲಿ ರೈತರು ತಮ್ಮ ಒಗ್ಗಟ್ಟನ್ನು ಕಳೆದುಕೊಳ್ಳುತ್ತಾರೆ ಎಂದು ನಿರೀಕ್ಷಿಸಿದ್ದರು.

ಆದರೆ ದುಷ್ಟ ಭೂಮಾಲಿಕರ ನಿರೀಕ್ಷೆ-ಆಕ್ರಮಗಳನ್ನೆಲ್ಲ ಭೂರಹಿತ ಕೃಷಿಕರು ನುಚ್ಚು ನೂರು ಮಾಡಿದರು. ಹಲವರ ಜೀವ ಬಲಿ ತೆಗೆದುಕೊಂಡ ಹತ್ಯಾಕಾಂಡ ಹಾಗೂ ತಮ್ಮ ಸರ್ವಸ್ವವನ್ನು ನಾಶಮಾಡಿದ ಬೆಂಕಿಯ ಕೆನ್ನಾಲಗೆಯಿಂದಲೂ ಅಧೀರರಾಗದ ಅವರು ಫೀನಿಕ್ಸ್ ಹಕ್ಕಿಯಂತೆ ಮೇಲೆದ್ದು ಬಂದು ಹೋರಾಟದ ಧ್ವಜವನ್ನು ಮೇಲಕ್ಕೆ ಎತ್ತಿಹಿಡಿದರು.

ಕೈಗಳಲ್ಲಿ ಕೆಂಬಾವುಟಗಳನ್ನು ಹಿಡಿದಿದ್ದ 5000 ಕ್ಕೂ ಹೆಚ್ಚು ಕ್ರಾಂತಿಕಾರಿ ರೈತರು ಜಲಾಲಗಢದಲ್ಲಿ ಸೇರಿದರು. ಕೋಮು ಹಾಗೂ ಪ್ರತಿಗಾಮಿ ಶಕ್ತಿಗಳ ಛಿದ್ರಕಾರಿ ಸಂಚುಗಳನ್ನು ಸೋಲಿಸುವ ಪ್ರತಿಜ್ಞೆ ಕೈಗೊಂಡರು. ಭೂಮಾಲಿಕರು ಮತ್ತು ಇತರ ಸ್ಥಾಪಿತ ಹಿತಾಸಕ್ತಿಗಳ ವಿರುದ್ಧ ಸಂಯುಕ್ತ ಹೋರಾಟವನ್ನು ಮುಂದುವರಿಸಲು ನಿರ್ಧರಿಸಿದರು. ರೈತರು ಬಂಡಾಯದ ಬಾವುಟವನ್ನು ಎತ್ತುತ್ತಿದ್ದಂತೆಯೇ ಇಡೀ ಪ್ರದೇಶ ಕ್ರಾಂತಿಕಾರಿ ಘೋಷಣೆಗಳಿಂದ ಅನುರಣಿಸಿತು.

ಇದೀಗ ನಮ್ಮ ಜಮೀನು......

ಹೀಗೆ ಘೋಷಣೆಗಳು ಮೊಳಗುತ್ತಿರುವಾಗ ನೆರೆದಿದ್ದ ಸಾವಿರಾರು ಗಂಡಸರು ಮತ್ತು ಹೆಂಗಸರು ಸುಮಾರು 100 ಎಕರೆ ಪ್ರದೇಶದಲ್ಲಿ ಚದುರಿಹೋಗಿ 1200 ತಾತ್ಕಾಲಿಕ ಗುಡಿಸಲುಗಳನ್ನು ಕಟ್ಟಿದರು. ಜಮೀನಿನ ಮೇಲೆ ತಮ್ಮ ಹಕ್ಕನ್ನು ಪ್ರತಿಷ್ಠಾಪಿಸುವ ಉದ್ದೇಶದಿಂದ ಈ ಕ್ರಮ ಕೈಗೊಂಡರು.

"ಈಗಿನಿಂದ ಇದು ನಮ್ಮ ಜಮೀನು" ಎಂದು ಅವರು ಘೋಷಿಸಿದರು. ತನ್ಮೂಲಕ ರಾಜ್ಯದ ಭೂಸಮರಕ್ಕೆ ನವಚೈತನ್ಯ ತುಂಬಿದರು.

ಸಿಪಿಐ(ಎಂ) ಪೂರ್ಣಿಮಾ ಜಿಲ್ಲಾ ಸಮಿತಿ ಕಾರ್ಯದರ್ಶಿ ಕುಮಾರ್ ನರೇಂದ್ರ ಸಿಂಗ್, ರೈತ ನಾಯಕ ನಾಗೇಂದ್ರ ನಂದನ್ ಸಹಾ, ಪರಮಾನಂದ ಸೋರೇನ್, ಮಧುಸೂದನ ಋಷಿದೇವ್, ಮತ್ತಿರರು ಈ ಚಳುವಳಿ ಕಾರ್ಯಕ್ರಮಕ್ಕೆ ನೇತೃತ್ವ ನೀಡಿದರು. ಪೂರ್ಣಿಮಾದ ಕ್ರಾಂತಿಕಾರಿ ರೈತರನ್ನು ಪಕ್ಷದ ಬಿಹಾರ ರಾಜ್ಯ ಸಮಿತಿ ಅಭಿನಂದಿಸಿದೆ.

ಸಿಪಿಐ(ಎಂ) ಪತ್ರಿಕೆ ಬಯಲಿಗೆಳೆದ ಲಾಟರಿಹಗರಣ

ಕೋಟ್ಯಂತರ ರೂಪಾಯಿಗಳ ಸೂತ್ರದ ತ್ರಿಪುರಾ ರಾಜ್ಯ ಲಾಟರಿ ಹಗರಣದಲ್ಲಿ ಸಿಕ್ಕಿಂ ರಾಜ್ಯ ಕಾಂಗ್ರೆಸ್(ಐ) ನಾಯಕ ಅಶೋಕ ಸುಬ್ಬಾ ಮತ್ತಿತರರು ಸೆರೆಯಾಗಿರುವುದನ್ನು ತಾವು ಈಗಾಗಲೇ ಓದಿರುತ್ತೀರಿ. ಈ ಸಂಬಂಧದಲ್ಲಿ ಇನ್ನಷ್ಟು ಮಾಹಿತಿಗಳು ನಮಗೆ ಲಭ್ಯವಾಗಿವೆ.

ಸುಬ್ಬಾ ಮತ್ತಿತರರನ್ನು ತ್ರಿಪುರಾ ಪೋಲೀಸರು ಫೆಬ್ರವರಿ 18 ರಂದು ಅಧಿಕೃತವಾಗಿ ಬಂಧಿಸಿದರು. ಅದಕ್ಕೂ ನಾಲ್ಕು ದಿನಗಳ ಮುನ್ನವೇ ಸುಬ್ಬಾ ಮತ್ತು ಇತರ ನಾಲ್ವರನ್ನು ಸ್ಥಳೀಯ ಹೋಟೆಲ್ ಒಂದರಲ್ಲಿ ಸುತ್ತುವರಿದು ವಿಚಾರಣೆಗೆ ಒಳಪಡಿಸಿದರು.

ಸಿಪಿಐ(ಎಂ) ತ್ರಿಪುರಾ ರಾಜ್ಯ ಸಮಿತಿ ಮುಖ ಪತ್ರಿಕೆ 'ಡೈಲಿ ದೇಶರ ಕಥಾ'ದಲ್ಲಿ ಹಗರಣ ಪ್ರಕಟಗೊಂಡ ಹಿನ್ನೆಲೆಯಲ್ಲಿ ಪೋಲೀಸರು ಕಾರ್ಯಾಚರಣೆ ನಡೆಸಿ ಈ ಬಂಧನ ನಡೆಸಿದ್ದರು.

ಪಶ್ಚಿಮ ತ್ರಿಪುರಾದ ಮುಖ್ಯ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಜಾಮೀನು ಅರ್ಜಿಗಳನ್ನು ತಿರಸ್ಕರಿಸಿ ಆರೋಪಿಗಳನ್ನು ಅಗರ್ತಲಾ ಸೆಂಟ್ರಲ್ ಜೈಲಿನಲ್ಲಿ ಹಾಕುವಂತೆ ಸೂಚಿಸಿದರು. ಅಖಿಲ ಭಾರತ ಕಾಂಗ್ರೆಸ್(ಐ) ಸಮಿತಿಯ ಕಾನೂನು ವಿಭಾಗದ ಸಂಚಾಲಕ ಆರ್.ಎಸ್.ಮಿತ್ತಲ್ ದೆಹಲಿಯಿಂದ ಅಗರ್ತಲಾಕ್ಕೆ ಧಾವಿಸಿ ಬಂದು ಸುಬ್ಬಾರಿಗೆ ಜಾಮೀನು ಪಡೆಯಲು ಯತ್ನಿಸಿದರು. ಆದರೆ ಈ ಕಾರ್ಯದಲ್ಲಿ ಅವರಿಗೆ ಸಫಲತೆ ದೊರಕಲಿಲ್ಲ!

ಸಿಕ್ಕಿಂ ಪ್ರದೇಶ ಕಾಂಗ್ರೆ ಅಧ್ಯಕ್ಷ ಹಾಗೂ ಬಿಂದಿಯಾ ಲಾಟರಿ ಏಜೆನ್ಸಿಯ ಮಾಲೀಕ ಅಶೋಕ್ ಕುಮಾರ್ ಸುಬ್ಬಾ ತ್ರಿಪುರಾ ಮುಖ್ಯಮಂತ್ರಿ ಸಮೀರ ರಂಜನ್ ಬರ್ಮನ್ ಮತ್ತು ಕೇಂದ್ರ ಉಕ್ಕು ಖಾತೆ ಸಚಿವ ಸಂತೋಷ್ ಮೋಹನ್‌ದೇವ ಜತೆ ಗುಪ್ತ ಒಪ್ಪಂದವೊಂದನ್ನು ಮಾಡಿಕೊಂಡ ಫಲವಾಗಿ ತ್ರಿಪುರಾದ ಮೂರು ಲಾಟರಿಗಳ (ಚೇತಕ್,ಧನ,ಲಾಭಲಕ್ಷ್ಮಿಸೂಪರ್) ಏಕೈಕ ಏಜೆಂಟ್ ಆಗಿ ನೇಮಕಗೊಂಡರು. ಆದರೆ ಈ ಬಗ್ಗೆ ರಾಜ್ಯ ಸಚಿವ ಸಂಪುಟ ಅಂಗೀಕಾರ ಪಡೆಯಲಿಲ್ಲ. ಮುಖ್ಯಮಂತ್ರಿಯ ಬಾಯಿ ಮಾತಿನ ಅನುಮತಿ ಮೇರೆಗೆ ಸುಬ್ಬಾ ಜನವರಿ 25 ರಿಂದಲೇ ಲಕ್ಷಾಂತರ ಟಿಕೆಟ್‌ಗಳನ್ನು ಮಾರಾಟ ಮಾಡಲು ಆರಂಭಿಸಿದರು.

ಪ್ರಾಥಮಿಕ ಅಂದಾಜಿನ ಪ್ರಕಾರ ಈ ರೀತಿಯಲ್ಲಿ ಅಧಿಕೃತ ಒಪ್ಪಿಗೆ ಇಲ್ಲದೆ 120 ಕೋಟಿ ರೂ. ಮೌಲ್ಯದ ಟಿಕೆಟ್‌ಗಳು ದೇಶಾದ್ಯಂತ ಮಾರಾಟವಾಗಿವೆ. ಫೆ. 13 ಮತ್ತು 14 ಮತ್ತು 15 ರಂದು ನಡೆಯಬೇಕಿದ್ದ ಮೊದಲನೆ ಹಾಗೂ ಎರಡನೇ ಡ್ರಾಗಳು ನಡೆಯಲಿಲ್ಲ. ಇದರಿಂದ ಚಿಂತೆಗೀಡಾದ ದೇಶದೆಲ್ಲೆಡೆಯ ಉದ ಏಜೆಂಟರು ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿಯವರಿಗೆ ದೂರವಾಣಿ ಕರೆಗಳನ್ನು ಮಾಡತೊಡಗಿದರು. ಫೆ. 14 ರಂದು ಅಗರ್ತಲಾಕ್ಕೆ ಧಾವಿಸಿದ ಸುಬ್ಬಾ ಮತ್ತು ಅವರ ಸಹಚರರು ಇಡೀ ಹಗರಣವನ್ನು ಮುಚ್ಚಿ ಹಾಕುವ ಉದ್ದೇಶದಿಂದ ಮುಖ್ಯಮಂತ್ರಿ ಬರ್ಮನ್ ಜತೆ ರಹಸ್ಯ ಸಭೆ ನಡೆಸಿದರು. ಆದರೆ ಹಗರಣವನ್ನು ಮುಚ್ಚಿ ಹಾಕುವ ಯತ್ನ 'ದೇಶರ ಕಥಾ' ಸಾಮಾಯಿಕ ವರದಿಯಿಂದ ವಿಫಲವಾಯಿತು.

ವಜಾಕ್ಕೆ ಆಗ್ರಹ

ಲಾಟರಿ ಹಗರಣದ ಹಿನ್ನೆಲೆಯಲ್ಲಿ ಬರ್ಮನ್ ಸರಕಾರವನ್ನು ವಜಾ ಮಾಡುವಂತೆ ಸಿಪಿಐ(ಎಂ) ತ್ರಿಪುರಾ ಕಾರ್ಯದರ್ಶಿ ಮಂಡಲ ಕೇಂದ್ರವನ್ನು ಆಗ್ರಹಪಡಿಸಿದೆ. ಪತ್ರಿಕೆಗಳಲ್ಲಿ ಪ್ರಕಟವಾದ ದಾಖಲೆಗಳು ಸುಬ್ಬಾ ಅವರು ಬರ್ಮನ್ ಮತ್ತು ಸಂತೋಷಮೋಹನ್‌ದೇವ ಜತೆ ಹೆಚ್ಚು ಹಣವನ್ನು ಸಂಗ್ರಹಿಸಿರುವುದನ್ನು ಸಾಬೀತು ಪಡಿಸುತ್ತವೆ ಎಂದು ಅದು ಹೇಳಿದೆ.

ದೇವರು ಮತ್ತು ಧರ್ಮ ಖಾಸಗಿ-

-ಬರಗೂರು ರಾಮಚಂದ್ರಪ್ಪ

ಈ ದೇಶದಲ್ಲಿ ಯಾವುದು ಖಾಸಗಿಯಾಗ ಬೇಕಿತ್ತೋ ಅದು ಸಾರ್ವಜನಿಕಗೊಂಡಿದೆ. ಯಾವುದು ಸಾರ್ವಜನಿಕವಾಗಬೇಕಿತ್ತೋ, ಅದು ಖಾಸಗಿಯಾಗುತ್ತಿದೆ. ದೇವರು ಮತ್ತು ಧರ್ಮ ಖಾಸಗಿಯಾಗಿ, ಮನೆಯೊಳಗೆ ಆಚರಣೆಯಾಗಬೇಕಾದುದ್ದು, ಅದು ಇಂದು ಸಾರ್ವಜನಿಕವಾಗಿ ಆಚರಣೆಗೆ ಒಳಪಟ್ಟಿದೆ. ಸಾರ್ವಜನಿಕಗೊಳಿಸಬೇಕಾಗಿದ್ದ ಆರ್ಥಿಕ ನೀತಿ, ಕೈಗಾರಿಕೋದ್ಯಮ ಇಂದು ಖಾಸಗೀಕರಣಗೊಳಪಡುತ್ತಿದೆ. ಈಗ ದೇಶ ದುರಂತದ ದಾರಿ ಹಿಡಿದಿದೆ ಎಂದು ಖ್ಯಾತ ಬಂಡಾಯ ಸಾಹಿತಿ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಬರಗೂರು ರಾಮಚಂದ್ರಪ್ಪ ದಿನಾಂಕ 2-3-1993 ರಂದು ಕೋಲಾರ ಜಿಲ್ಲೆಯಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ), ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಸಂಘಟನೆಗಳು ಜಿಲ್ಲಾ ಮಟ್ಟದಲ್ಲಿ ಏರ್ಪಡಿಸಿದ ವಿಚಾರ ಸಂಕಿರಣವನ್ನು "ಭಾರತದ ಭವಿಷ್ಯತ್ತು ಮತ್ತು ಕೋಮುವಾದ" ಉದ್ಘಾಟಿಸುತ್ತಾ ಮುಗ್ಧಜನರ ಭಕ್ತಿಯನ್ನು ಬಂಡವಾಳವಾಗಿ ಮಾಡಿಕೊಂಡು ರಾಜಕೀಯ ಲಾಭಕ್ಕೆ ಹಲವರು ಪ್ರಯತ್ನಿಸುತ್ತಿದ್ದಾರೆ. 'ಭಕ್ತಿ ಇರಬೇಕಾದಲ್ಲಿ ಈಗ ಭಯ ಇದೆ. ಧಾರ್ಮಿಕ ಭಯೋತ್ಪಾದಕತೆ ನಡೆದಿದೆ. ಬಡಜನರ ದೀನದಲಿತರ ಹತ್ಯೆ ನಡೆದಿದೆ, ಉತ್ತಮ ಮನುಷ್ಯನನ್ನು ನಿರ್ಮಿಸಬೇಕಾದ ಧರ್ಮ ಮಠಕ್ಕೆ ಇಳಿದಿದೆ ಭೋಗೋತ್ಪತ್ತಿಯಲ್ಲಿ ಮಠಗಳು ಮುಳುಗಿ [illegible] ಧರ್ಮದ ಹೆಸರಿನಲ್ಲಿ ಮಠಗಳ [illegible] ಮಟ್ಟಕ್ಕೆ ಇಳಿದಿದೆ, [illegible] ಮಾನವಧರ್ಮವೇನು"- [illegible] ರಾಜಕೀಯವನ್ನು ನಿಯಂತ್ರಿಸುವ [illegible] ರದು [illegible] ಕೋಮುವಾದವನ್ನು ವಿರೋಧಿಸುತ್ತಾ "ಸಮಾಜವಾದವನ್ನು ವಿರೋಧಿಸುತ್ತಾರೆ" "ಅವರು ಬಹಳ ಅಪಾಯಕಾರಿಯಾಗಿದ್ದಾರೆ." ಎಂದು ಬರಗೂರು ರಾಮಚಂದ್ರಪ್ಪ ಎಚ್ಚರಿಸಿದರು.

ವಿಚಾರ ಸಂಕಿರಣದಲ್ಲಿ ಕೋಮುವಾದ ಶಿಕ್ಷಣ ಮತ್ತು ಯುವಜನತೆ ಬಗ್ಗೆ ಡಿ.ವೈ.ಎಫ್.ಐ ರಾಜ್ಯ ಕಾರ್ಯದರ್ಶಿ ಎಸ್.ವೈ. ಗುರುಶಾಂತ್ ಮಾತನಾಡಿದರು.

ಕೋಮುವಾದ ಮತ್ತು ಸಮೂಹ ಮಾಧ್ಯಮ ಬಗ್ಗೆ ಸ್ಥಳೀಯ ಹೊನ್ನುಡಿ ಪತ್ರಿಕೆಯ ಸಂಪಾದಕರಾದ ಎಂ.ಜಿ. ಪ್ರಭಾಕರ್ ಮಾತನಾಡುತ್ತಾ, ಪತ್ರಕರ್ತರು ಸತ್ಯವನ್ನು ಹೊರತರುವಲ್ಲಿ ಮುಂದಾಗಬೇಕು ಎಂದು ಕರೆ ನೀಡಿದರು. ಸುಳ್ಳು ವದಂತಿಗಳನ್ನು ಕೋಮುವಾದವನ್ನು ಪ್ರಚಾರಗೊಳಿಸುವಲ್ಲಿ ಕೆಲ ಪತ್ರಕರ್ತರು ತೊಡಗಿರುವುದಕ್ಕೆ ವಿಷಾದ ವ್ಯಕ್ತಪಡಿಸಿದರು.

ರಾಷ್ಟ್ರೀಯ ಸಮಗ್ರತೆ ಮತ್ತು ಐಕ್ಯತೆ,-ಕೋಮುವಾದದ ಬಗ್ಗೆ ಸ್ಥಳೀಯ ಅಲ್ ಅಮೀನ್ ಆರ್ಟ್ಸ್ ಅಂಡ್ ಕಾಮರ್ಸ್ ಕಾಲೇಜು ಪ್ರಿನ್ಸಿಪಾಲ್ ಶ್ರೀಮತಿ ಅಕ್ತರ್ ಸಯಿದಾ ಖಾನ್ ಮಾತನಾಡಿದರು. ಕೋಮವಾದ ಮತ್ತು ರಾಜಕೀಯ ಪಕ್ಷಗಳ ಬಗ್ಗೆ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಜಿ.ವಿ. ಶ್ರೀ ರಾಮ ರೆಡ್ಡಿ ಮಾತನಾಡಿದರು. ಪ್ರಾರಂಭದಲ್ಲಿ ಡಿ.ವೈ.ಎಫ್.ಐ ಜಿಲ್ಲಾ ಕಾರ್ಯದರ್ಶಿ ಎಂ.ಎಸ್. ಆನಂದ್ ಸ್ವಾಗತಿಸಿದರು.

ಡಿ.ವೈ.ಎಫ್.ಐ ಅಧ್ಯಕ್ಷರಾದ ವಿ. ನಾಗಪ್ಪ ಅಧ್ಯಕ್ಷತೆವಹಿಸಿದ್ದರು.

ಎಸ್.ಎಫ್.ಐನ ಜಿಲ್ಲಾಧ್ಯಕ್ಷರಾದ ದಕ್ಷಿಣದ ಎಂ.ವಿ. ನಾರಾಯಣ ಸ್ವಾಮಿ ಪ್ರಸ್ತಾವನೆ ಭಾಷಣ ಮಾಡಿದರು.

ಭದ್ರಾವತಿ ತಾಲೂಕು ಡಿ.ವೈ.ಎಫ್.ಐ ಸಮಾವೇಶ

ಭದ್ರಾವತಿ : ಡಿ.ವೈ.ಎಫ್.ಐ ಭದ್ರಾವತಿ ತಾಲೂಕ್ ಸಮಾವೇಶ ಫೆ. 28ರಂದು ನಡೆಯಿತು. ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ರಾಜ್ಯ ಡಿ.ವೈ.ಎಫ್.ಐ.ನ ಸಹಕಾರ್ಯದರ್ಶಿಗಳಾದ ಬಾಲಕೃಷ್ಣ ಶೆಟ್ಟಿಯವರು ಇಂದು ಈ ಸಮಾವೇಶವು ನಡೆಯುತ್ತಿರುವುದು ಅತ್ಯಂತ ಮಹತ್ವದ್ದು ಎಂದು ಹೇಳಿದರು. ಡಿಸೆಂಬರ್ 6ರ ಘಟನೆಯನ್ನು ಅದರ ಕೋಮುದಳ್ಳುರಿಯಿಂದ ಹಿಂದೂ ಮುಸಲ್ಮಾನರ ಹೃದಯ ಒಡೆದು ಸಾವಿರಾರು ಜನ ಬಲಿಯಾಗಿ ಕೋಟ್ಯಂತರ ಆಸ್ತಿಪಾಸ್ತಿ ನಾಶವಾಗಿ ಸ್ವತಂತ್ರ ಇತಿಹಾಸದಲ್ಲಿ ಕಪ್ಪು ಅಕ್ಷರಗಳಲ್ಲಿ ಬರೆಯುವಂತಹ ಪರಿಸ್ಥಿತಿಯನ್ನು ಹಿಂದೂ ಮತ್ತು ಮುಸ್ಲಿಂ ಕೋಮುವಾದಿಗಳು ನಿರ್ಮಾಣ ಮಾಡಿದ್ದು ಇದನ್ನು ಯುವ ಶಕ್ತಿಗಳು ಎದುರಿಸದಿದ್ದರೆ ಇನ್ನು ಮುಂದಿನ ದಿನಗಳಲ್ಲಿ ಕೋಮುವಾದಿಗಳು ದೇಶದ ಐಕ್ಯತೆಗೆ ಹಾಗೂ ಸ್ವಾತಂತ್ರಕ್ಕೆ ದಕ್ಕೆ ಬರುವುದರಲ್ಲಿ ಅನುಮಾನವಿಲ್ಲವೆಂದರು.

ಕೇಂದ್ರ ಸರ್ಕಾರದ ಇತ್ತೀಚಿನ ಆಯ್ಯವ್ಯಯದಲ್ಲಿ ಶ್ರೀಮಂತರ ಭೋಗ ವಸ್ತುಗಳಿಗೆ ತೆರಿಗೆಯನ್ನು ತಗ್ಗಿಸಿ ಮಧ್ಯಮ ಹಾಗೂ ಕೆಳವರ್ಗದ ಜನರು ಉಪಯೋಗಿಸುತ್ತಿರುವ ಸೋಪು, ರವೆ, ಮೈದಾ ಹಾಗೂ ಇತರೆ ವಸ್ತುಗಳ ಮೇಲೆ ತೆರಿಗೆ ಹಾಕಲಾಗಿದೆ. ಒಟ್ಟಾರೆ ಬಡ್ಜೆಟ್ ಮೇಲು ನೋಟಕ್ಕೆ ಚೆನ್ನಾಗಿದೆಯೆಂದು ಇದರ ಪರಿಣಾಮವಾಗಿ ಮುಂದಿನ ದಿನಗಳಲ್ಲಿ ಬೆಲೆಗಳು ಪುನಃ ಗಗನಕ್ಕೆ ಹೋಗುವುದರಲ್ಲಿ ಸಂಶಯವಿಲ್ಲವೆಂದರು.

ಇನ್ನೊಬ್ಬ ಮುಖ್ಯ ಅತಿಥಿಯಾಗಿ ಶ್ರೀಮತಿ ಕೆ.ಎಸ್. ಸರೋಜ ಸತ್ಯನಾರಾಯಣ ಇವರು ಮಾತನಾಡಿ ನಮ್ಮ ದೇಶದ ಅನೇಕ ಸಮಸ್ಯೆಗಳಾದ ಬಡತನ ನಿರುದ್ಯೋಗ ಹಾಗೂ ಮಹಿಳೆ ಶೋಷಣೆ ಇವುಗಳಿಗೆ ಮುಖ್ಯ ಕಾರಣ ಅನಕ್ಷರತೆ ಹಾಗೂ ವೈಜ್ಞಾನಿಕ ಮನೋಭಾವ ಇಲ್ಲದಿರುವುದು. ನಮ್ಮ ಸಂವಿಧಾನದಲ್ಲಿ 14 ವರ್ಷದವರಿಗೆಲ್ಲರಿಗೂ ಉಚಿತ ಶಿಕ್ಷಣ ಕೊಡಬೇಕೆಂದು ಹೇಳಿದರು ಸಹ ಅದೇ ಮಕ್ಕಳು ಇಂದು ಹೊಟ್ಟೆ ಪಾಡಿಗಾಗಿ ದುಡಿಯುತ್ತಿರುವುದಕ್ಕೆ ನಮ್ಮನ್ನು ಆಳುತ್ತಿರುವ ಜನನಾಯಕರು ಕಾರಣವೆಂದು ಟೀಕಿಸಿದರು.

ಶುಭಕೋರಿ ಕಾರ್ಮಿಕ ನಾಯಕ ಎಲ್. ರಂಗೇಗೌಡ, ವಿದ್ಯಾರ್ಥಿ ಮುಖಂಡ ಡಿ. ಪ್ರಕಾಶ್ ಮಾತನಾಡಿದರು. ಅಧ್ಯಕ್ಷತೆ ಎಸ್.ಬಿ. ಶಿವಶಂಕರ್‌ರವರು ವಹಿಸಿದ್ದರು. ಜಿ.ಎಸ್. ಸುಂದರ್‌ರವರ ಸ್ವಾಗತದೊಂದಿಗೆ ಪ್ರಾರಂಭವಾದ ಕಾರ್ಯಕ್ರಮ ಕೆ.ಎಸ್. ಕುಮಾರ್‌ರವರ ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು. ನೂತನ ಸಾಲಿಗೆ ಸಂಚಾಲಕರಾಗಿ ಎಂ. ನಾರಾಯಣ, ಸಹ ಸಂಚಾಲಕರಾಗಿ ಕೆ. ಮಂಜಣ್ಣ ಹಾಗೂ ಸಮಿತಿಯ ಸದಸ್ಯರಾಗಿ 7 ಜನರನ್ನು ಆಯ್ಕೆ ಮಾಡಲಾಯಿತು. ಕೊನೆಯಲ್ಲಿ ಪವಾಡ ರಹಸ್ಯ ಬಯಲು ಕಾರ್ಯಕ್ರಮವನ್ನು ನಿರ್ಮಲ ಬಸವರಾಜ್. ಕೆ. ಎಸ್. ಸರೋಜ ಸತ್ಯನಾರಾಯಣ ಹಾಗೂ ಡಿ. ಪ್ರಸಾದ್ ನಡೆಸಿಕೊಟ್ಟರು.

ಉ.ಕ. ಜಿಲ್ಲಾ ಎಸ್.ಎಫ್.ಐ. 6ನೇ ಸಮ್ಮೇಳನ

ಹೊನ್ನಾವರ : ಭಾರತ ವಿದ್ಯಾರ್ಥಿ ಫೆಡರೇಶನ್ ಉತ್ತರ ಕನ್ನಡ ಜಿಲ್ಲಾ 6 ನೇ ಸಮ್ಮೇಳನವು ಜನವರಿ 31 ರಂದು ಹೊನ್ನಾವರದಲ್ಲಿ ನಡೆಯಿತು. "ಮುನ್ನಡೆ" ದಿನಪತ್ರಿಕೆ ಸಂಪಾದಕರಾದ ಕಾಶ್ಯಪ್ ಪರ್ಣಕುಟಿ ಸಮ್ಮೇಳನವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಪ್ರೋ. ವೈ.ಎಸ್.ಅವಧಾನಿ, ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಶಾಂತಾರಾಮ ನಾಯಕ್, ಸಿ.ಐ.ಟಿ.ಯುನ ತಿಲಕಗೌಡ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಸಮ್ಮೇಳನಕ್ಕೆ ಶುಭಕೋರಿ ಎಮ್. ಎಸ್. ಧಾರೇಶ್ವರ ವಕೀಲರು ಕಾರ್ಮಿಕ ಸಮನ್ವಯ ಸಮಿತಿ ಜಿಲ್ಲಾ ಸಂಚಾಲಕ ಸಿ.ಆರ್. ಶಾನಭಾಗ ಮೊದಲಾದವರು ಮಾತನಾಡಿದರು. ಜಿಲ್ಲಾ ಅಧ್ಯಕ್ಷರಾದ ಸುಭಾಷ್ ಕೋಪ್ಪಿಕರರಿಂದ ಧ್ವಜಾರೋಹಣದೊಂದಿಗೆ ಸಮ್ಮೇಳನ ಪ್ರಾರಂಭಗೊಂಡಿತು. ಸತೀಶ್ ತಾಂಡೇಲ ಸ್ವಾಗತ ಸಮಿತಿ ಪರವಾಗಿ ಎಲ್ಲರನ್ನು ಸ್ವಾಗತಿಸಿದರು.

ಸಮ್ಮೇಳನದಲ್ಲಿ ಎಸ್.ಎಫ್.ಐ. ಉತ್ತರ ಕನ್ನಡ ಜಿಲ್ಲಾ ಸಮಿತಿಗೆ ನೂತನ ಅಧ್ಯಕ್ಷರಾಗಿ ಅಶೋಕ್ ಎಸ್.ಮೈಸೂರ ಆಯ್ಕೆಗೊಂಡರು. ಕಾರ್ಯದರ್ಶಿಯಾಗಿ ಸುರೇಶ್ ತಾಂಡೇಲ ಪುನರಾಯ್ಕೆಗೊಂಡರು. ಉಪಾಧ್ಯಕ್ಷರಾಗಿ ಮಂಗಳಾ ಸಿರ್ಸಿ, ಜಿ.ಬಿ. ನಾಯ್ಕ ಮತ್ತು ಸತೀಶ್ ತಾಂಡೇಲ ಸಹಕಾರ್ಯದರ್ಶಿಗಳಾಗಿ ಜುದೇರ ಜುಕಾಕೋ, ಯುವರಾಜ ಕಂಬಾಳಿಮಠ, ಆನಂದಶೆಟ್ಟಿ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ವಿಠಲ್ [illegible] ಭಂಡಾರಿ ಮತ್ತು 9 ಮಂದಿ ಸಮಿತಿ ಸದಸ್ಯರುಗಳಾಗಿ ಆಯ್ಕೆಗೊಂಡರು.

ಸಂಘದ ಚುನಾವಣೆಯನ್ನು ಒತ್ತಾಯಿಸಿ ರಾಜ್ಯ ಸರಕಾರಿ ನೌಕರರ ಧರಣಿ :

ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಚುನಾವಣೆಯನ್ನು ಕೂಡಲೇ ಸರಕಾರವೇ ನಡೆಸಬೇಕೆಂದು ಒತ್ತಾಯಿಸಿ ಮಾರ್ಚ್ 12 ರಂದು ರಾಜ್ಯ ಸರಕಾರಿ ನೌಕರರು "ಕ್ರಿಯಾ ಸಮಿತಿ" ಆಶ್ರಯದಲ್ಲಿ ವಿಧಾನ ಸೌಧದ ಮುಂದೆ ಕಬ್ಬನ್ ಪಾರ್ಕ್‌ನಲ್ಲಿ ಧರಣಿ ಸತ್ಯಾಗ್ರಹ ನಡೆಸಿದರು.

ಮಧ್ಯಾಹ್ನ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಎಲ್. ದೊರೆಸ್ವಾಮಿ ಕೆ. ರಾಮಯ್ಯ ಹೆಗ್ಡೆ, ಎಸ್. ರೇಣುಕಾರಾಧ್ಯ, ರೇವಣ್ಣ ಸಿದ್ದಯ್ಯ ಹೆಚ್.ಎಸ್. ಕೆಂಪೇಗೌಡ, ಎಂ.ಎಲ್. ಸೆಬಾಸ್ಟಿಯನ್, ಸಿ.ಕೆ. ರವಿಕುಮಾರ್, ರಂಗೇಗೌಡ, ನರಸೇಗೌಡ, ಮೊದಲಾದವರು ದುರಾಡಳಿತವನ್ನು ಖಂಡಿಸಿದರಲ್ಲದೆ, ಸಂಘದ ಚುನಾವಣೆಯನ್ನು ಪ್ರಜಾಸತ್ತಾತ್ಮಕವಾಗಿ ಸರಕಾರವೇ ನಡೆಸಬೇಕೆಂದು ಒತ್ತಾಯಿಸಿದರು.

ರಕ್ಕಸರಿಗೆ ಮತ್ತೆ ಮಣೆ ಹಾಕುತ್ತಿರುವ ಲ್ಯಾಟ್ವಿಯಾ

ಶರತ್‌ಚಂದ್ರ

ಸೋವಿಯೆತ್ ಒಕ್ಕೂಟದಿಂದ ಗಣರಾಜ್ಯಗಳಲ್ಲಿ ಒಂದಾಗಿದ್ದ ಲ್ಯಾಟಿವಿಯಾ ಬಹುಶಃ ಜಗತ್ತಿನಲ್ಲೇ ಕುಖ್ಯಾತ ನಾಜಿ ಗುಪ್ತಚರ ಅಧಿಕಾರಿಗಳಿಗೆ ಸ್ಮಾರಕಗಳನ್ನು ಕಟ್ಟುವ ಏಕಮಾತ್ರ ದೇಶ. ಇಂತಹ 19 ಸ್ಮಾರಕಗಳು ಲ್ಯಾಟಿವಿಯಾದಲ್ಲಿವೆ. ಜುಲೈ 1941 ರಲ್ಲಿ ಜರ್ಮನ್ ಆಕ್ರಮಣಕ್ಕೊಳಗಾದಾಗ ನಾಜಿಗಳೊಂದಿಗೆ ಶಾಮೀಲಾಗಿ ಜ್ಯೂಗಳನ್ನು ಮತ್ತು ಭೂಗತರಾಗಿ ಲ್ಯಾಟಿವಿಯಾದ ವಿಮೋಚನೆಗಾಗಿ ಹೋರಾಡುತ್ತಿದ್ದ ಕಮ್ಯುನಿಸ್ಟರ ನರಮೇಧಕ್ಕೆ ಕಾರಣರಾದ ನಾಜಿ ಗುಪ್ತಚರ ವಿಭಾಗದ ಅಧಿಕಾರಿಗಳಿವರು. ಹಿಟ್ಲರ್‌ನ 'ಕಬ್ಬಿಣದ ಕ್ರಾಸ್' ಪದಕಗಳನ್ನು ಪಡೆದವರು ಈಗ ಈ ಪದಕಗಳನ್ನು ಹೆಮ್ಮೆಯಿಂದ ಧರಿಸಿಕೊಂಡು ಈ ಮಾಜಿ ನಾಜಿಗಳು ಓಡಾಡುತ್ತಿದ್ದಾರೆ. ಲ್ಯಾಟಿವಿಯಾದ ಸೈನ್ಯದಲ್ಲಿರುವ ನೂರಾರು ಮಾಜಿ ನಾಜಿಗಳು ಕ್ಲಬ್‌ಗಳನ್ನು ಕಟ್ಟಿಕೊಂಡು ಬಹಿರಂಗವಾಗಿ ನಾಜಿವಾದವನ್ನು ಕೊಂಡಾಡಲಾರಂಭಿಸಿದ್ದಾರೆ. ಜರ್ಮನಿಯಿಂದ ತಮಗೆ ಪೆನ್‌ಶನ್ ಸಿಗಬೇಕೆಂದು ಪ್ರಯತ್ನ ಪಡುತ್ತಿದ್ದಾರೆ - ಹಿಟ್ಲರನಿಗೆ ಮಾಡಿದ ಸೇವೆಗೆ! ಈ ನಾಜಿಗಳ ಪೈಶಾಚಿಕ ಮುಖ ಗೊತ್ತಿದ್ದವರಿಗೆ ಇದು ತೀವ್ರ ಆತಂಕದ ವಿಷಯವಾಗಿದೆ.

ಸೋವಿಯೆತ್ ಒಕ್ಕೂಟದಿಂದ ಪ್ರತ್ಯೇಕವಾದ ಲ್ಯಾಟಿವಿಯಾ ರಾಜಕೀಯ ಬಲಪಂಥದತ್ತ ತಿರುಗಿದೆ. ಇತರ ಹಲವು ಮಾಜಿ ಸಮಾಜವಾದಿ ದೇಶಗಳಂತೆ ಜನಾಂಗೀಯ ಪ್ರತ್ಯೇಕತಾವಾದ ತೀವ್ರ ಸಮಸ್ಯೆಯಾಗಿದೆ ಇಂದಿನ ಲ್ಯಾಟಿವಿಯಾದ ಶೇಕಡಾ 55 ರಷ್ಟು ಜನ ಮೂಲ ಲ್ಯಾಟಿವಿಯಾದ ನಿವಾಸಿಗಳಾದರೆ, ಇತರ ಶೇಕಡಾ 45 ಜನ ಸೋವಿಯೆತ್ ಒಕ್ಕೂಟದ ಇತರ ಗಣರಾಜ್ಯಗಳಿಂದ ಬಂದು ನೆಲೆಸಿದವರು. 'ಲ್ಯಾಟಿವಿಯಾ ಲ್ಯಾಟಿವಿಯನ್ನರಿಗಾಗಿ ಮಾತ್ರ' ಎಂಬ ಕೂಗು ಎದ್ದಿದೆ. ಲ್ಯಾಟಿವಿಯಾದ 2 ನೇ ಮಹಾಯುದ್ಧನಂತರ ಕೈಗಾರಿಕಾ ಬೆಳವಣಿಗೆಯಲ್ಲಿ ಬೆವರು ಸುರಿಸಿದ ಇತರ ಜನಾಂಗೀಯ ಜನರು ಎರಡನೇ ದರ್ಜೆಯ ಪ್ರಜೆ ಆಗುವ ಭಯ ತೀವ್ರವಾಗಿದೆ. ಇನ್ನೂವರೆಗೆ ಯಾವುದೇ ಕಾನೂನು ಪಾಸಾಗದಿದ್ದರೂ, ಪಾರ್ಲಿಮೆಂಟು 1940 ರ ನಂತರ ಲ್ಯಾಟಿವಿಯಾದಲ್ಲಿ ನೆಲೆಸಿದವರಿಗೆ ಮತ್ತು ಅವರ ವಂಶಜರರಿಗೆ ನಾಗರಿಕ ಹಕ್ಕುಗಳ ಮೇಲೆ ಯಾವ ರೀತಿಯ ನಿರ್ಬಂಧಗಳನ್ನು ಹೊರಡಬೇಕೆಂದು ಹಲವು ಬಾರಿ ಚರ್ಚಿಸಿದೆ.

ಈ ಸಂದರ್ಭದಲ್ಲಿ ನಾಜಿಗಳ, ಮೇಲೆ ಹೇಳಿದ ಚಟುವಟಿಕೆಗಳು ಸ್ವಾಭಾವಿಕವಾಗಿಯೇ ಜ್ಯೂಗಳು ಮತ್ತು ಇತರ ಜನಾಂಗೀಯ ಜನರಿಗೆ ಭಯ, ಆತಂಕ ಹುಟ್ಟಿಸಿದೆ. ಜ್ಯೂಗಳು ಇಸ್ರೇಲ್‌ಗೆ ಮತ್ತು ಇತರ ಗಣರಾಜ್ಯಗಳಿಗೆ ವಲಸೆ ಹೋಗಲಾರಂಭಿಸಿದ್ದಾರೆ. 1988 ರಲ್ಲಿ 23 ಸಾವಿರ ಇದ್ದ ಜ್ಯೂಗಳ ಸಂಖ್ಯೆ ಈಗ 8 ಸಾವಿರಕ್ಕಿಳಿದಿದೆ.

ಇತ್ತೀಚೆಗೆ 85 ಸಾವಿರ ಜ್ಯೂಗಳ ನರಮೇಧದ 50 ನೇ ವಾರ್ಷಿಕದ ದಿನ ಈ ಬಗ್ಗೆ ಪಶ್ಚಾತಾಪ, ದುಃಖದ ಬದಲು ಅದಕ್ಕೆ ಜ್ಯೂಗಳೇ ಕಾರಣ ಎಂಬಂತಹ ಮನೋಭಾವ 'ಸರ್ಕಾರಿ, ಆಳುವ ವಲಯಗಳಲ್ಲಿ ಕಂಡುಬಂತು. ಇಂತಹ ಸನ್ನಿವೇಶವೇ ಮಾಜಿ ನಾಜಿ ಅಧಿಕಾರಿಗಳಿಗೆ ಬಹಿರಂಗವಾಗಿ ತಾವು ಜರ್ಮನ್ನರ . ಸೇವೆ ಮಾಡಿದ್ದೇವೆ ಎಂದು ಕೊಚ್ಚಿಕೊಳ್ಳಲು ಧೈರ್ಯ ಕೊಟ್ಟಿದ್ದು. ಒಬ್ಬ ಮಾಜಿ ನಾಜಿ ಅಧಿಕಾರಿ ಆರ್ನಾಲ್ಡ್ ಮೆಸ್ ಝಿಲೀನ್ಸ್ ತಾನು ಹೇಗೆ ಜ್ಯೂಗಳನ್ನು, ಕಮ್ಯುನಿಸ್ಟರನ್ನು ಬೇಟೆಯಾಡಿ ಹಿಂದೆ ಎಂದು ಕೊಚ್ಚಿಕೊಳ್ಳುತ್ತಾನೆ. ಜ್ಯೂ ಮಕ್ಕಳ ಕೊಲೆಯಿಂದ ಹಿಗ್ಗುವ ಈ ಪಾತಕಿ ತಾನು ಹೇಗೆ ಜ್ಯೂ ಮಕ್ಕಳನ್ನು ಕೊಲ್ಲುತ್ತಿದೆ ಎಂದು ವಿವರವಾಗಿ ಹೇಳುತ್ತಾನೆ. ಜನ ಕೇಳುತ್ತಾರೆ.

ಸಶಸ್ತ್ರ ತರಬೇತಿ ಕ್ಯಾಂಪ್‌ಗಳನ್ನು ನಾಜಿಗಳು ಸಂಘಟಿಸಲು ಆರಂಭಿಸಿದ್ದಾರೆ..

ನಾಜಿಗಳು ಮಾತ್ರವಲ್ಲ, 15 ಸಾವಿರ ಸಶಸ್ತ್ರ ಪಡೆಗಳಿರುವ ಐಝುಸ್‌ಗಿಂತ 'ಲ್ಯಾಟಿವಿಯಾ ಲ್ಯಾಟಿವಿಯನ್ನರಿಗಾಗಿ' ಎಂಬ ಘೋಷಣೆ ಯೊಂದಿಗೆ ಸಶಸ್ತ್ರ ಹೋರಾಟಕ್ಕೆ ಸಿದ್ಧತೆ ನಡೆಸುತ್ತಿದೆಯೆಂತೆ. ಇದು ಸಮಾಜವಾದವನ್ನು ತಿರಸ್ಕರಿಸಿ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಹೆಸರಲ್ಲಿ ಬದಲಾವಣೆ ಕಂಡು ಲ್ಯಾಟಿವಿಯಾ ಹೋಗುತ್ತಿರುವ ದಾರಿ.

ರಾಜಕೀಯ ಭ್ರಷ್ಟಾಚಾರದಿಂದ ಕುಸಿಯುತ್ತಿರುವ ಇಟಲಿ

800 ರಾಜಕಾರಣಿಗಳು, ಉನ್ನತಾಧಿಕಾರಿಗಳು ಕೈಗಾರಿಕೋದ್ಯಮಿಗಳ ಮೇಲೆ ಭ್ರಷ್ಟಾಚಾರ ಆಪಾದನೆ ಬಗ್ಗೆ ವಿಚಾರಣೆ ನಡೆಸುವ ನೋಟೀಸ್ ಕೊಡಲಾಗಿದೆ. ಇದರಲ್ಲಿ ಸುಮಾರು 160 ಜನ ಪಾರ್ಲಿಮೆಂಟು ಸದಸ್ಯರು. ಅಲ್ಲದೆ 20 ನಗರಗಳ ಮುನಿಸಿಪಾಲಿಟಿಗಳ ಸದಸ್ಯರು, ಈ ವಿಚಾರಣೆಗೆ ಒಳಪಟ್ಟಿದ್ದು ಸ್ಥಳೀಯ ಸರ್ಕಾರದ ಕೆಲಸ ಕಾರ್ಯಗಳು ಸ್ಥಗಿತಗೊಂಡಿವೆ.

ಸರ್ಕಾರದ ಸಾರ್ವಜನಿಕ ಕಾಮಗಾರಿಗಳಿಗೆ ಕಂಟ್ರಾಕ್ಟ್ ನೀಡಲು ಶೇಕಡಾ 10 ರಿಂದ 20 ರಷ್ಟು ಲಾಭ ಸರ್ವೇಸಾಮಾನ್ಯವಾಗಿಬಿಟ್ಟಿದೆ. ಕಳೆದ 12 ವರ್ಷಗಳಲ್ಲಿ 10 ರಿಂದ 20 ಶತಕೋಟಿ ಡಾಲರುಗಳಷ್ಟು ಸರ್ಕಾರಿ ಹಣ ರಾಜಕೀಯ ಭ್ರಷ್ಟಾಚಾರದಿಂದ ವ್ಯಕ್ತಿಗಳಿಗೆ ಸೋರಿಹೋಗಿದೆ.

ಕಮ್ಯುನಿಸ್ಟ್ ಪಕ್ಷ ಬಿಟ್ಟರೆ ಇತರ ಹೆಚ್ಚಿನ ಪಕ್ಷಗಳ ನಾಯಕರು ರಾಜಕೀಯ ಭ್ರಷ್ಟಾಚಾರದ ಆಪಾದನೆಗೆ ತುತ್ತಾಗಿದ್ದಾರೆ. ಸೋಶಲಿಸ್ಟ್ ಪಕ್ಷ ಇದರಲ್ಲಿ ಪ್ರಮುಖವಾದದ್ದು. ಹಲವು ವರ್ಷಗಳಲ್ಲಿ ಪ್ರಧಾನಿಯಾಗಿದ್ದ, ಸೋಶಲಿಸ್ಟ್ ನಾಯಕ ಬೆಟಿನೊ ಕ್ರಾಕ್ಸಿ ಆಪಾದನೆಗೆ ಗುರಿಯಾಗಿ ರಾಜಿನಾಮೆ ಕೊಡಬೇಕಾಗಿ ಬಂದಿದೆ. ಹಲವಾರು ಸೋಶಲಿಸ್ಟ್ ಪಕ್ಷದ ನಾಯಕರು ರಾಜಕೀಯ ಭ್ರಷ್ಟಾಚಾರದ ಹಣವನ್ನು ಪಕ್ಷ ನಿಧಿಗೆ ಸೇರಿಸಿದ ತೀವ್ರ ಆಪಾದನೆಗಳಿವೆ. ಇನ್ನೂ ಹಲವಾರು ಗಣ್ಯವ್ಯಕ್ತಿಗಳು ತಟ್ಟೆಗೆ ಸೇರುತ್ತಿದ್ದಂತೆ, ಇತರ ಹಲವಾರು ಸ್ವಯಂಪ್ರೇರಿತರಾಗಿ ತಮ್ಮ ಅಪರಾಧವನ್ನು ಒಪ್ಪಿಕೊಂಡು ಪತ್ರಬರೆಯುತ್ತಿದ್ದಾರೆ ಮ್ಯಾಜಿಸ್ಟ್ರೇಟ್‌ಗೆ. ಇಂತಹ ಗಣ್ಯವ್ಯಕ್ತಿಗಳ ಸಂಖ್ಯೆ ಒಂದು ಲಕ್ಷ ಮುಟ್ಟಬಹುದಂತೆ.

ಇಂತಹ ಭಾರಿ ರಾಜಕೀಯ ಭ್ರಷ್ಟಾಚಾರದಿಂದ ಬೇಸತ್ತು ಇಟಲಿಯ ಜನ ರೊಚ್ಚಿಗೆದ್ದಿದ್ದಾರೆ. ಪ್ರತಿಭಟನಾ ಮೆರವಣಿಗೆಗಳು ನಡೆದಿವೆ. ಇಟಲಿಯ ರಾಜಕೀಯ ಸ್ಥಿರತೆ, ಐಕ್ಯತೆ, ಸಮಗ್ರತೆ ಬಗ್ಗೆ ಜನ ಸಂಶಯಪಡುವಂತಾಗಿದೆ. ಇದು ಇಟಲಿಯನ್ನು ಪೂರ್ಣವಾಗಿ ನಡುಗಿಸಿದೆ.

ಫೆ. 20 : ಕೃಷಿಕೂಲಿಕಾರರ ರ್‍ಯಾಲಿ

ದಾಂಗುಡಿಯಿಟ್ಟ ಕೃಷಿ ಕೂಲಿಕಾರರ ಸಂಘ

ಫೆ. 20, ಕರ್ನಾಟಕ ಪ್ರಾಂತ ಕೂಲಿಕಾರರ ಸಂಘ ದಾಂಗುಡಿಯಿಟ್ಟ ದಿನ. ಕೂಲಿಕಾರರ ಸಂಘದ ಬಿಜಾಪುರದಲ್ಲಿ ಮೊದಲ ಸಮ್ಮೇಳನವಾದಾಗ ಮೊಳಕೆಯೊಡೆದು ಬೆಳೆಯುತ್ತಾ ಈಗ ಶೀಘ್ರವಾಗಿ ಬೆಳೆಯುವ ಲಕ್ಷಣವನ್ನು ತೋರಿದ ಗುರುತು ಫೆ. 20 ರಂದು ರಾಜ್ಯ ಮಟ್ಟದ ಕೃಷಿ ಕೂಲಿಕಾರರ ರ್‍ಯಾಲಿ.



ರಾಜ್ಯದ ಹಲವು ಜಿಲ್ಲೆಗಳಿಂದ ಬಂದ ಕೃಷಿ ಕೂಲಿಕಾರರು. ಶಿವರಾತ್ರಿ ಹಬ್ಬ ಸಂಭ್ರಮಗಳನ್ನು ಮೀರಿ, ಸುಗ್ಗಿಯ ಚುರುಕಿನ ಕೆಲಸದ ಸಮಯದ ಸಂಪಾದನೆಯನ್ನು ಕೈಬಿಟ್ಟು, ರೇಲುವೆ ಅಧಿಕಾರಿಗಳ ಪೀಡನೆಗೊಳಗಾಗಿ ಬೆಂಗಳೂರಿಗೆ ಬಂದರು. ನೂರಾರು ಸಂಖ್ಯೆಯಲ್ಲಿ ನೆರೆದರು. ಗುಲ್ಬರ್ಗದ ಗಂಗೂಬಾಯಿಯವರ ನೇತೃತ್ವದಲ್ಲಿ ಮಹಿಳೆಯರು, ಕೆಲವರು ದೇವದಾಸಿಯರು ಕೂಡ, ಬಿಜಾಪುರ ಕೂಲಿಕಾರರು, ರಾಯಚೂರು ಜಿಲ್ಲೆಯ ಒಣಬೇಸಾಯ ಪ್ರದೇಶದ ಭೂಮಿ ಆಕ್ರಮಣ ಮಾಡಿದ ಕೂಲಿಕಾರರು, ನೀರಾವರಿ ಭತ್ತ ಗದ್ದೆಗಳಲ್ಲಿ ಕೆಲಸಮಾಡುವ ಕೂಲಿಕಾರರು, ಗಂಗಾವತಿಯಲ್ಲಿ ಸರ್ಕಾರ ನೀಡಿದ ಭೂಮಿಯ ಒಡೆತನವನ್ನು ಪಡೆಯುವುದಕ್ಕಾಗಿ ಭೂಮಾಲಕರೊಡನೆ ತೀವ್ರ ಸಂಘರ್ಷದಲ್ಲಿರುವ ಕೂಲಿಕಾರರು ಸೌಂದತ್ತಿಯಲ್ಲಿ ಭೂಮಿ ವಸತಿಗಳಿಗಾಗಿ ಹೋರಾಟ ನಡೆಯುತ್ತಿರುವ ಕೂಲಿಕಾರರು ಎಲ್ಲರೂ ಬಂದರು.

ಐ.ಎಂ.ಎಫ್.ನ ಒತ್ತಡಕ್ಕೊಳಗಾಗಿ ನರಸಿಂಹರಾವ್ ಸರ್ಕಾರ ಕೂಲಿಕಾರರ ಬದುಕನ್ನು ಹಾಳುಗೆಡವುದನ್ನು ವಿರೋಧಿಸಿ ಮೆರವಣಿಗೆ ನಡೆಸಿದರು. ಆಹಾರ ಮತ್ತು ನಾಗರಿಕ ಸರಬರಾಜು 'ನಿರ್ದೇಶನಾಲಯದ' ಮುಂದೆ ಧರಣಿ ಸತ್ಯಾಗ್ರಹ ಮಾಡಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ನಾಶ ಮಾಡುತ್ತಿರುವುದರ ವಿರುದ್ಧ ಪ್ರತಿಭಟಿಸಿದರು. ರಾಜ್ಯ ಸರ್ಕಾರ ಹಸಿರು ಕಾರ್ಡ್‌ಗಳನ್ನು ಶ್ರೀಮಂತರಿಗೆ ಕೊಟ್ಟಿರುವುದನ್ನು ವಜಾ ಮಾಡಿ ಬಹಳ ಜನ ಬಡವರಿಗೆ ಕೊಡದಿರುವ ಅನ್ಯಾಯವನ್ನು ಸರಿಪಡಿಸಲು ಒತ್ತಾಯ ಮಾಡಿದರು.

ಮಂತ್ರಿ, ಅಧಿಕಾರಿಗಳಿಗೆ ಮನವಿ

ಭೂಮಿಯ ಪ್ರಶ್ನೆಯ ಬಗ್ಗೆ ರಾಜ್ಯ ಕಂದಾಯ ಸಚಿವ ರಾಜಶೇಖರ ಮೂರ್ತಿಯವರನ್ನು 10 ಜನ ಕೂಲಿಕಾರರ ನಿಯೋಗ ಕಾಂ. ಭೀಮಶೀ ಕಲಾದಗಿ ಕಾಂ. ಜಿ.ಎನ್. ನಾಗರಾಜ್, ಕಾಂ.ಪಿ. ಜಗನ್ನಾಥ್, ಕಾಂ. ಎಲ್. ಎಸ್. ನಾಯಕ್ ರವರ ನೇತೃತ್ವದಲ್ಲಿ ಭೇಟಿ ಮಾಡಿದರು. ಸಚಿವರು ಬೇಡಿಕೆಗಳ ಬಗ್ಗೆ ವಿವರವಾಗಿ ಚರ್ಚಿಸಲು, ಅಕ್ರಮ ಭೂಮಿ ಸಕ್ರಮಗೊಳಿಸುವುದನ್ನು ತ್ವರಿತಗೊಳಿಸಲು, ಭೂ ಸುಧಾರಣೆಯ ಕಾನೂನಿಗೆ ತಿದ್ದುಪಡಿ ಬಗ್ಗೆ ಚರ್ಚಿಸಲು ಒಪ್ಪಿದರು.

ಕಾರ್ಮಿಕ ಸಚಿವರಿಗೆ ಕನಿಷ್ಠ ಕೂಲಿ ಬಗ್ಗೆ ಮನವಿ ಸಲ್ಲಿಸಲಾಯಿತು. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ನಿರ್ದೇಶಕರೊಂದಿಗೆ ದೀರ್ಘ ಮಾತುಕತೆ ನಡೆಸಲಾಯಿತು.

ಕಾಂ. ರಾಮಚಂದ್ರರಾವ್, ಸೂರಿಯವರ ಭಾಷಣ

ಧರಣಿ ಸತ್ಯಾಗ್ರಹ ನಡೆಸುತ್ತಿದ್ದ ಕೂಲಿಕಾರರನ್ನುದ್ದೇಶಿ ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಕಾಂ. ಪಿ. ರಾಮಚಂದ್ರರಾವ್, ಸಿ.ಐ.ಟಿ.ಯು ಅಧ್ಯಕ್ಷರಾದ ಕಾಂ. ಸೂರ್ಯನಾರಾಯಣ ರಾವ್ ಮಾತನಾಡಿ ಕೃಷಿ ಕೂಲಿಕಾರರ ಸಂಘಟನೆ ಇಂದಿನ ತುರ್ತು ಅಗತ್ಯ. ಕಾರ್ಮಿಕರಿಗೆ ಹಳ್ಳಿಯಲ್ಲಿರುವ ನೆಚ್ಚಿನ ಗೆಳೆಯ, ಹಳ್ಳಿಯ ರೈತರ ಹೋರಾಟಗಳನ್ನು ತೀವ್ರಗೊಳಿಸಲು ಅವರನ್ನು ಸಂಘಟಿಸಲು ದೃಢವಾದ ಸಹಾಯಕರಾದ ಕೃಷಿಕೂಲಿಕಾರರನ್ನು ಸಂಘಟಿಸಲು ಕರೆ ನೀಡಿದರು. ಅವರನ್ನುದ್ದೇಶಿಸಿ ಡಿ.ವೈ.ಎಫ್.ಐ.ನ ಕಾಂ. ಗುರುಶಾಂತ್, ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಚಂದ್ರಶೇಖರ ಬಾಳೆ, ಕಾರ್ಯದರ್ಶಿ ಕಾಂ ಲಕ್ಷ್ಮಣ ಮಾತನಾಡಿದರು. ಕಾಂ. ಜಗನ್ನಾಥ್ ಸಭೆಯನ್ನು ನಿರ್ವಹಿಸಿದರು ಕಾಂ. ಭೀಮಸಿ ಕಲಾದಗಿ ಅಧ್ಯಕ್ಷತೆವಹಿಸಿದ್ದರು.

ಮುನ್ನೂರು ಗ್ರಾಮದ ಡಿ.ವೈ.ಎಫ್.ಐ ಘಟಕ ಸಮ್ಮೇಳನ

ಮಂಗಳೂರು : ಮುನ್ನೂರು ಗ್ರಾಮದ ಡಿ.ವೈ.ಎಫ್.ಐ ಘಟಕ ಸಮ್ಮೇಳನವು ಇತ್ತೀಚೆಗೆ ಕುತ್ತಾರಿನ ಯುವಕ ಮಂಡಲದಲ್ಲಿ ಡಿ.ವೈ.ಎಫ್.ಐ. ಉಪಾಧ್ಯಕ್ಷರಾದ ಸುಧಾಕರ ರವರ ಅಧ್ಯಕ್ಷತೆಯಲ್ಲಿ ಜರಗಿತು. ಘಟಕದ ಕಾರ್ಯದರ್ಶಿಯಾದ ಕೆ. ಆರ್. ನಾಥ್ ಸಭಿಕರನ್ನು ಸ್ವಾಗತಿಸಿ ಗತ ವರ್ಷದ ವರದಿ ಮಂಡಿಸಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ ಸಾಕ್ಷರತಾ ನಿಯೋಜಕ ಗಂಗಾಧರ ಶೆಟ್ಟಿಯವರು ಯುವಜನರು ಸಂಘಟಿತರಾಗಿ ತಮ್ಮ ಹಕ್ಕು ಬಾಧ್ಯತೆಗಳಿಗೆ ಹೋರಾಡಬೇಕು ಎಂದು ಕರೆ ಕೊಟ್ಟರು. ಸಿಪಿಐ(ಎಂ) ಉಳ್ಳಾಲ ವಲಯ ಸದಸ್ಯರಾದ ಕೆ. ಈಶ್ವರ್ ಕುತ್ತಾರ್‌ರವರು ಕೋಮುವಾದಿಗಳ ವಿರುದ್ಧ ಹೋರಾಡಿ ನಮ್ಮ ದೇಶದ ಸಂವಿಧಾನಾತ್ಮಕ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಬೇಕು ಎಂದು ಕರೆಕೊಟ್ಟರು. ಜಿಲ್ಲಾ ಡಿ.ವೈ.ಎಫ್.ಐ ಕಾರ್ಯದರ್ಶಿ ವಸಂತ ಆ ಚಾರಿ ಉಪಸ್ಥಿತರಿದ್ದು ಮಾರ್ಗದರ್ಶನ ನೀಡಿದರು.

ಸಭೆಯಲ್ಲಿ ಡಿ.ವೈ.ಎಫ್.ಐ ಉಳ್ಳಾಲ ವಲಯದ ಅಧ್ಯಕ್ಷರಾದ ಕೆ. ಕೃಷ್ಣಪ್ಪ ಸಾಲಿಯನ್ ವಲಯ ಸದಸ್ಯರಾದ ಅಜಿತ್‌ಕುಮಾರ್ ರಾಮಚಂದ್ರ, ಇವರುಗಳು ಸಭೆಯಲ್ಲಿ ಉಪಸ್ಥಿತರಿದ್ದರು. ಸಹ ಕಾರ್ಯದರ್ಶಿ ದೋಜ ಶೆಟ್ಟಿ ವಂದಿಸಿದರು. ಹೊಸ ಸಾಲಿನ ಅಧ್ಯಕ್ಷರಾಗಿ ಕೆ. ಐತಪ್ಪ ಉಪಾಧ್ಯಕ್ಷರಾಗಿ ಶರೇಂದ್ರ ಕುಡ್ಲಗಿ, ಕಾರ್ಯದರ್ಶಿಯಾಗಿ ಕೆ.ಆರ್. ನಾಥ್ ಸಹಕಾರ್ಯದರ್ಶಿ ದೋಜಶೆಟ್ಟಿ, ಮೋಹನ್ ಕೆ. ಕೋಶಾಧಿಕಾರಿಯಾಗಿ ಹರೀಶ್.ಕೆ, ರಘುಪತಿ, ಕುಮಾರಿ ಬೀನ ಕ್ರೀಡಾ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು.

STATEMENT ABOUT OWNERSHIP AND OTHER PARTICULARS ABOUT WEEKLY NEWSPAPER "AIKYARANGA" KANNADA WEEKLY

Form IV

See Rule 8

1. Place of Publication	: 12, 18th Cross, Thenappa Gardens, Sampangi Ram Nagar Bangalore - 27
2. Periodicity of Publication	: Weekly
3. Printers Name	: P.Ramachandra Rao
(Whether Citizen of India)	: Yes
(If Foreigner, State the Country of origin	
(Address)	: 12, 18th Cross, Thanappa Garndens, S.R. Nagar, Bangalore - 27
4. Publisher's Name	: P.Ramachandra Rao
(Whether Citizen of India)	: Yes
(If Foreigner, State the Country of origin	
(Address)	: 12, 18th Cross, Thanappa Garndens, S.R. Nagar, Bangalore - 27
5. Editor's Name	: P.Ramachandra Rao
(Whether Citizen of India)	: Yes
(If Foreigner, State the Country of origin	
(Address)	: 12, 18th Cross, Thanappa Garndens, S.R. Nagar, Bangalore - 27
6. Name and Address of Individuals Who own the Newspaper and Partner or Share holders more than one percent of the total Capital	: Karnataka State Committee Communist Party of India (Marxist) 12, 18th Cross, Thanappa Garden's Sampangiram Nagar BBANGALORE - 27

I, P.Ramachandra Rao, hereby declare that the particulars given below are true to the best of knowledge and belief.

Date : 14th March 1993

P.Ramachandra Rao

Signature :

KRNM/BGS-405 MAG(2) PRB DECR 319-78/79

ಕುಷ್ಟಗಿ ಸಾಮೂಹಿಕ ಅತ್ಯಾಚಾರ ಪ್ರಕರಣ
13 ರಂದು ರಾಯಚೂರು ಜಿಲ್ಲಾ ಬಂದ್

ಪುಟ 1ರಿಂದ

ಇಡ್ಲಿ ಅಂಗಡಿಯ ಬಳಿ ಬಂದರು. ಸೋತು ಸುಸ್ತಾಗಿ ಕುಳಿತುಕೊಳ್ಳಲು ಆಗದ ಶರಣವ್ವನನ್ನು ಅಲ್ಲಿಯೇ ಇದ್ದ ಅಂಗಡಿಯ ಕಟ್ಟೆಗೆ ಒರಗಿಸಿದರು. ಇಡ್ಲಿ ತಿನ್ನಿಸಲು ಪ್ರಯತ್ನಿಸಿದರು. ಆಕೆ ತಲೆಯಲ್ಲಾಡಿಸಿ ತಿನ್ನಲು ನಿರಾಕರಿಸಿದಳು. ಅಲ್ಲಿಂದ ಮುಂದೆ ಅವರೇ ಕೊಂಡೊಯ್ದರು. ಇದಕ್ಕೆ ಇಡ್ಲಿ ಮಾರಿದವ ಹಾಗೂ ಅಲ್ಲಿಯ ಕೆಲ ಅಂಗಡಿಗಳವರು ಸಾಕ್ಷಿಯಾಗಿದ್ದಾರೆ.

3. ಶರಣವ್ವನ ಸಾವಿನ ಬಗ್ಗೆ ವದಂತಿಗಳು ಹರಡಿಕೊಂಡಾಗ ದಿನಾಂಕ ಫೆ. 25 26ರ ಸಮಯದಲ್ಲಿ ಆ ಬಗ್ಗೆ ವಿಚಾರಿಸಿದವರಿಗೆ ತಾಯಿ ಕರಿಯವ್ವ ಮಾಟ ಮಾಡಿಸಿದ್ದಾರೆ, ಗಾಳಿ ಬಡಿದಿತ್ತು, ಒಮ್ಮೆ ಕ್ಷಯ ಇತ್ತು, ಮತ್ತೊಮ್ಮೆ ಕ್ಯಾನ್ಸರಿತ್ತು ಎಂದು ಒಬ್ಬೊಬ್ಬರಿಗೆ ಒಂದೊಂದು ಉತ್ತರ ಹೇಳಿದ್ದಾರೆ. ಕ್ಯಾನ್ಸರ್ ಚಿಕಿತ್ಸೆಗಾಗಿ ಡಾಕ್ಟರ್ ಬಳಿ ಒಯ್ದ ಬಗ್ಗೆ ಹಲವಾರು ಖಾಸಗಿ ಡಾಕ್ಟರ್‌ಗಳ ಡಾ. ಕಾಖಂಡಿಕಿ, ಡಾ. ತಾರಾಬಾಯಿ, ಡಾ. ಜಿತೂರಿ ಇತ್ಯಾದಿಯವರ ಹೆಸರು ಹೇಳಿದ್ದಾರೆ. ಕೆ.ಎಂ.ಸಿ. ಹೆಸರು ಹೇಳಿಲ್ಲ. ಸತ್ತಿದ್ದು ಈ ಡಾಕ್ಟರುಗಳ ಖಾಸಗಿ ನರ್ಸಿಂಗ್ ಹೋಂನಲ್ಲಿ ಎಂದೇ ತಿಳಿಸಿದ್ದಾಳೆ.

ಕುಷ್ಟಗಿಯ ಕುಪ್ರಸಿದ್ಧಗ್ಯಾಂಗ್

ಈ ಕೃತ್ಯವನ್ನು ನಡೆಸಿದವರು ಕುಷ್ಟಗಿಯ ಕುಪ್ರಸಿದ್ಧವಾದ ಗ್ಯಾಂಗ್- ತಹಸೀಲ್ದಾರ್, ಅಲ್ಲಿಯ ಜಿಲ್ಲಾ ಪರಿಷತ್‌ನ ಎ.ಇ.ಇ. ತಿಮ್ಮಪ್ಪ, ಅವರದೆ ಇಲಾಖೆಯ ಮತ್ತೊಬ್ಬ ಇಂಜಿನಿಯರ್ ನಾರಾಯಣ ನಾಯಕ್, ಹಾಗೂ ವಕೀಲ ಫಕೀರಪ್ಪ ಅಥವಾ ಚಳಗೇರಿ ವಕೀಲ.

ತಹಸೀಲ್ದಾರ್‌ರ ಅಥವಾ ತಿಮ್ಮಪ್ಪನ ಮನೆಯಲ್ಲಿ ಈ ಕೂಟ ಕುಡಿತ, ಕುಣಿತ ಹಾಗೂ ಮೋಜಿಗಾಗಿ ಸೇರುತ್ತಿತ್ತು. ರಾತ್ರಿಯಲ್ಲಾ ನಡೆಯುತ್ತಿದ್ದ ಈ ಕೂಟಗಳಲ್ಲಿ ತರುಣಿಯರೂ ಇರುತ್ತಿದ್ದರು ಎಂದು ಕುಷ್ಟಗಿಯ ಹಲವರು ಹೇಳುತ್ತಾರೆ.

ಈ ತಂಡದ ಚಟುವಟಿಕೆಗಳು ಹಲವಾರು ಬಾರಿ ಕುಷ್ಟಗಿಯ ಸಾರ್ವಜನಿಕರ ಗಮನಕ್ಕೆ ಬಂದಿವೆ. ಹಲವಾರು ಘಟನೆಗಳು ಜನಜನಿತವಾಗಿವೆ. ಈ ಪ್ರಕರಣಗಳಲ್ಲಿ ಎರಡು ಗಮನಾರ್ಹವಾದುದು. ಹುಬ್ಬಳ್ಳಿಯ ನರ್ತಕಿಯೊಬ್ಬಳನ್ನು ಕರೆಯಿಸಿ ಕುಷ್ಟಗಿಯಲ್ಲಿ ಪ್ರದರ್ಶನ ಏರ್ಪಡಿಸಿದ್ದು ಅದಕ್ಕಾಗಿ 100 ರಿಂದ 500 ರೂಗಳವರೆಗೆ ಟಿಕೆಟ್‌ಗಳನ್ನು ಮಾಡಿ ಈ ಕೂಟದ ಜನ ಬೇರೆ ಬೇರೆಯವರಿಗೆ ಎಪಿಎಂಸಿ ವರ್ತಕರಿಗೆ ಬಲವಂತವಾಗಿ ಕಟ್ಟಿದ್ದು ಒಂದು. ಈ ಪ್ರಕರಣದಲ್ಲಿ ಲಕ್ಷಾಂತರ ರೂ ಸಂಗ್ರಹವಾಗಿದೆ. ಆದರೆ ಈ ದುಬಾರಿ ಟಿಕೆಟ್‌ಗಳು ಯಾವ ಬೆನಿಫಿಟ್ ಫಂಡಿಗಾಗಿ? ಹುಬ್ಬಳ್ಳಿಯಲ್ಲಿ ಶಿವರಾಜ್‌ಪಾಟೀಲ್ ತಹಶೀಲ್ದಾರ್ ಇದ್ದಾಗಿನಿಂದ ಪರಿಚಯವಾಗಿದ್ದ ಈ ನರ್ತಕಿಯ ಬೆನಿಫಿಟ್‌ಗಾಗಿ.

ಇನ್ನು ಎರಡನೆಯದು ಇವರುಗಳು ಒಂದು ದಿನ ಕುಡಿದು ಕುಣಿಯುತ್ತಿದ್ದಾಗ ಉತ್ಸಾಹ ಹೆಚ್ಚಾಗಿ ಮನೆಯ ಮುಂದೆ ಬಂದು ಬಟ್ಟೆಗಳನ್ನು ಕಿತ್ತು ಹಾಕಿ ಕುಣಿಯಲಾರಂಭಿಸಿದರೆಂದೂ ಇದನ್ನು ನೋಡಿದ ಪೋಲೀಸರು ತಮ್ಮ ತಾಲ್ಲೂಕು ಮ್ಯಾಜಿಸ್ಟ್ರೇಟ್‌ರವರ ಮಾನ ಬಹಿರಂಗವಾಗಿ ಹರಾಜಾಗುವ ಸ್ಥಿತಿಯನ್ನು ಮುಟ್ಟಿತಲ್ಲಾ ಎಂದು ಮರುಗಿ ಒಳಗೆ ಕಳುಹಿಸಲು ಪ್ರಯತ್ನಿಸಿದರೆಂದೂ ಆಗ ಮೊದಲೇ ಅಧಿಕಾರ ಮದದ ಮತ್ತೇರಿದ ಇವರಿಗೆ ಇನ್ನಿಲ್ಲದಷ್ಟು ರೋಷ ಉಕ್ಕಿ ಪೋಲೀಸರನ್ನೇ ಥಳಿಸಿದರೆಂದೂ ವರದಿಯಾಗಿರುವ ಪ್ರಕರಣ.

ಇಂತಹ ಅಸಹ್ಯ ಹುಟ್ಟಿಸುವ ಪ್ರಕರಣಗಳು ಏನನ್ನು ತೋರಿಸುತ್ತವೆ ? ಈ ಜನ ಯಾವುದಕ್ಕೂ ಹೇಸುವುದಿಲ್ಲ ಎನ್ನುವುದಲ್ಲವೇ?

ಇಷ್ಟೆಲ್ಲ ಇರುವಾಗಲೂ

ತಾಲ್ಲೂಕಿನ ಈ ಶಾಸಕರು ಅವರ ಹಿಂಬಾಲಕರು, ಆಪ್ತರು ಸೇರಿ ಇದನ್ನು ಹಿಂದುಳಿದ ಜಾತಿಗಳ- ಮುಂದುವರಿದ ಜಾತಿಗಳ ಪ್ರಶ್ನೆಯಾಗಿ ಪರಿವರ್ತಿಸಿ ಅಪರಾಧಿಗಳಿಗೆ ರಕ್ಷಣೆ ನೀಡಲು ಪ್ರಯತ್ನಿಸಿದ್ದಾರೆ. ಅವರ ಹಿಂಬಾಲಕರು ಸಲ್ಲಿಸಿದ ಒಂದು ಮನವಿಯಲ್ಲಿನ ವಾದಗಳೇ ಇದಕ್ಕೆ ಸಾಕ್ಷಿಯಾಗಿವೆ.

ಬೆದರಿಕೆಗಳು

ಈ ಶಾಸಕರ ಆಪ್ತ ಸಹಾಯಕನೆಂದೇ ಖ್ಯಾತನಾಗಿರುವ ಅಲ್ಲಿಯ ಕಂಟ್ರಾಕ್ಟರ್ ಒಬ್ಬ ತಿಮ್ಮಪ್ಪನ ಮನೆಯ ನೆರೆಹೊರೆಯಲ್ಲಿರುವವರಿಗೆಲ್ಲಾ ಸಾಕ್ಷಿ ನೀಡಬೇಡಿರೆಂದು ಬೆದರಿಕೆ ಹಾಕಿದ್ದಾನೆ. ಒಬ್ಬ ಲ್ಯಾಬ್ ಟೆಕ್ನಿಷಿಯನ್‌ರ ಲ್ಯಾಬರೇಟರಿಗೇ ಹೋಗಿ ಸ್ವತಃ ಬೆದರಿಕೆ ಹಾಕಿದ್ದಾನೆ. ಅವರು ರಕ್ಷಣೆ ಕೋರಿ ಪೋಲೀಸರಿಗೆ ಕಂಪ್ಲೇಂಟ್ ಇತ್ತಿದ್ದಾರೆ.

ಸೀಮೆಎಣ್ಣೆ ವ್ಯಾಪಾರಿಯಾದ ಸಿದ್ಧರಾಮಪ್ಪ ಎಂಬುವರು ಸಿ.ಓ.ಡಿ.ಗೆ ಸಾಕ್ಷಿ ನೀಡಿದರೆಂದು ರಾತ್ರಿ ಅವರ ಮನೆ ಬಳಿ ನುಗ್ಗಿ ಬೆದರಿಕೆ ಹಾಕಿದ್ದಾರೆ. ಅವರೂ ಪೋಲೀಸರಿಗೆ ಕಂಪ್ಲೇಂಟ್ ನೀಡಿದ್ದಾರೆ.

ಆರ್.ಕೆ. ದೇಸಾಯರ ಮೇಲೆ ಹಲ್ಲೆ

ಕುಷ್ಟಗಿಯಲ್ಲಿ ದಿನಾಂಕ 6 ರಂದು ಕುಷ್ಟಗಿ ಬಂದ್ ಆಚರಿಸಿ ಸಿ.ಪಿ.ಐ(ಎಂ), ಜನತಾದಳ ನೇತೃತ್ವದಲ್ಲಿ ಮೆರವಣಿಗೆ ಮಾಡಿ ಪ್ರತಿಭಟನೆ ಸಲ್ಲಿಸಿ ಹಿಂದಿರುಗುತ್ತಿದ್ದಾಗ ಪೋಲೀಸರು ಪ್ರಚೋದನೆ ಇಲ್ಲದೆ ಹಾದಿಯಲ್ಲಿ ಹೋಗುವ ಮುದುಕನೊಬ್ಬನನ್ನು ಜನರೆದುರಿಗೆ ಬಡಿದರು. ಅದರಿಂದ ರೊಚ್ಚಿಗೆದ್ದ ಜನರ ಮೇಲೆ ಲಾಠಿಚಾರ್ಜ್ ಮಾಡಿ ಗಾಳಿಯಲ್ಲಿ ಗುಂಡು ಹಾರಿಸಿದರು. ಇದೆಲ್ಲವೂ ನಡೆದು ಜನಗಳೆಲ್ಲಾ ಚದುರಿ ಬಹಳ ಹೊತ್ತಾದ ನಂತರ ಈ ಮೆರವಣಿಗೆಯನ್ನು ಸಂಘಟಿಸಿದ್ದ ಸಿ.ಪಿ.ಐ(ಎಂ) ನಾಯಕ ಆರ್.ಕೆ. ದೇಸಾಯಿ ಹಾಗೂ ಕಾರ್ಯಕರ್ತರಾದ ನಬಿಸಾಬ್, ಯಮನಪ್ಪ ಮತ್ತು ಜನತಾದಳ ತಾಲ್ಲೂಕು ಘಟಕದ ಅಧ್ಯಕ್ಷ ಶರಣಪ್ಪನವರನ್ನು ಅವರು ಕುಳಿತು ಮಾತನಾಡುತ್ತಿದ್ದ ಕಟ್ಟಡದೊಳಕ್ಕೆ ಡಿ.ಎ.ಆರ್. ಘಟಕದ ಪೋಲೀಸಿನವರು ನುಗ್ಗಿ ಹಿಡಿದುಕೊಂಡು ದಾರಿಯುಲ್ಲೆಲ್ಲಾ ಬಡಿದುಕೊಂಡು ಹೋಗಿ ಠಾಣೆಯಲ್ಲಿ ಹಾಕಿದರು. ಇವರಲ್ಲಿ ಆರ್. ಕೆ. ದೇಸಾಯಿಯವರನ್ನು ಮುಖ್ಯ ಮಂತ್ರಿಗಳು ಬಂದಾಗ ಕಪ್ಪು ಬಾವುಟ ತೋರಿಸುತ್ತಿಯಾ ಎಂದು ಹಿಂದೆಂದೋ ಆದ ಪ್ರತಿಭಟನೆಗಳ ಹೆಸರೆಲ್ಲಾ ಎತ್ತಿ ಬಡಿದಿದ್ದಾರೆ. ಕೇಸು ದಾಖಲೆ ಮಾಡಿಸಿದ್ದಾರೆ.

ಸಿ.ಪಿ.ಎ(ಎಂ) ರಾಜ್ಯ ಸಮಿತಿ ಈ ಘಟನೆಗಳ ವರದಿಯನ್ನು ಪರಿಶೀಲಿಸಿ

1) ಸಿ.ಓ.ಡಿ. ತನಿಖೆ ಪಕ್ಷಪಾತದಿಂದ ಕೂಡಿದೆಯೆಂದೂ ಇಡೀ ಘಟನೆಯನ್ನು ಆಡಳಿತಾತ್ಮಕವಾಗಿ ಸಿ.ಬಿ.ಐ.ನ ತನಿಖೆಗೆ ಒಪ್ಪಿಸಬೇಕೆಂದೂ ಹಾಗೂ ಪ್ರತ್ಯೇಕವಾಗಿ ನ್ಯಾಯಾಂಗ ತನಿಖೆ ನಡೆಸಬೇಕೆಂದು

2) ತಹಸೀಲ್ದಾರ ಮತ್ತು ಅವರ ಗುಂಪು ನಡೆಸಿದ ಇತರ ಅವ್ಯವಹಾರಗಳ ಬಗ್ಗೆ ತನಿಖೆ ಮಾಡಬೇಕೆಂದೂ ಒತ್ತಾಯಿಸಿವೆ.

3) ಸ್ಥಳೀಯ ಸಿ.ಪಿ.ಐ(ಎಂ), ಜನತಾದಳ ಮುಖಂಡರ ಮೇಲೆ ಹಲ್ಲೆಮಾಡಿದ ಡಿ.ಎ.ಆರ್. ಘಟಕದ ಹಾಗೂ ಸ್ಥಳೀಯ ಪೋಲಿಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಕ್ರಮ ಜರುಗಿಸಬೇಕೆಂದು ಒತ್ತಾಯಿಸುತ್ತದೆ.

ಹೈ. ಕರ್ನಾಟಕ ಪ್ರದೇಶದಲ್ಲಿ ಇಂತಹ ಅನೇಕ ಅತ್ಯಾಚಾರ, ದೌರ್ಜನ್ಯಗಳ ಪ್ರಸಂಗವನ್ನು ತಪ್ಪಿಸಲು ಎಲ್ಲಾ ಪ್ರಗತಿಪರ ಶಕ್ತಿಗಳು ಸಮಾಜ ಸುಧಾರಣೆಯ ಆಂದೋಲನವನ್ನು ಹಮ್ಮಿಕೊಳ್ಳಬೇಕೆಂದು ರಾಜ್ಯ ಸಮಿತಿ ಕರೆ ನೀಡುತ್ತದೆ.

ಈ ಆಂದೋಲನಕ್ಕೆ ಸರ್ಕಾರವೂ ತನ್ನ ಮಾಧ್ಯಮಗಳು, ಇಲಾಖೆಗಳ ಮೂಲಕ ಚಾಲನೆ ನೀಡಬೇಕೆಂದು ಒತ್ತಾಯಿಸುತ್ತದೆ.

ವರದಿ :

-- ಜಿ.ಎನ್. ನಾಗರಾಜ್

ಪ್ರಜಾಸತ್ತೆಯ ಕೊಲೆ ಮಾಡಲು ಪ್ರಯತ್ನಿಸಿ

ಜಾಗತಿಕ ಅವಮಾನ ತಂದ ಧೂರ್ತರು

ಸಂಸತ್ತಿನಲ್ಲಿ ನಮ್ಮವರು - ವಿಶ್ವ

ತ್ರಿಪುರಾದಲ್ಲಿ ಕಾಂಗ್ರೆಸ್(ಐ) - ಟಿ.ಯು.ಜೆ.ಎಸ್. ಮೈತ್ರಿಕೂಟದ ದುಷ್ಕೃತ್ಯಗಳಿಂದಾಗಿ ವಿಧಾನಸಭೆ ಚುನಾವಣೆಗಳು ಮುಂದಕ್ಕೆ ಹೋಗಿದ್ದು, ರಾಜ್ಯ ಸರಕಾರ ಮತ್ತು ಕೇಂದ್ರ ಸಚಿವ ಸಂತೋಷ್‌ಮೋಹನ್ ದೇಬ್‌ರಿಗೆ ಚುನಾವಣಾ ಆಯೋಗ ಛೀಮಾರಿ ಹಾಕಿದ್ದು, ರಾಜ್ಯದಲ್ಲಿ ಅದೇ ದುಷ್ಟಕೂಟದ ಉಸ್ತುವಾರಿ ಸರಕಾರ ಮುಂದುವರಿದಿರುವುದು ಮೊದಲಾದ ವಿಷಯಗಳು ಸಂಸತ್ತಿನ ಬಜೆಟ್ ಅಧಿವೇಶನದ ಎರಡನೇ ವಾರದ ಕಲಾಪಗಳಲ್ಲಿ ಪ್ರಮುಖವಾಗಿ ಚರ್ಚೆಗೆ ಬಂದವು. ತ್ರಿಪುರಾದಲ್ಲಿ ಪ್ರಜಾಪ್ರಭುತ್ವದ ಮರುಸ್ಥಾಪನೆಯ ಸಂಘರ್ಷದಲ್ಲಿ ಸಂಸದೀಯ ವೇದಿಕೆಯನ್ನು ಪರಿಣಾಮಕಾರಿಯಾಗಿ ಸಿಪಿಐ(ಎಂ) ಬಳಸಿಕೊಂಡಿತು.

ರಾಜ್ಯದಲ್ಲಿ ಏಪ್ರಿಲ್ ಮೂರರಂದು ಚುನಾವಣೆಗಳು ಮುಕ್ತ ಹಾಗೂ ನ್ಯಾಯ ಸಮ್ಮತವಾಗಿ ನಡೆಯುವಂತಾಗಲು ಅಲ್ಲಿ ರಾಷ್ಟ್ರಪತಿ ಆಡಳಿತವನ್ನು ಹೊರಬೇಕೆಂದು ಸಿಪಿಐ(ಎಂ) ಸದಸ್ಯರು ಬಲವಾಗಿ ಪ್ರತಿಪಾದಿಸಿದ್ದರಿಂದ ಗೃಹಸಚಿವ ಎಸ್.ಬಿ. ಚೌವಾಣ್ ಲೋಕಸಭೆಯಲ್ಲಿ ಹೇಳಿಕೆಯನ್ನು ನೀಡುವ ಅನಿವಾರ್ಯತೆಗೆ ಒಳಗಾದರು. ರಾಜ್ಯ ಸರಕಾರದ ಅವಧಿ ಮುಗಿದ ನಂತರ ಉಸ್ತುವಾರಿ ಸರಕಾರದ ಆಡಳಿತಕ್ಕೆ ಬರುವವರೆಗಿನ ಘಟನಾವಳಿಗಳ ಬಗ್ಗೆ ಸಚಿವರು ತಮ್ಮ ಹೇಳಿಕೆಯಲ್ಲಿ ಪ್ರಸ್ತಾಪಿಸಿದರೇ ಹೊರತು ರಾಷ್ಟ್ರಪತಿ ಆಡಳಿತ ಸಂಬಂಧಿಸಿದಂತೆ ಶಬ್ದವೂ ಇರಲಿಲ್ಲ.

ಇದನ್ನು ಸಿಪಿಐ(ಎಂ) ಸದಸ್ಯರು ಆಕ್ಷೇಪಿಸಿದರು. ಈ ಹೇಳಿಕೆ, 'ಸಂಸತ್ತಿಗೆ ಅವಮಾನಕರ' ಎಂದು ನಾಯಕ ಸೋಮ್‌ನಾಥ ಚಟರ್ಜಿ ಹೇಳಿದರು.

ಚುನಾವಣಾ ಆಯೋಗ ತ್ರಿಪುರಾ ಸರಕಾರಕ್ಕೆ ಛೀಮಾರಿ ಹಾಕಿರುವುದನ್ನು ಚಟರ್ಜಿ ಸದನದ ಗಮನಕ್ಕೆ ತಂದರು. ಮುಖ್ಯಮಂತ್ರಿ ಮತ್ತು ಇತರ ಸಚಿವರು ಕೂಡ ಉಪಸ್ಥಿತರಿದ್ದ ಸಭೆಯಲ್ಲಿ ಪಾಲ್ಗೊಂಡಿದ್ದ ರಾಜ್ಯ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕೈಗೊಳ್ಳುವಂತೆ ಆಯೋಗ ಸೂಚಿಸಿದೆ ಎಂದು ಅವರು ಹೇಳಿದರು. ಮುಖ್ಯ ಚುನಾವಣಾ ಕಮಿಷನರ್‌ರ ಆದೇಶಗಳನ್ನು ಪಾಲಿಸದಿದ್ದರೆ ಚುನಾವಣೆಗಳು ಮತ್ತೊಮ್ಮೆ ಮುಂದಕ್ಕೆ ಹೋಗಬಹುದು ದೆಂದು ಅವರು ಎಚ್ಚರಿಕೆ ನೀಡಿದರು.

ಅವರು ಈ ಬಗ್ಗೆ ಸರಕಾರದಿಂದ ಹೇಳಿಕೆಯನ್ನು ಬಯಸಿದರು. ತ್ರಿಪುರಾ ವಿದ್ಯಮಾನಗಳು 'ಸಂವಿಧಾನ ಮತ್ತು ಜನರ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ನೇರ ಆಕ್ರಮಣ' ಎಂದು ಚಟರ್ಜಿ ವಿಶ್ಲೇಷಿಸಿದರು. ಇಂಥ ಸನ್ನಿವೇಶದಲ್ಲಿ ಚುನಾವಣೆಗಳು ಮುಕ್ತ ಹಾಗೂ ನ್ಯಾಯಸಮ್ಮತವಾಗಿರಬೇಕಾದರೆ ತ್ರಿಪುರಾದಲ್ಲಿ ರಾಷ್ಟ್ರಪತಿ ಆಡಳಿತ ಹೇರಿಕೆ ಅಗತ್ಯ ಎಂದು ಪ್ರತಿಪಾದಿಸಿದರು.

ಚುನಾವಣಾ ಆಯೋಗದಿಂದ ಛೀಮಾರಿಗೆ ಒಳಗಾದ ಒಂದು ಸರಕಾರ ಉಸ್ತುವಾರಿ ಸರಕಾರವಾಗಿ ಮುಂದುವರಿಯಲು ಅರ್ಹವಲ್ಲ ಎಂದು ಹೇಳಿದರು.

ಇದೇ ವಿಷಯದ ಬಗ್ಗೆ ರಾಜ್ಯಸಭೆಯಲ್ಲಿ ಸಿಪಿಐ(ಎಂ)ನ ಇ. ಬಾಲಾನಂದನ್ ಪ್ರಸ್ತಾಪಿಸಿ ತ್ರಿಪುರಾದಲ್ಲಿ ರಾಷ್ಟ್ರಪತಿ ಆಡಳಿತವನ್ನು ಹೇರಬೇಕಾದ ಅಗತ್ಯವನ್ನು ಒತ್ತಿಹೇಳಿದರು. ಕೇಂದ್ರ ಸಚಿವ ಸಂತೋಷ್‌ಮೋಹನ್ ದೇಬ್ ಕರೆದಿದ್ದ ಸಭೆಯಲ್ಲಿ ಭಾಗವಹಿಸಿದ್ದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಪಡಿಸಿದರು.

ಮಾರ್ಚ್ 2 ರಂದು ಲೋಕಸಭೆಯಲ್ಲಿ ದೂರದರ್ಶನಕ್ಕೆ ಸಂಬಂಧಿಸಿದಂತೆ ನಡೆದ ಚರ್ಚೆಯಲ್ಲಿ ಸಿಪಿಐ(ಎಂ)ನ ಮಾಲಿನಿ ಭಟ್ಟಾಚಾರ್ಯ ಭಾಗವಹಿಸಿದ್ದರು.

ಹಕ್ಕುಚ್ಯುತಿ

ರಾಜ್ಯ ಸಭೆಯಲ್ಲಿ ಸಿಪಿಐ(ಎಂ) ಸದಸ್ಯ ಎಂ.ಎ. ಬೇಬಿ ಸಚಿವ ಸಂತೋಷ್ ಮೋಹನ್ ದೇಬ್ ವಿರುದ್ಧ ಹಕ್ಕುಚ್ಯುತಿ ನೋಟಿಸನ್ನು ನೀಡಿದರು. ಸಚಿವ ದೇಬ್‌ರನ್ನು ಸದನಕ್ಕೆ ಕರೆಸುವಂತೆ ದೀಪೇನ್ ಘೋಷ್ ಮೊದಲಾದವರು ಒತ್ತಾಯಪಡಿಸಿದರು.

'ಸಚಿವ ದೇಬ್ ಸದನದಲ್ಲಿ ದಾಖಲೆಯೊಂದನ್ನು ಓದಿ ಹೇಳುವಾಗ ಸದನವು ತಪ್ಪು ಹಾದಿಗೆ ಎಳೆಯುದಿದ್ದಾರೆಯ. ಆದ್ದರಿಂದ ಅವರ ವಿರುದ್ಧ ಹಕ್ಕುಚ್ಯುತಿ ನೋಟೀಸ್ ನೀಡಿದ್ದೇನೆ' ಎಂದು ಎಂ.ಎ. ಬೇಬಿ ಹೇಳಿದರು.

ತ್ರಿಪುರಾದಲ್ಲಿನ ಸಂವಿಧಾನಿಕ ಬಿಕ್ಕಟ್ಟಿನ ಬಗ್ಗೆ ಗೃಹ ಸಚಿವರು ನೀಡಿದ ಹೇಳಿಕೆಯಿಂದ ತೃಪ್ತರಾಗದ ಎಡರಂಗ ಸದಸ್ಯರು ದೀಪೇನ್ ಘೋಷ್ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು.

ಮಾಚ್ 3 ರಂದು ವಿಷಯ ಪ್ರಸ್ತಾಪಕ್ಕೆ ಬಂದಾಗ, ತ್ರಿಪುರಾ ಸರಕಾರದಿಂದ ವರದಿ ಪಡೆಯಲು ಕೇಂದ್ರ ಸರಕಾರಕ್ಕೆ ಎಷ್ಟು ಸಮಯ ಬೇಕಾಗುತ್ತದೆ ಎಂದು ಸೋಮನಾಥ ಚಟರ್ಜಿ ಪ್ರಶ್ನಿಸಿದರು. ಚಟರ್ಜಿ ಅವರ ಬಳಿಕ ಜಸ್ವಂತ್‌ಸಿಂಗ್ (ಬಿ. ಜೆ.ಪಿ.) ಸರಕಾರ ಕೀಳು ರಾಜಕೀಯದಲ್ಲಿ ತೊಡಗಿದೆ ಎಂದು ಆರೋಪಿಸಿದರು.

ಇದಕ್ಕೂ ಮುಂಚೆ ಜನತಾದಳದ ಜಾರ್ಜ್ ಫರ್ನಾಂಡಿಸ್, ಆಳುವ ಪಕ್ಷ ಗೂಂಡಾ ಪ್ರವೃತ್ತಿ ತೋರುಗುತ್ತಿದ್ದು ಚುನಾವಣಾ ಆಯೋಗದಿಂದ ದೋಷಾರೋಪಣೆಗೆ ಒಳಗಾಗಿರುವ ಸಚಿವರನ್ನು ರಕ್ಷಿಸಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದರು. ಎಡಪಕ್ಷಗಳು, ಜನತಾದಳ ಮತ್ತು ಬಿ.ಜೆ.ಪಿ. ಫರ್ನಾಂಡಿಸರನ್ನು ಬೆಂಬಲಿಸಿದರು.

ಪ್ರೊ. ನಿರ್ಮಲ್ ಚಟರ್ಜಿ ಮತ್ತು ಅನಿಲ್ ಬಸು ಸಚಿವ ದೇಬ್ ಜತೆ ವಾಗ್ಯುದ್ಧ ನಡೆಸಿದರು.

ವಿಷಯವನ್ನು ಕೇಂದ್ರ ಸರಕಾರ ತುಂಬಾ ಲಘುವಾಗಿ ಪರಿಗಣಿಸುತ್ತಿದೆ ಎಂದು ಪಕ್ಷದ ನಾಯಕ ಸೋಮನಾಥ ಚಟರ್ಜಿ ಹೇಳಿದರು.

ಅಸೆಂಬ್ಲಿ ಅವಧಿ ಮುಕ್ತಾಯವಾಗಿರುವ ಬಗ್ಗೆ ರಾಜ್ಯಪಾಲರಿಂದ ಇನ್ನೂ ವರದಿ ಬರಬೇಕಾಗಿದೆಯಷ್ಟೆ ಎಂದು ಕಾನೂನು ಮತ್ತು ನ್ಯಾಯ ಖಾತೆ ಸಹಾಯಕ ಸಚಿವ ಎಚ್. ಆರ್. ಭಾರಧ್ವಾಜ್ ಹೇಳಿದ್ದನ್ನು ಎಡಪಕ್ಷಗಳ ಸದಸ್ಯರು ಬಲವಾಗಿ ಪ್ರತಿಭಟಿಸಿದರು.

ಸರಕಾರದ ಈ ನಿಲುವನ್ನು ಬಿ.ಜೆ.ಪಿ. ಕೂಡಾ ಮರುದಿನ ಲೋಕಸಭೆಯಲ್ಲಿ ಪ್ರತಿಭಟಿಸಿದ ಸ್ವಾರಸ್ಯಕರ ಪ್ರಕರಣ ನಡೆಯಿತು.

ಬರ ಪರಿಹಾರಕ್ಕೆ ಹೆಚ್ಚು ನೆರವು

ಹಲವು ರಾಜ್ಯಗಳಲ್ಲಿ ತೀವ್ರ ಬರಗಾಲ ಕಾಡುತ್ತಿದ್ದು ಹಸಿವೆಯಿಂದ ಜನರು ಸಾಯುವಂತಾಗಿದೆ. ಸಂಬಂಧಪಟ್ಟ ರಾಜ್ಯಗಳಿಗೆ ಪರಿಹಾರ ಕಾರ್ಯಗಳಿಗಾಗಿ ಕೇಂದ್ರ ಹೆಚ್ಚಿನ ನೆರವನ್ನು ಒದಗಿಸಬೇಕು ಎಂದು ಮಾರ್ಚ್ ಮೂರರಂದು ಲೋಕಸಭೆಯಲ್ಲಿ ಸಿಪಿಐ(ಎಂ)ನ ಶಿವಾಜಿ ಪಟ್ನಾಯಕ್ ಒತ್ತಾಯಿಸಿದರು.

ಮಾರ್ಚ್ 4 ರಾಷ್ಟ್ರಪತಿ ಭಾಷಣಕ್ಕೆ ವಂದನೆ ಸಲ್ಲಿಸುವ ಗೊತ್ತುವಳಿ ಮೇಲಿನ ಮುಂದುವರಿದ ಚರ್ಚೆಯಲ್ಲಿ ಪಾಲ್ಗೊಂಡ ಬಿ.ಜೆ.ಪಿ.ಯೇತರ ಪ್ರತಿಪಕ್ಷಗಳ ಸದಸ್ಯರು ಬಿ.ಜೆ.ಪಿ. ದೇಶವನ್ನು ಧರ್ಮ ಮತ್ತು ಜನಾಂಗದ ಆಧಾರದಲ್ಲಿ ವಿಭಜಿಸಲು ಯತ್ನಿಸುತ್ತಿದೆ ಎಂದು ಹೇಳಿದರು.

ಕಳೆದ ವರ್ಷ ಡಿಸೆಂಬರ್ ಆರರಂದು ಅಯೋಧ್ಯೆಯಲ್ಲಿ ನಡೆದ ಘಟನೆಯಿಂದು ಭಾರತಕ್ಕೆ ಜಾಗತಿಕ ಮಟ್ಟದಲ್ಲಿ ಅವಮಾನವಾಯಿತು ಎಂದು ಎಂದು ಸಿಪಿಐ(ಎಂ) ನಾಯಕ ಸೋಮನಾಥ ಚಟರ್ಜಿ ಹೇಳಿದರು.

ತನ್ನ ಜನವಿರೋಧಿ ನೀತಿಗಳಿಗೆ ಬಿ.ಜೆ.ಪಿ.ಯ ಬೆಂಬಲ ಪಡೆಯುವ ಉದ್ದೇಶದಿಂದ ನರಸಿಂಹ ರಾವ್ ಸರಕಾರ ಬಿ.ಜೆ.ಪಿ.ಯೊಂದಿಗೆ ರಾಜಿ ಮಾಡಿಕೊಳ್ಳುತ್ತಿದೆ ಎಂದು ಚಟರ್ಜಿ ಆರೋಪಿಸಿದರು.

ಮೂಲಭೂತವಾದಿಗಳ ತಂಡ

ಭಾರತೀಯ ಜನತಾಪಕ್ಷ ಮೂಲಭೂತವಾದಿಗಳ ಒಂದು ತಂಡವಾಗಿದೆ ಎಂದು ಸಿಪಿಐ(ಎಂ) ನಾಯಕ ವರ್ಣಿಸಿದರು. 'ಹುಸಿ ಸಾಧುಗಳ' ನೆರವಿನಿಂದ ಅಧಿಕಾರಕ್ಕೆ ಬರಲಿಕ್ಕಾಗಿ ಅದು ದೇಶವನ್ನು ಧರ್ಮ ಮತ್ತು ಜನಾಂಗಗಳ ಆಧಾರದಲ್ಲಿ ಒಡೆಯಲು ಹವಣಿಸುತ್ತಿದೆ ಎಂದರು.

ಪ್ರಸಕ್ತ ಕೇಂದ್ರ ಸರಕಾರಕ್ಕೆ ತನ್ನದೇ ಆದ ನಿಲುವು ಎಂಬುದಿಲ್ಲ. 'ತಾತ್ಕಾಲಿಕ ನೆಲೆ'ಯಲ್ಲಿ ಅದು ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದ ಚಟರ್ಜಿ, ಮೂಲಭೂತ ವಿಚಾರಗಳಲ್ಲಿ ಕೂಡಾ ಅದು 'ಸರಿಯಾದ ನಿರ್ಧಾರ' ತೆಗೆದುಕೊಳ್ಳುವುದಿಲ್ಲ ಹಾಗೂ ಕಾಲಹರಣ ಮಾಡುತ್ತಿದೆ ಎಂದರು.

ಸರಕಾರ ದೇಶದ ಆರ್ಥಿಕ ಸಾರ್ವಭೌಮತ್ವವನ್ನು ಸಾಲ ನೀಡುವ ಅಂತರರಾಷ್ಟ್ರೀಯ ಸಂಸ್ಥೆಗಳಿಗೆ ಒತ್ತೆಯಿಟ್ಟಿದೆ ಎಂದರು. ಕೋಟ್ಯಂತರ ಜನರ ಮೇಲೆ ಕೆಟ್ಟ ಪರಿಣಾಮ ಬೀರುವ ಆರ್ಥಿಕ ನೀತಿಯನ್ನು ವಾಪಸು ಪಡೆಯಲು ಸರಕಾರಕ್ಕೆ ಇನ್ನು ಅವಕಾಶವಿದೆ ಎಂದು ಹೇಳಿದರು.

ಪ್ರಧಾನಿ ಪುತ್ರನಿಗೆ ಷೇರು ಹಗರಣ ಹಣ

ಪ್ರಧಾನಿ ಪುತ್ರ ಪ್ರಭಾಕರ ರಾವ್‌ಗೆ ಸೇರಿದ ಕಂಪೆನಿಯೊಂದಕ್ಕೆ ಷೇರು ಹಗರಣದ ಹಣ ಪಾವತಿಯಾಗಿದೆಯೆಂಬ ವಿಚಾರ ಸಂಸತ್ತಿನಲ್ಲಿ ಭಾರೀ ಗದ್ದಲಕ್ಕೆ ಕಾರಣವಾಗಿದೆ. ಪತ್ರಿಕಾ ವರದಿಗಳು ಈ ಸುದ್ದಿಯ ಮೂಲಗಳು.

ಪತ್ರಿಕಾ ವರದಿಗಳು ವಿವಾದವನ್ನು ಪ್ರಸ್ತಾಪಿಸಲು ಆಧಾರವಾಗಲಾರದು ಎಂಬುದು ಸಚಿವೆ ಮಾರ್ಗರೆಟ್ ಆಳ್ವಾ ಅವರ ವಾದವಾಗಿತ್ತು.

ಇದನ್ನು ರಾಜ್ಯಸಭೆಯಲ್ಲಿ ಸಿಪಿಐ(ಎಂ) ನಾಯಕ ದಿಪೇನ್ ಘೋಷ್ ಸಕಾರಣವಾಗಿ ವಿರೋಧಿಸಿದರು.

ಷೇರು ಹಗರಣದ ತನಿಖೆಗಾಗಿ ನೇಮಕವಾಗಿರುವ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಯಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೇನೆ ಆದರೆ ಜೆ.ಪಿ.ಸಿ.ಯನ್ನು ಸಂಸತ್ತಿಗೆ ಪರ್ಯಾಯವಾಗಿ ಪರಿಗಣಿಸಬಾರದು ಎಂದು ಅವರು ಹೇಳಿದರು.

ಹಿಂದೆ ಹಲವು ಬಾರಿ ಅಂತುಲೆ ಪ್ರಕರಣ ಮತ್ತು ಬೊಫೋರ್ಸ್ ಪ್ರಕರಣ ಸೇರಿದಂತೆ ಹಲವು ವಿಚಾರಗಳನ್ನು ಪತ್ರಿಕಾ ವರದಿಗಳ ಆಧಾರದಲ್ಲಿ ಪ್ರಸ್ತಾಪಿಸಲಾಗಿತ್ತು. ಪ್ರಧಾನಿ ಪುತ್ರನಿಗೆ ಸಂಬಂಧಿಸಿದ ಪತ್ರಿಕಾ ವರದಿ ಸುಳ್ಳು ಎಂಬುದು ಸಚಿವೆಯ ಅಭಿಪ್ರಾಯವಾದರೆ ಅವರು (ಸಚಿವೆ) ಪತ್ರಿಕೆ ವಿರುದ್ಧ ಹಕ್ಕುಚ್ಯುತಿ ಗೊತ್ತುವಳಿ ತರಲಿ ಎಂದು ಘೋಷ್ ಸವಾಲು ಹಾಕಿದರು.

ಭಾರತ ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಪರವಾಗಿ ಮುದ್ರಣ ಮತ್ತು ಪ್ರಕಾಶಕ ವಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: 12, 18ನೇ ಅಡ್ಡರಸ್ತೆ, ತಾನಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು - 560 027, ಫೋನ್: 236462 ಸಂಪಾದಕರು: ವಿ.ರಾಮಚಂದ್ರರಾವ್